ಚನ್ನೇಶ್ ಕುಂಬಾರ್‌ರ

ಉರಿಯ ನಾಲಿಗೆಯ ಮೇಲೆ

ಕಥಾ ಸಂಕಲನದ ವಿಮರ್ಶೆ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಸಂಪ್ರಬಂಧ)

ಸಂಶೋಧಕರು
ಶ್ರೀ. ಧರಮಣ್ಣಾ ಪ. ಕಾಂಬಳೆ
ಅತಿಥಿ ಉಪನ್ಯಾಸಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು,
ರಬಕವಿ - ಬನಹಟ್ಟಿ.

ಮಾರ್ಗದರ್ಶಕರು
ಡಾ. ಜಿ. ಬಿ. ಪಾಟೀಲ
ಪ್ರಾಚಾರ್ಯರು,
ಕೆ.ಎಲ್.ಇ. ಸಂಸ್ಥೆಯ
ಎಸ್.ಸಿ.ಪಿ. ಕಲಾ ಮತ್ತು ಡಿ.ಡಿ.ಎಸ್. ವಾಣಿಜ್ಯ ಮಹಾವಿದ್ಯಾಲಯ,
ಮಹಾಲಿಂಗಪುರ.

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ, ಜಿ. ಬೆಳಗಾವಿ
ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೦೧೨

ಕಲ್ಲೇಶ್ ಕುಂಬಾರ್‌ರ

ಉರಿಯ ನಾಲಿಗೆಯ ಮೇಲೆ

ಕಥಾ ಸಂಕಲನದ ವಿಮರ್ಶೆ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು

ಶ್ರೀ ಧರಮಣ್ಣಾ ಭ. ಕಾಂಬಳೆ

ಅತಿಥಿ ಉಪನ್ಯಾಸಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು,
ರಬಕವಿ - ಬನಹಟ್ಟಿ.

ಮಾರ್ಗದರ್ಶಕರು

ಡಾ. ಬಿ. ಎಂ. ಪಾಟೀಲ

ಪ್ರಾಚಾರ್ಯರು,
ಕೆ.ಎಲ್.ಇ. ಸಂಸ್ಥೆಯ
ಎಸ್.ಸಿ.ಪಿ. ಕಲಾ ಮತ್ತು ಡಿ.ಡಿ.ಎಸ್. ವಾಣಿಜ್ಯ ಮಹಾವಿದ್ಯಾಲಯ,
ಮಹಾಲಿಂಗಪೂರ.

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೨

ಪ್ರಮಾಣ ಪತ್ರ

ಕಲ್ಲೇಶ್ ಕುಂಬಾರ್‌ರ **'ಉರಿಯ ನಾಲಗೆಯ ಮೇಲೆ'** ಕಥಾ ಸಂಕಲನದ ವಿಮರ್ಶೆ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ಡಾ. ಬಿ. ಎಂ. ಪಾಟೀಲ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೦೮-೦೬-೨೦೧೨

ಶ್ರೀ ಧರಮಣ್ಣಾ ಭ. ಕಾಂಬಳೆ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ದೃಢೀಕರಣ ಪತ್ರ

ಶ್ರೀ ಧರಮಣ್ಣಾ ಭ. ಕಾಂಬಳೆ ಇವರು ಕಲ್ಲೇಶ್ ಕುಂಬಾರ್‌ರ **'ಉರಿಯ ನಾಲಗೆಯ ಮೇಲೆ'** ಕಥಾ ಸಂಕಲನದ ವಿಮರ್ಶೆ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ **ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೦೮-೦೬-೨೦೧೨

ಡಾ. ಬಿ. ಎಂ. ಪಾಟೀಲ
ಪ್ರಾಚಾರ್ಯರು,
ಕೆ.ಎಲ್.ಇ. ಸಂಸ್ಥೆಯ
ಎಸ್.ಸಿ.ಪಿ. ಕಲಾ ಹಾಗೂ ಡಿ.ಡಿ.ಎಸ್.
ವಾಣಿಜ್ಯ ಮಹಾವಿದ್ಯಾಲಯ,
ಮಹಾಲಿಂಗಪೂರ.

• ಅರಿಕೆ •

ಗ್ರಾಮೀಣ ಪ್ರದೇಶದ ಬಡಕುಟುಂಬದಲ್ಲಿ ಹುಟ್ಟಿದ ನನಗೆ ಉನ್ನತ ಶಿಕ್ಷಣ ಎಂಬುದು ಮರಿಚಿಕ್ಕೆ ಎಂಬುವ ಸಂದರ್ಭದಲ್ಲಿ ನನ್ನ ಗುರುಗಳಾದ ಡಾ॥ ವ್ಹಿ. ಎಸ್. ಮಾಳಿಯವರು ನನಗೆ ಧೈರ್ಯ ತುಂಬಿ ನನಗೆ ಸಂಶೋಧನೆಯಲ್ಲಿ ತೊಡಗಲು ಅನುಮಾಡಿಕೊಟ್ಟು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗೆ ವಿಷಯ ಆಯ್ಕೆ ಮಾಡಿಕೊಟ್ಟು ಸಲಹೆ ನೀಡಿದರು. ಅವರಿಗೆ ನಾನು ಕೃತಜ್ಞನಾಗಿರುತ್ತೇನೆ. ಹಾಗೂ ನನ್ನ ಎಂ.ಫಿಲ್ ಪದವಿ ವಿಷಯ ಕಲ್ಲೇಶ್ ಕುಂಬಾರ್‌ರ 'ಉರಿಯ ನಾಲಿಗೆಯ ಮೇಲೆ' ಕಥಾ ಸಂಕಲನದ ವಿಮರ್ಶೆ ಈ ವಿಷಯಕ್ಕೆ ನನಗೆ ಮಾರ್ಗದರ್ಶಕರಾದ ಕೆ.ಎಲ್.ಇ. ಸಂಸ್ಥೆಯ ಮಹಾವಿದ್ಯಾಲಯ, ಮಹಾಲಿಂಗಪೂರದ ಆದರಣೀಯ ಪ್ರಾಚಾರ್ಯರಾದ ಡಾ॥ ಬಿ. ಎಂ. ಪಾಟೀಲರವರು ನನಗೆ ಒಳ್ಳೆಯ ರೀತಿಯಿಂದ ಅವರ ಎಲ್ಲಾ ಅನುಭವಗಳನ್ನು ಧಾರೆ ಎರೆದು ಮಾರ್ಗದರ್ಶನ ನೀಡಿದ ಅವರಿಗೆ ನಾನು ಚಿರಋಣಿಯಾಗಿರುತ್ತೇನೆ.

ನನ್ನ ಸಂಶೋಧನೆಗೆ ಅನೇಕ ರೀತಿಯಿಂದ ಸಹಾಯ ನಿಡಿದ ಶ್ರೀಯುತ ಟಿ. ಎ. ಪಾಟೀಲರವರಿಗೂ ಹಾಗೂ ಸರಕಾರಿ ಪ್ರಥಮ ದರ್ಜೆಯ ಕಾಲೇಜು, ರಬಕವಿ-ಬನಹಟ್ಟಿಯ ಆದರಣೀಯ ಪ್ರಾಧ್ಯಾಪಕ ಸಿಬ್ಬಂದಿಗಳಾದ ಪ್ರೊ. ಎನ್. ಎಲ್. ತೇರದಾಳ, ಡಾ॥ ಸುನಂದಾ ಶಿರೂರ, ಪ್ರೊ. ಎಸ್. ಎಲ್. ಅರಬಳ್ಳಿ, ಪ್ರೊ. ಎಸ್. ಪಿ. ಹಳಿಂಗಳಿ, ಪ್ರೊ. ದಯಾನಂದ ಲಾಲಸಿಂಗ್, ಡಾ॥ ಸದಾಶಿವ ಸಜ್ಜನ, ಪ್ರೊ. ಜಿ. ಆರ್. ನಟರಾಜ, ಪ್ರೊ. ಎಂ. ಯು. ಕುಡಚಿ, ಪ್ರೊ. ರಾಘವ ನಾಯಕ, ಪ್ರೊ. ಪ್ರಭು ಮಾಸ್ತಿ, ಪ್ರೊ. ಜ್ಯೋತಿ ಪಮ್ಮಣ್ಣವರ, ಪ್ರೊ. ರವೀಂದ್ರ ಹಾರೂಗೇರಿ, ಡಾ॥ ಎಸ್. ಡಿ. ಸರಿಕರ, ಪ್ರೊ. ವ್ಹಿ. ಎಮ್. ಘಟ್ಟಿ, ಪ್ರೊ. ಡಿ. ಬಿ. ಚನ್ನಪ್ಪಗೋಳ, ಪ್ರೊ. ಅನಿತಾ ಕೋಲಾರ, ಪ್ರೊ. ವ್ಹಿ. ಬಿ. ಕುಲಕರ್ಣಿ ಹಾಗೂ ಶ್ರೀ ದಿನೇಶ ದೊಡಮನಿ ಈ ಎಲ್ಲಾ ಸಿಬ್ಬಂದಿ ವರ್ಗದ ಸಹಾಯಕ್ಕೆ ಕೃತಜ್ಞನಾಗಿರುತ್ತೇನೆ. ಈ ಸಂದರ್ಭದಲ್ಲಿ ನನ್ನ ಜೀವನಕ್ಕೆ ಒಂದು ಹೊಸ ತಿರುವನ್ನು ನೀಡಿದ ಬನಹಟ್ಟಿಯ ಖಜಾನಾ ಅಧಿಕಾರಿಗಳಾದ ಶ್ರೀ ಎಸ್. ಎಲ್. ಬೆಳಂಕಿ ಅವರ ಸಹಾಯಕ್ಕೆ ಎಂದೆಂದಿಗೂ ಚಿರಋಣಿಯಾಗಿರುತ್ತೇನೆ.

ನನ್ನ ಶಿಕ್ಷಣ ಕ್ಷೇತ್ರದಲ್ಲಿ ಸಹಾಯ ನೀಡಿದ ಎಲ್ಲಾ ನನ್ನ ಸ್ನೇಹಿತ ವರ್ಗದವರಿಗೂ ಕೃತಜ್ಞತೆಗಳು. ನನಗೆ ಜೀವ ಕೊಟ್ಟ ನನ್ನ ತಂದೆ-ತಾಯಿಯವರಿಗೂ ನಾನು ಎಂದೆಂದಿಗೂ ಚಿರಋಣಿಯಾಗಿರುತ್ತೇನೆ.

ವೃಷಬೇಂದ್ರ ಕಾಲೇಜಿನ ಸಿಬ್ಬಂದಿ ವರ್ಗದವರಿಗೆ ಹಾಗೂ ಸಂಶೋಧನಾ ಕೇಂದ್ರದ ರೂವಾರಿ ಶ್ರೀ ಬಿ. ಆರ್. ದರೂರ ಅವರನ್ನು ಸದಾಕಾಲವು ಸ್ಮರಿಸುವೆನು. ಅದರಂತೆ ಪ್ರಬಂಧವನ್ನು ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿದ ನನ್ನ ಸ್ನೇಹಿತರಾದ ಮುರಗೇಶ ಕೌಲಾಪೂರ ಅವರಿಗೆ ವಂದನೆಗಳು.

ಸ್ಥಳ : ತಮದಡ್ಡಿ
ದಿನಾಂಕ : ೦೮-೦೬-೨೦೧೨

ಶ್ರೀ ಧರಮಣ್ಣಾ ಭ. ಕಾಂಬಳೆ
ಅತಿಥಿ ಉಪನ್ಯಾಸಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು,
ರಬಕವಿ-ಬನಹಟ್ಟಿ.



ಲೇಖಕರು : ಕಲ್ಲೇಶ್ ಕುಂಬಾರ್

• ಪರಿವಿಡಿ •

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಶಿಕ್ಷಣ ಕ್ಷೇತ್ರದಲ್ಲಿ ಇಂದು ತೀವ್ರಗತಿಯ ಬದಲಾವಣೆಗಳಾಗುತ್ತಿವೆ. ಒಂದೆಡೆ ವೃತ್ತಿಪರ ಕೋರ್ಸುಗಳಿಗೆ ಹೆಚ್ಚಿನ ಒಲವು ಕಂಡು ಬರುತ್ತಿದ್ದರೆ ಇನ್ನೊಂದೆಡೆ ಪಾರಂಪರಿಕ ವಿಷಯಗಳಿಗೆ ಆಧ್ಯತೆ ಕಡಿಮೆಯಾಗುತ್ತಿದೆ. ಅದರಲ್ಲೂ ಜಾನಪದ ಕಲೆ, ಕಥೆ, ಕಾದಂಬರಿ, ಆಟ, ನಾಟಕ, ಕ್ರೀಡೆ **ಇಂಥ ಕಲೆಗಳನ್ನು ಮರೆಯುತ್ತಿದ್ದಾನೆ. 'ಜ್ಞಾನಕ್ಕಾಗಿ ಶಿಕ್ಷಣ'** ಎಂಬ ಮಾತು ಹಿಂದೆ ಸರಿದು **'ಹುದ್ದೆಗಾಗಿ ಶಿಕ್ಷಣ'** ವೆಂಬ ಮಾತು ಇಂದು ಹೆಚ್ಚಾಗಿ ಕೇಳಿ ಬರುತ್ತಿದೆ. ಇದರಿಂದ ಸಮಾಜದಲ್ಲಿ ಹಲವು ಸಮಸ್ಯೆಗಳು ಉದ್ಭವವಾಗಿವೆ.

ಕಥೆಯ ಹಿಂದಿನ ಕಲೆಯನ್ನು ನೋಡುವುದಾದರೆ ಮನುಷ್ಯ ಕಥೆ ಹೇಳುವ ಒತ್ತಡದಲ್ಲೇ ಭಾಷೆ ಹುಟ್ಟಿತು. ಹಲವಾರು ಜನಾಂಗಗಳು, ಹಲವಾರು ಸಮುದಾಯಗಳು, ಅನೇಕ ಭಾಷೆಗಳು, ಅನೇಕ ಸಮಾಜಗಳು ಉದಯವಾದವು. ಮನುಷ್ಯನಯ ಬೆಳೆಯಲು ಹಾಗೂ ಸಮಾಜ ಉಳಿಯಲು ಧಾರಣ ಶಕ್ತಿ ಬೇಕು. ಮತ್ತೆ ಕಥೆ ಕೈ ಹಿಡಿಯಿತು. ಸಮಾಜದ ಉಳಿವಿಗೆ ಅಗತ್ಯವಿರುವ ಆದರ್ಶ ಮೌಲ್ಯ, ನೀತಿ, ಮಾರ್ಗದರ್ಶನಗಳನ್ನು ನೀಡಲು ಕಥೆಗಳು ಹೆಣೆಯಲ್ಪಟ್ಟವು. ಅಲ್ಲಿ ರಾಜ–ರಾಣಿಯರಿದ್ದರು. "ಅಸಹಾಯಕ ಜನ ಸಮುದಾಯವಿತ್ತು. ದೇವರು, ದೆವ್ವ, ಭೂತ, ರಾಕ್ಷಸ, ಬೇತಾಳಗಳಿದ್ದವು. ಮಾಟಮಂತ್ರ ತಂತ್ರಗಳಿದ್ದವು. ಸ್ವರ್ಗ, ನರಕ, ಪಾಪ, ಪುಣ್ಯಗಳಿದ್ದವು. ಹೀಗೆ ಸಮುದಾಯದ ಒಳಿತನ್ನು ಹಾರೈಸುತ್ತ ಕಥೆಗಳು ಹುಟ್ಟಿದವು. ಡಾ|| ಪ್ರಹ್ಲಾದ ಅಗಸನಕಟ್ಟೆಯ ಈ ಎಲ್ಲಾ ಕಥೆಗಳ ಬಗ್ಗೆ ವಿವರಿಸಿದ್ದಾರೆ"[೧].

೧.೧ ಅಧ್ಯಯನದ ಉದ್ದೇಶ :

ಇಂದಿನ ಆಧುನಿಕ ಜಗತ್ತಿನಲ್ಲಿ ಗಣಕ ತಂತ್ರಜ್ಞಾನಕ್ಕೆ ಹೆಚ್ಚಿನ ಆಧ್ಯತೆ ನೀಡಿ ಜಾನಪದ ಕಲೆಗಳನ್ನು ಮರೆಯುತ್ತಿದ್ದಾನೆ. ಅದಕ್ಕಾಗಿ ಆಧುನಿಕ ಕಾಲದಲ್ಲಿ ಯುವಕರಿಗೆ ಜಾನಪದ ಕಲೆಯನ್ನು, ಅವುಗಳ ಸೊಗಡನ್ನು ತಿಳಿಸುವುದೇ ಈ ಅಧ್ಯಯನದ ಮುಖ್ಯ ಉದ್ದೇಶವಾಗಿರುವುದು. ಅದರ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿರುವಂತೆ ಕಲೆಗಳನ್ನು ಮತ್ತು ಕಲೆಗಾರರನ್ನು ಸೆಳೆಯುವುದು. ಅಲ್ಲದೇ ಎಷ್ಟೋ ಕಲೆ ಮತ್ತು ಕಲೆಗಾರರು ಬೆಳಕಿಗೆ ಬರದೆ ನಶಿಸಿ ಹೊರಟಿವೆ. ಅವುಗಳನ್ನು ಗುರುತಿಸಿ ಅವುಗಳಿಗೆ ಹೊಸ ರೂಪನ್ನು ಕೊಡುವುದಾಗಿದೆ.

---

೧. ಡಾ|| ಪ್ರಹ್ಲಾದ ಅಗಸನಕಟ್ಟೆ : ಉರಿಯ ನಾಲಿಗೆಯ ಮೇಲೆ" : (ಮುನ್ನುಡಿಯಿಂದ) ಪುಟ ಸಂಖ್ಯೆ : ೧೧

"ಭೂಮಾಲಿಕತ್ವ ವ್ಯವಸ್ಥೆಯ ಅನುಷಂಗಿಕ ಗುಣಗಳಾದ – ಶೋಷಣೆ, ಕ್ರೌರ್ಯ, ದಬ್ಬಾಳಿಕೆ, ಗೌಡ–ಆಳುಗಳೆಂಬ ಅಸಮಾನ ಶ್ರೇಣಿ, ಅಕ್ರಮ ಲೈಂಗಿಕ ಸಂಬಂಧ ಕ್ರೌದ ಮುಂತಾದವುಗಳನ್ನು ಈ ಕಥೆಗಳು ತಿಳಿಸುತ್ತವೆ. ಹಳ್ಳಿಗಳಲ್ಲಿ ಕಥೆಗಳಿಗೆ ಹೆಚ್ಚಿನ ಆಧ್ಯತೆಯನ್ನು ನೀಡುತ್ತಿದ್ದರು. ಆದರೆ ಇಂದಿನ ಮುಂದುವರೆಯುತ್ತಿರುವ ಜಗತ್ತಿನಲ್ಲಿ ಅಂತಹ ಕಥೆಗಳನ್ನು ಮರೆತು ತನ್ನ ಏಳಿಗೆಗಾಗಿ ಮನುಷ್ಯ ದುಡಿಯುತ್ತಿದ್ದಾನೆ"[೨]. ಅಂತಹ ಕಥೆಗಳನ್ನು **'ವಿಮರ್ಶಿಸಿ'** ಅವುಗಳಿಗೆ ಹೊಸ ರೂಪನ್ನು ನೀಡುವುದು ಮತ್ತು ಇಂತಹ ಕಥೆಗಳ ಜೊತೆಗೆ ಕಥೆಗಾರರನ್ನು ಗುರುತಿಸಿ ಅವರನ್ನು ಈ ಹೊರ ಜಗತ್ತಿಗೆ ತೋರಿಸುವುದೇ ಈ ಒಂದು ಅಧ್ಯಯನದ ಮುಖ್ಯ ಉದ್ದೇಶವಾಗಿರುವುದು.

೧.೨ ಅಧ್ಯಯನದ ಸ್ವರೂಪ :

ಪ್ರಸ್ತುತ ಅಧ್ಯಯನವು ಒಟ್ಟು ನಾಲ್ಕು ಅಧ್ಯಾಯಗಳನ್ನು ಒಳಗೊಂಡಿದೆ. ಈ ಅಧ್ಯಾಯದಲ್ಲಿ ಲೇಖಕರ ಪರಿಚಯ, ಅವರ ಬಾಲ್ಯ, ಶಿಕ್ಷಣ, ಅವರ ಜೀವನ ಅಲ್ಲದೇ 'ಉರಿಯ ನಾಲಿಗೆ ಮೇಲೆ' ಎಂಬ ಕೃತಿಯಲ್ಲಿ ಬರುವ ಒಟ್ಟು ಒಂಬತ್ತು ಕಥೆಗಳ ವಿಮರ್ಶೆಯ ಜೊತೆಗೆ ಗ್ರಾಮೀಣ ಜನರ ಜೀವನ ಬಗ್ಗೆ ಅಲ್ಲಿ ನಡೆಯುವ ಚಟುವಟಿಕೆ, ಮಾನವೀಯ ಮೌಲ್ಯ ಮುಂತಾದವುಗಳನ್ನು ಕ್ರೂಡಿಕರಿಸಲು ಯತ್ನಿಸಲಾಗಿದೆ.

ಮೊದಲನೆಯ ಅಧ್ಯಾಯ ಈ ಮಹಾ ಪ್ರಬಂಧದ ಪ್ರವೇಶಿಕೆ. ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ಸ್ವರೂಪವನ್ನು ನಿವೇದಿಸಿ, ವ್ಯಾಪ್ತಿಯನ್ನು ಸೂಚಿಸಲಾಗಿದೆ. ಅದು ಅಲ್ಲದೇ ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ವೈಧಾನಿಕತೆಯನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಈ ಕೃತಿಯ ಲೇಖಕರ ಬದುಕು ಬರಹವೆಂದು ಗುರುತಿಸಲಾಗಿದೆ. ಇದರಲ್ಲಿ ಲೇಖಕ **ಕಲ್ಲೇಶ್ ಕುಂಬಾರ್**ರ ಬಾಲ್ಯ, ಶಿಕ್ಷಣ, ಜೀವನ, ವಿವಾಹ, ಕೌಟುಂಬಿಕ ವಿವರಣೆ, ಅವರ ತಂದೆ – ತಾಯಿಗಳ ಮುಂತಾದವುಗಳನ್ನು ಇಲ್ಲಿ ಚಿತ್ರಿಸಲಾಗಿದೆ. ನಂತರ ಲೇಖಕರ ಕೃತಿಗಳನ್ನು ಕೂಡಾ ಇಲ್ಲಿ ಗುರುತಿಸಲಾಗಿದೆ. ಹಾಗೂ ಲೇಖಕರಿಗೆ ಒಲಿದು ಬಂದಿರುವ ಪ್ರಶಸ್ತಿಗಳನ್ನು ಸಹ ಈ ಅಧ್ಯಾಯಹಲ್ಲಿ ತಿಳಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಈ ಮಹಾ ಪ್ರಬಂಧದ ಮುಖ್ಯ ಘಟ್ಟವೆಂದು ತಿಳಿಯಬಹುದು. ಈ ಅಧ್ಯಾಯದಲ್ಲಿ **'ಉರಿಯ ನಾಲಿಗೆ ಮೇಲೆ'** ಎಂಬ ಕೃತಿಯಲ್ಲಿ ಬರುವ ಒಂಬತ್ತು ಕಥೆಗಳನ್ನು ವಿಮರ್ಶೆಯನ್ನು ಮಾಡಲಾಗಿದೆ. ಈ ಒಂಬತ್ತು ಕಥೆಯಲ್ಲಿ ಬಂದಿರುವ ಲೋಪ–ದೋಷಗಳನ್ನು ಒಳ್ಳೆಯ ಗುಣಗಳನ್ನು ಎತ್ತಿ ತೋರಿಸಲಾಗಿದೆ. ಅದು ಅಲ್ಲದೇ ಈ ಕಥೆಗಳಿಂದ ಯಾವ ಸಂದೇಶ

೨. ಡಾ॥ ಪ್ರಹ್ಲಾದ ಅಗಸನಕಟ್ಟೆ : ಉರಿಯ ನಾಲಿಗೆಯ ಮೇಲೆ" : (ಮುನ್ನುಡಿಯಿಂದ) ಪುಟ ಸಂಖ್ಯೆ : ೧೨

ತಿಳಿದು ಬರುತ್ತದೆ ಎಂಬುದನ್ನು ಸಹ ತಿಳಿಸಲಾಗಿರುವುದು. ಒಟ್ಟು ಈ ಕೃತಿಯ ವಿಮರ್ಶೆಯನ್ನು ಈ ಅಧ್ಯಾಯದಲ್ಲಿ ಹೊಂದಿರುವುದು.

ಕೊನೆಯ ಅಧ್ಯಾಯವೇ ಸಮಾರೋಪ. ಈ ಅಧ್ಯಯನದ ಒಟ್ಟು ಫಲಿತಾಂಶಗಳನ್ನು ಸಂಕ್ಷಿಪ್ತವಾಗಿಯೂ – ಸಮಗ್ರಹವಾಗಿಯೂ ಇಲ್ಲಿ ದಾಖಲಿಸಿ ಅಧ್ಯಯನದ ಹೊಸ ಹೊಸ ಕ್ಷೇತ್ರಗಳನ್ನು ಸೂಚಿಸಲಾಗಿದೆ. ಇದು ಈ ಮಹಾ ಪ್ರಬಂಧದ ಸ್ಥೂಲ ಸ್ವರೂಪವಾಗಿ ವಿವಿಧ ಸಂಗ್ರಹ ರೂಪವಾಗಿ ವಿವೇಚಿಸಿ ಸಮಾರೋಪಗೊಳಿಸಲಾಗುವುದು.

೧.೩ ಅಧ್ಯಯನದ ವ್ಯಾಪ್ತಿ :

ಈ ಅಧ್ಯಯನವು **ಕಲ್ಲೇಶ್ ಕುಂಬಾರ್**ರ ಬರೆದಿರುವ **'ಉರಿಂಯ ನಾಲಿಗೆಂಯ ಮೇಲೆ'** ಎಂಬ ಕೃತಿಯಲ್ಲಿ ಬರುವ ಒಂಬತ್ತು ಕಥೆಗಳ ವಿಮರ್ಶೆಯ ಜೊತೆಗೆ ಈ ಕಥೆಗಳಲ್ಲಿ ಕಂಡು ಬರುವ ಹಾರೂಗೇರಿ ಗ್ರಾಮ ಮತ್ತು ಅದರ ಸುತ್ತಮುತ್ತಲಿನ ಕಂಡುಬರುವ ಕೆಲವು ಗ್ರಾಮಗಳ ವ್ಯಾಪ್ತಿಯನ್ನು ಈ ಅಧ್ಯಯನವು ಹೊಂದಿರುವುದು. ಈ ಗ್ರಾಮಗಳಲ್ಲಿ ನಡೆಯುವ ಅನೇಕ ಸನ್ನಿವೇಶಗಳನ್ನು ಗುರುತಿಸಿ ಕ್ಷೇತ್ರ ಕಾರ್ಯವನ್ನು ಕೈಗೊಂಡು ಈ ಕಥೆಗಳಿಗೂ ಮತ್ತು ಆ ಗ್ರಾಮಗಳಲ್ಲಿ ನಡೆಯುವ ಸನ್ನಿವೇಶಗಳಿಗೂ ಹೋಲಿಕೆ ಮಾಡಿ, ಅದರ ಸತ್ಯಾಸತ್ಯತೆಯನ್ನು ಹೊರಗೆಡುವುದು. ಅದರ ಜೊತೆಗೆ ಅನೇಕ ವಿಮರ್ಶಾ ಕೃತಿಗಳನ್ನು ವಿಮರ್ಶಾ ಲೇಖಕರನ್ನು ಪರಿಚಯಿಸಿಕೊಂಡು ಅಂತಹ ಲೇಖಕರ ಸಲಹೆ ಪಡೆದುಕೊಂಡು, ಅಂತಹ ವಿಮರ್ಶೆ ಕೃತಿಗಳನ್ನು ಓದಿಕೊಂಡು ಈ ಅಧ್ಯಯನದ ವ್ಯಾಪ್ತಿಗೆ ಅಳವಡಿಸಿಕೊಳ್ಳುವುದು. ಈ ಕಥೆಗಳನ್ನು ನೋಡಿದರೆ ಉರಿಯುವ ಗುಣಗಳನ್ನು ಹೊಂದಿರುವ ಮತ್ತು ಬಂಡಾಯಮಯವಾಗಿ ಕಾಣಿಸುತ್ತದೆ.

೧.೪ ವೈಧಾನಿಕತೆ :

ಇದು ಅನೇಕ ವಿಮರ್ಶೆ ಕೃತಿಗಳನ್ನು ಮತ್ತು ಅನೇಕ ವಿಮರ್ಶಾ ಲೇಖಕರನ್ನು ಪರಿಚಯಿಸಿಕೊಂಡು ನಡೆಸುವ ಅಧ್ಯಯನವಾಗಿದೆ. ಇದಕ್ಕೆ ಹೊರಗಿನ ಯಾವುದೆ ವೈಧಾನಿಕತೆಯನ್ನು ಆರೋಪಿಸಬೇಕಿಲ್ಲ. ಇದರೊಳಗಿನ ಸಂಗತಿಗಳನ್ನು ಗಮನಿಸಿ ಮೂಲ ಆಕರಗಳನ್ನು ಶೋಧಿಸುವ ವೈಧಾನಿಕತೆಯನ್ನು ಅನುಸರಿಸಲಾಗಿದೆ. ಹಲವಾರು ವಿದ್ವಾಂಸರು, ಜಾನಪದ ಚಿಂತಕರು, ಅನೇಕ ವಿಶ್ಲೇಷಣಕಾರರು, ಅನೇಕ ಕಥೆಗಾರರು ಇವರುಗಳ ಕೃತಿಗಳನ್ನು ಅಭ್ಯಸಿಸಿ ಅದರಲ್ಲಿಯ ಅನೇಕ ಮಾಹಿತಿಗಳನ್ನು ಸಂಗ್ರಹಿಸಿ ಪ್ರಸ್ತುತ ಅಧ್ಯಯನಕ್ಕೆ ಅಳವಡಿಸಿಕೊಳ್ಳುವುದು. ಇದೇ ರೀತಿ ಅನೇಕ ಕ್ಷೇತ್ರ ಕಾರ್ಯಗಳ ಮೂಲಕ ಅಧ್ಯಯನಕ್ಕೆ ಬೇಕಾದ ಸಲಕರಣೆಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗುವುದು. ಈ ರೀತಿಯ ಅನೇಕ ವೈಧಾನಿಕತೆಯ ಮೂಲಕ ಈ ಅಧ್ಯಯನವನ್ನು ರೂಪಿಸಲಾಗುವುದು.

ಅಧ್ಯಾಯ - ೨

ಲೇಖಕರ ಬದುಕು - ಬರಹ

ಅಧ್ಯಾಯ – ೨

ಲೇಖಕರ ಬದುಕು – ಬರಹ

ಆಧುನಿಕತೆಯ ಅಬ್ಬರದಲ್ಲಿ ಅನೇಕ ಪ್ರತಿಭೆಗಳು ಮಾಯವಾಗುತ್ತಿವೆ. ಯಾಕೆಂದರೆ ಜನ ಮುಂದುವರೆಯುತ್ತಿರುವ ಶಹರದ ಕಡೆ ಮುಖ ಮಾಡಿ ಅನೇಕ ಹಳ್ಳಿಗಳನ್ನು ಮರೆಯುತ್ತಿದ್ದಾರೆ. ಅಂತಹ ಸಣ್ಣ ಹಳ್ಳಿಗಳಲ್ಲಿ ಅನೇಕ ಪ್ರತಿಭೆಗಳ, ಅನೇಕ ಕಲೆಗಳು ಎಲೆ ಮರೆಯ ಕಾಯಿಯಂತೆ ಉಳಿದು ಅಲ್ಲಿಯೇ ನಸಿಸಿ ಹೊರಟಿವೆ. ಅಂತಹ ಪ್ರತಿಭೆ, ಕಲೆಗಳನ್ನು ಗುರುತಿಸಿ ಹೊರ ಜಗತ್ತಿಗೆ ತೋರಿಸುವ ಕಾರ್ಯ ನಡೆಯಬೇಕು. ಆ ನಿಟ್ಟಿನಲ್ಲಿ ಅನೇಕ ಅಧ್ಯಯನಗಳು ನಡೆಯಬೇಕು. ಇದರಿಂದ ಮಾತ್ರ ನಮ್ಮ ಗ್ರಾಮೀಣ ಪ್ರದೇಶದ ಜನಪದ ಕಲೆಗಳು, ಕಲೆಗಾರ, ಹಬ್ಬಗಳು, ಅನೇಕ ಕ್ರೀಡೆಗಳು, ಅನೇಕ ಪ್ರತಿಭೆಗಳು ಉಳಿಯಲು ಸಾಧ್ಯ.

ಈ ಅಧ್ಯಯನದಲ್ಲಿ ಗ್ರಾಮೀಣ ಪ್ರದೇಶದ ಒಬ್ಬ ಕಥೆಗಾರ, ಬರಹಗಾರ **ಕಲ್ಲೇಶ್ ಕುಂಬಾರ್**ರ ಇವರನ್ನು ಪರಿಚಯಿಸಲು ಪ್ರಯತ್ನಿಸುತ್ತೇನೆ. ಈ ಒಂದು ಅಧ್ಯಯನದಲ್ಲಿ ಇವರು ಬರೆದಿರುವ **'ಉರಿಂಬು ನಾಲಿಗೆಂಬು ಮೇಲೆ'** ಎಂಬ ಒಂಬತ್ತು ಕಥೆಗಳ ಸಂಗ್ರಹವಾಗಿರುವ ಕೃತಿಯನ್ನು ವಿಮರ್ಶೆ ಮಾಡಿರುತ್ತೇನೆ. ಇದರಿಂದ ಈ ಒಂಬತ್ತು ಕಥೆಗಳ ತಿರುಳು ಮತ್ತು ಈ ಕೃತಿಯ ಲೇಖಕರನ್ನು ಈ ಅಧ್ಯಯನದ ಮೂಲಕ ಪರಿಚಯಿಸಲೆತ್ನಿಸುತ್ತಿದ್ದೇನೆ.

ಆಧುನಿಕ ಕನ್ನಡ ಸಾಹಿತ್ಯದ ಗತಿಯನ್ನು ನೋಡಿದರೆ ಎಲ್ಲೋ ಒಂದು ಕಡೆ ಹಿಂದಿನಿಂದ ಬಳುವಳಿಯಾಗಿ ಬಂದ ಅನೇಕ ಕಲೆಗಳು ಮಾಯವಾಗುತ್ತಿವೆ ಏನೋ ಅನಿಸುತ್ತಿದೆ. ಅಂತಹದರಲ್ಲಿ ಈ ಸಣ್ಣ ಕಥೆಗಳು ಸಹ ಒಂದು. ಇಂತಹ ಸಣ್ಣ ಕಥೆಗಳನ್ನು ಕಥಾಸಂಕಲನಗಳನ್ನು, ಕಥೆಗಾರರನ್ನು ಗುರುತಿಸಿ ಅವುಗಳನ್ನು **'ಉರಿಂಬು ನಾಲಿಗೆಂಬು ಮೇಲೆ'** ಎಂಬ **ಕಲ್ಲೇಶ್ ಕುಂಬಾರ್**ರ ಕಥಾ ಸಂಕಲನದಲ್ಲಿ ಬರುವ ಒಂಬತ್ತು ಕಥೆಗಳನ್ನು ವಿಮರ್ಶೆಂಬು ಜೊತೆಗೆ ಕಥೆಗಾರರ ಪರಿಚಂಬುವನ್ನು ಕೂಡಾ ಮಾಡಿಕೊಡುತ್ತಿದ್ದೇನೆ.

೨.೧ ಬಾಲ್ಯ ಮತ್ತು ಶಿಕ್ಷಣ :

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ನಾಗನೂರ ಪಿ.ಕೆ. ಎಂಬ ಗ್ರಾಮದಲ್ಲಿ ಉದರ ನಿಮಿತ್ಯವಾಗಿ ಹೋಟೆಲ್ ಉದ್ಯೋಗವನ್ನು ನಿರ್ವಹಿಸುತ್ತಿದ್ದ ಅನ್ನಪ್ಪ ಹಾಗೂ ಕೃಷ್ಣಾಬಾಯಿ ಎಂಬ ದಂಪತಿಗಳ ಉದರದಿಂದ ಮಧ್ಯಮ ವರ್ಗದ ಕುಟುಂಬದಲ್ಲಿ **ಕಲ್ಲೇಶ್ ಕುಂಬಾರ್**ರು ದಿನಾಂಕ ೦೩-೦೬-೧೯೬೭ ರಲ್ಲಿ ಹುಟ್ಟಿದರು. ಮಲ್ಲಿಕಾರ್ಜುನ ಮತ್ತು ಬಸವರಾಜ ಎಂಬ ಇಬ್ಬರು ಸಹೋದರರು ಇದ್ದರು. ಬಾಲ್ಯದಲ್ಲಿ ಹೇಳಿಕೊಳ್ಳುವಂಥಹ ರೋಚಕವಾದ ಅನುಭವಗಳನ್ನು ಹೊಂದಿಲ್ಲವಾದರೂ ನೋಡಲಿಕ್ಕೆ ಚುರುಕಾಗಿ ಇದ್ದರು. ನಂತರ ವಾಸಸ್ಥಳ ಹಾರೂಗೇರಿಯ ವಿದ್ಯಾಲಯದಲ್ಲಿ ಪ್ರೌಢ ಶಾಲಾ ಶಿಕ್ಷಣವನ್ನು ಮುಗಿಸಿದರು. ಈ ದಿನಗಳಲ್ಲಿ ಕಲ್ಲೇಶ್ ಅತ್ಯಂತ ಕ್ರೀಯಾಶೀಲ ಮತ್ತು ಅಷ್ಟೇ ಕಟ್ಟುನಿಟ್ಟಾದ ಕೆಲಸವನ್ನು ನಿರ್ವಹಿಸುತ್ತಿದ್ದರು. ಅಷ್ಟೇ ಅಲ್ಲದೆ ಪ್ರೌಢ ಶಾಲೆಯಲ್ಲಿ ಎಲ್ಲಾ ಶಿಕ್ಷಕರಿಗೆ ಅಚ್ಚು ಮೆಚ್ಚಿನ ಶಿಷ್ಯನಾಗಿದ್ದರು. ಆ ದಿನಗಳಲ್ಲಿ ಆ ವಿದ್ಯಾಲಯದಲ್ಲಿ ಓದಿದ ಆ ದಿನಗಳನ್ನು ಈಗಲೂ ನೆನೆಸಿಕೊಳ್ಳುತ್ತಾರೆ. ಆಗ ಎಲ್ಲಾ ವಿಷಯಗಳನ್ನು ತೀರ ಶ್ರದ್ಧೆಯಿಂದ ಓದುತ್ತಿದ್ದರು. ಅದರಲ್ಲಿ 'ಕನ್ನಡ' ವಿಷಯದ ಮೇಲೆ ತುಸು ಹೆಚ್ಚು ಪ್ರೀತಿಯನ್ನು ಹೊಂದಿದ್ದರು. ಆದಕಾರಣ ಇವರಿಗೆ ಕನ್ನಡ ವಿಷಯವನ್ನು ಪಾಠ ಮಾಡುತ್ತಿದ್ದ ಶ್ರೀ ಬಿ. ಎ. ನಂದಿ ಗುರುಗಳನ್ನು ಈಗಲೂ ನೆನೆಪಿಸಿಕೊಳ್ಳುತ್ತಾರೆ. ಆ ದಿನಗಳಲ್ಲಿ ಅವರು ಪಾಠ ಮಾಡುತ್ತಿದ್ದ ಪರಿಯೇ ನನ್ನನ್ನು ಕನ್ನಡ ಸಾಹಿತ್ಯದಲ್ಲಿ ಇಷ್ಟು ಕೃಷಿ ಮಾಡಲು ಸಹಾಯಕವಾಗಿದೆ ಎನ್ನುತ್ತಾರೆ.

ಕಲ್ಲೇಶ್ ಕುಂಬಾರ್ರು ಚಿಕ್ಕಂದಿನಲ್ಲಿ ಶಾಲೆ ಬಿಡುವಿನ ವೇಳೆ ಗ್ರಂಥಾಲಯಕ್ಕೆ ತೆರಳಿ ಅಲ್ಲಿ ತರಿಸುತ್ತಿದ್ದ ದಿನಪತ್ರಿಕೆಗಳನ್ನು ಮತ್ತು 'ಕಸ್ತೂರಿ' ಮಾಸಿಕ ಪತ್ರಿಕೆಯನ್ನು ಓದುತ್ತಿದ್ದರು. ಕುಂಬಾರ್‌ರಿಗೆ ಬರೆಯಬೇಕೆಂಬ ತುಡಿತ ಅಲ್ಲಿಂದಲೇ ಶುರುವಾಗಿ ಬಿಡುತ್ತದೆ. ಮೂರು ವರ್ಷಗಳ ಪ್ರೌಢ ಶಾಲೆ ಶಿಕ್ಷಣವನ್ನು ಮುಗಿಸುವ ಹೊತ್ತಿಗೆ ಕಲ್ಲೇಶ್‌ನ ಒಳಗೆ ಸಣ್ಣ ಮಟ್ಟನ ಬರಹಗಾರನೊಬ್ಬ ಹುಟ್ಟಿಕೊಂಡಿದ್ದ. ಆ ನಂತರದಲ್ಲಿ ಬರವಣಿಗೆಯನ್ನು ಅತಿಯಾಗಿ ಹಚ್ಚಿಕೊಂಡಿದ್ದನಾದರು ಬರೆಯುವ ಹುಂಬ ಧೈರ್ಯವನ್ನು ಮಾಡಿರಲಿಲ್ಲ.

ಹೀಗೆ ಪ್ರೌಢ ಶಾಲಾ ಹಂತದಲ್ಲಿ ಬರವಣಿಗೆಯತ್ತ ತುಡಿಯುತ್ತಿದ್ದ ಕಲ್ಲೇಶ್‌ನ ಮನಸ್ಸು ಅತ್ತ ಮನೆಯವರ ಒತ್ತಾಯಕ್ಕೊ ಇತ್ತ ಗೆಳೆಯರನ್ನು ಕಂಡೋ ಎಂಬಂತೆ ಅನಿವಾರ್ಯವಾಗಿ ತನ್ನ ಮನಸ್ಸನ್ನು ಬದಲಿಸಿ ವಿಜ್ಞಾನ ವಿಷಯವನ್ನು ತೆಗೆದುಕೊಂಡು ಕಾಲೇಜು ಮೆಟ್ಟಿಲೇರಿದರು. ಆಗಲೇ ಒಂದು ರೀತಿಯಲ್ಲಿ ಕಲ್ಲೇಶನ ಮನದಲ್ಲಿ ದುಗುಡು ಶುರುವಾಗಿತ್ತು. ಅಂದು ಆತ ತೆಗೆದುಕೊಂಡ ಒಂದು ತಪ್ಪು ನಿರ್ಧಾರದಿಂದಾಗಿ ಮುಂದಿನ ಭವಿಷ್ಯದಲ್ಲಿ ಕಾಲೇಜು ಪ್ರಾಧ್ಯಾಪಕನಾಗಬೇಕೆಂದು ಕೊಂಡಿದ್ದ ಕಲ್ಲೇಶ್‌ನ ಕನಸ್ಸಿಗೆ ತಾನೇ ಗೋರಿ ಕಟ್ಟಿಕೊಂಡರು. ಈ ಪಾಪ ಪ್ರಜ್ಞೆ ಇವರನ್ನು ಈಗಲೂ ಕಾಡುತ್ತಿರುತ್ತದೆ.

ಆ ದಿನಗಳಲ್ಲಿ ಗಣಿತ ವಿಷಯವೆಂದರೆ ಕಬ್ಬಿಣದ ಕಡಲೆಯೆಂದು ಭಾವಿಸಿದ್ದ ಕಲ್ಲೇಶರವರು ಅರ್ಧೇಗೋ ಪಿ.ಯು.ಸಿ.ಯನ್ನು ಮುಗಿಸಿಕೊಂಡು ಹಾರೂಗೇರಿಯ ವೃಷಭೇಂದ್ರ ಪದವಿ ಮಹಾವಿದ್ಯಾಲಯದಲ್ಲಿ ಬಿ.ಎ. ಪದವಿಗೆ ಸೇರಿಕೊಂಡರು. ಆ ನಂತರದಲ್ಲಿ **ಕಲ್ಲೇಶ್ ಕುಂಬಾರ್**ರ ಬರವಣಿಗೆ ಬದುಕಿನಲ್ಲಿ ನಡೆದದ್ದು ಈಗ ಇತಿಹಾಸ ಎನ್ನಬೇಕು. ಕುಂಬಾರರು ಬಿ.ಎ. ಮೊದಲ ವರ್ಷಕ್ಕೆ ಸೇರಿದಾಗ ಆತನ ತರಗತಿಗೆ ಐಚ್ಛಿಕ ಕನ್ನಡ ವಿಷಯವನ್ನು ಬೋಧನೆ ಮಾಡುತ್ತಿದ್ದ ಡಾ. ವ್ಹಿ. ಎಸ್. ಮಾಳಿಯವರ ಪಠ್ಯ ನಿವೇದನಾ ಕ್ರಮದಿಂದಾಗಿ **ಕಲ್ಲೇಶ್ ಕುಂಬಾರ್**ರನ್ನು ಗಾಢವಾಗಿ ಆವರಿಸಿಕೊಂಡು ಬಿಟ್ಟಿದ್ದರು.

ಬಿ.ಎ. ಮೊದಲ ವರ್ಷದ ಪಠ್ಯಕ್ಕಿದ್ದ ದಿ. ಮಿರ್ಜಿ ಅಣ್ಣಾರಾಯರ 'ನಿಸರ್ಗ' ಕಾದಂಬರಿಯನ್ನು ಆಗಷ್ಟೇ ಸ್ನಾತಕೋತ್ತರ ಪದವಿಯನ್ನು ಮುಗಿಸಿಕೊಂಡು ಬಂದು ಬೋಧನೆಯಲ್ಲಿ ತೊಡಗಿಸಿಕೊಂಡಿದ್ದ ಡಾ. ವ್ಹಿ. ಎಸ್. ಮಾಳಿಯವರ ತುಂಬಾ ಸೊಗಸಾಗಿ ಮತ್ತು ರೋಚಕವಾಗಿ ಪಾಠ ಮಾಡುತ್ತಿದ್ದರು. ಇದು **ಕಲ್ಲೇಶ್ ಕುಂಬಾರ್**ರ ಮೇಲೆ ತುಂಬಾ ಪರಿಣಾಮವನ್ನುಂಟು ಮಾಡಿತು. ಆ ಪರಿಣಾಮವೇ ಅವರು ಇಂದು ಕನ್ನಡ ಸಾಹಿತ್ಯದಲ್ಲಿ ಹೆಸರುವಾಸಿಯಾಗಲು ಕಾರಣವಾಗಿದೆ. ಆ ದಿನದ 'ನಿಸರ್ಗ' ಕಾದಂಬರಿ ಪ್ರಾದೇಶಿಕ ಭಾಷೆಯಲ್ಲಿದ್ದ ಆ ಕಾದಂಬರಿಯನ್ನು ಸರಳ ಭಾಷೆಯ ಮೂಲಕ ಸೊಗಸಾಗಿ ಬಿಡಿಸಿ ಹೇಳುತ್ತಿದ್ದನ್ನು **ಕಲ್ಲೇಶ್ ಕುಂಬಾರ್**ರು ಇಂದಿಗೂ ನೆನೆಪಿಸಿಕೊಳ್ಳುತ್ತಾರೆ. ಹೀಗೆ ಡಾ. ವ್ಹಿ. ಎಸ್. ಮಾಳಿಯವರ ವಿಶಿಷ್ಟ ರೀತಿಯ ಪಾಠ ಬೋಧನೆ **ಕಲ್ಲೇಶ ಕುಂಬಾರ್**ರ ಬರವಣಿಗೆಗೆ ಮತ್ತಷ್ಟು ಪ್ರೇರಣೆ ನೀಡುತ್ತದೆ.

"ಲೇಕಕರು ಹೇಳುವಂತೆ ನಾನು ಬಿ. ಎ. ಪದವಿಗೆ ಸೇರುವ ಹೊತ್ತಿಗೆಲ್ಲ ನ್ನನೊಳಗೆ ಕಥೆಗಳನ್ನು ಬರೆಯಬೇಕೆಂಬ ತುಡಿತ ಪ್ರಾರಂಭವಾಯಿತು. **ಕಲ್ಲೇಶ್ ಕುಂಬಾರ್**ರು ಒಬ್ಬ ಒಳ್ಳೆಯ ಶಿಕ್ಷಕನಾಗಬೇಕೆಂಬ ವ್ಯಾಮೋಹದಿಂದ ಬಿ.ಎ. ಪದವಿ ಶಿಕ್ಷಣ ಮುಗಿಸಿದ ನಂತರ 'ಬಿ.ಈಡಿ' ಪದವಿಯನ್ನು ಪಡೆಯಲೆಂದು ದಾವಣಗೇರಿಯ ಬಾಪೂಜಿ ಶಿಕ್ಷಣ ಮಹಾವಿದ್ಯಾಲಯಕ್ಕೆ ಸೇರಿಕೊಂಡು 'ಬಿ.ಈಡಿ' ಪದವಿಯನ್ನು ಅಷ್ಟೇ ಯಶಸ್ವಿಯಾಗಿ ಮುಗಿಸಿಕೊಂಡರು. ಈ ನಡುವೆ ಅವರಲ್ಲಿ ಮಡುಗಟ್ಟಿದ ಬರೆಯಬೇಕೆಂಬ ತುಡಿತ ಜೀವಂತವಾಗಿಯೇ ಇತ್ತು. ಹೀಗಾಗಿ ಆಗಾಗ ಪತ್ರಿಕೆಗಳಿಗೆ ಚಿಕ್ಕ ಚಿಕ್ಕ ಲೇಖನಗಳನ್ನು ಬರೆಯುವ ಹವ್ಯಾಸವನ್ನು ರೂಡಿಸಿಕೊಂಡರು"[೧].

೧.೨ ಜೀವನ :

ಕಲ್ಲೇಶ್ ಕುಂಬಾರ್ರು 'ಬಿ.ಈಡಿ' ಪದವಿಯನ್ನು ಮುಗಿಸಿಕೊಂಡು ಊರಿಗೆ ಬಂದರು. ಆಗಲೇ ಈ ಭಾಗದ ಹಿರಿಯ ಸಜ್ಜನ – ಶಿಕ್ಷಕ ಎಂದು ಹೆಸರಾಗಿದ್ದ ಶ್ರೀ ಕೆ. ವ್ಹಿ. ಬೀಳಗಿಯವರು ಸಾರಥ್ಯದಲ್ಲಿ ಕುರುಬ ಸಮಾಜದವರು ಸ್ಥಳಿಯ ಕರೆಸಿದ್ಧೇಶ್ವರ ದೇವಸ್ಥಾನದ ಆವರಣದಲ್ಲಿ ಪ್ರಾಥಮಿಕ

೧. **ಕಲ್ಲೇಶ್ ಕುಂಬಾರ್ರು : ಉರಿಯ ನಾಲಿಗೆಯ ಮೇಲೆ : (ಲೇಖಕರ ಅನಿಸಿಕೆಯಲ್ಲಿ) ಪುಟ ಸಂಖ್ಯೆ : ೬**

ಶಾಲೆಯೊಂದನ್ನು ಪ್ರಾರಂಭಿಸುವ ತಯಾರಿ ನಡೆಸಿದ್ದರು. ಈ ನಿಟ್ಟಿನಲ್ಲಿ ಅವರು ಯಶಸ್ವಿಯೂ ಆಗಿದ್ದರು. ಅದರ ಪರಿಣಾಮವಾಗಿ ಎಲ್.ಕೆ.ಜಿ. ಮಟ್ಟದ ಒಂದು ತರಗತಿಯನ್ನು ಸಹ ಪ್ರಾರಂಭಿಸಿದರು. ಆ ಶಾಲೆಗೆ ಶಿಕ್ಷಕರು ಬೇಕಾಗಿದ್ದಾರೆ ಎಂಬ ಜಾಹೀರಾತನ್ನು ಪತ್ರಿಕೆಯಲ್ಲಿ ನೋಡಿ ಮೊದಲೇ ಶಿಕ್ಷಕ ವೃತ್ತಿಯಲ್ಲಿ ತುಂಬಾ ಆಸಕ್ತಿಯನ್ನು ಹೊಂದಿದ್ದ **ಕಲ್ಲೇಶ್ ಕುಂಬಾರ್**ರು ಆ ಶಾಲೆಗೆ ಶಿಕ್ಷಕ ವೃತ್ತಿಗೆ ಅರ್ಜಿ ಹಾಕಿದರು. ಆದರೆ ಅರ್ಜಿ ಹಾಕಿದ ತಕ್ಷಣ ಶಿಕ್ಷಕ ವೃತ್ತಿ ಸಿಗುವುದಿಲ್ಲ ಎಂಬುದು ಕುಂಬಾರ್‌ರಿಗೆ ಗೊತ್ತಿತ್ತು. ಏಕೆಂದರೆ ಹೋಟೆಲ ವೃತ್ತಿಯನ್ನು ನಿರ್ವಹಿಸುತ್ತಿದ್ದ ಕುಟುಂಬದಿಂದ ಬಂದಿದ್ದ ಅವರ ನಡೆ – ನುಡಿ – ಗುಣ ಇತ್ಯಾಧಿಗಳ ಬಗ್ಗೆ ಆಡಳಿತ ಮಂಡಳಿಯುವರಿಗೆ ಸಂದೇಹವಿತ್ತು. ಆಗ ಅವರಿಗೆ ತೀರ ಪರಿಚಿತರಾದ ಅದೇ ಕುರುಬ ಸಮಾಜದ ಗಣ್ಯರೆನಿಸಿದ್ದ ಶ್ರೀ ಎಸ್. ಆರ್. ಹಾಡಕಾರರವರ ಸಹಕಾರ ಪಡೆದುಕೊಂಡರು. ಅವರಿಗೆ **ಕಲ್ಲೇಶ್ ಕುಂಬಾರ್**ರ ಮೇಲೆ ವಿಶ್ವಾಸವಿತ್ತು ಮತ್ತು ಆ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿದ್ದರಿಂದ ಆ ಶಿಕ್ಷಕ ವೃತ್ತಿಯನ್ನು **ಕಲ್ಲೇಶ್ ಕುಂಬಾರ್**ರಿಗೆ ದೊರೆಯುವಂತೆ ಮಾಡಿದರು. ಆ ನಂತರ ಕುಂಬಾರರ ಬದುಕಿನಲ್ಲಿ ನಡೆದುದ್ದೆಲ್ಲ ಇತಿಹಾಸವಾಯಿತು.

ಆ ಸಂಸ್ಥೆಯಲ್ಲಿ **ಕಲ್ಲೇಶ್ ಕುಂಬಾರ್**ರು ತುಂಬಾ ಶ್ರದ್ಧೆಯಿಂದ ಶಿಕ್ಷಕ ವೃತ್ತಿಯನ್ನು ನಡೆಸಿಕೊಂಡು ಹೋಗಿ ಶಾಲೆಗೂ ಮತ್ತು ಆಡಳಿತ ಮಂಡಳಿಗೂ ಹೆಸರು ತಂದರು. ಕುಂಬಾರ್‌ರು ತುಂಬಾ ಶ್ರದ್ಧೆಯಿಂದ ವಿಧ್ಯಾರ್ಥಿಗಳಿಗೆ ಪಾಠ ಪ್ರವಚನ ಮಾಡುತ್ತಿದ್ದರು. ಆಗ ಆ ಶಾಲೆಗೆ ಒಂದೇ ವರ್ಗ ಒಬ್ಬನೇ ಶಿಕ್ಷಕನೆಂಬಂತೆ ಇತ್ತು. ಆದರೆ ಎರಡು ವರ್ಷದಲ್ಲಿ ಆ ಸಂಸ್ಥೆ ತುಂಬಾ ಬೆಳೆದು ಹೆಮ್ಮರವಾಯಿತು. ಇದರಿಂದಾಗಿ ನಂತರದ ದಿನಗಳಲ್ಲಿ ಶಾಲೆಯ ಎಲ್ಲಾ ಜವಾಬ್ದಾರಿಯನ್ನು **ಕಲ್ಲೇಶ್ ಕುಂಬಾರ್**ರವರೆ ಹೊತ್ತುಕೊಳ್ಳುವಂತಾಯಿತು.

ಶ್ರೀ ಕರೇಸಿದ್ಧೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಕುಂಬಾರ್‌ರು ಕೆಲಸ ನಿರ್ವಹಿಸುವ ದಿನಗಳಲ್ಲಿ ಅವರಿಗೆ ಇನ್ನು ಮದುವೆ ಆಗಿರಲಿಲ್ಲ. ಆ ಸಮಯದಲ್ಲಿ ಅಂತಾ ವಿಚಾರಗಳು ಅವರಿಗೆ ಇರಲಿಲ್ಲ. ಆದರೂ ಸಹ ಅವರಿಗೆ ಒಂದು ಘಟನೆ ಮದುವೆಯಾಗುವ ಅನಿವಾರ್ಯ ಬರುತ್ತದೆ. ಅದೇನೆಂದರೆ **ಕಲ್ಲೇಶ್ ಕುಂಬಾರ್**ರ ತಾಯಿಯ ತಮ್ಮ ಅಂದರೆ (ಸೋದರ ಮಾವನ) ಮಗಳೊಬ್ಬಳು ದೀರ್ಘಕಾಲದ ಖಾಯಿಲೆಯಿಂದ ಏಕಾಏಕಿ ನಿಧನ ಹೊಂದುತ್ತಾಳೆ. ಇದರಿಂದ ಇಡೀ ಕುಟುಂಬಕ್ಕೆ ಒಂದು ರೀತಿಯಿಂದ ಮಾನಸಿಕ ಆಘಾತವಾಗುತ್ತದೆ. ಏಕೆಂದರೆ ಕುಂಬಾರರ ತಾಯಿಯ ತಮ್ಮಂದಿರಿಬ್ಬರು ಅವರ ಕುಟುಂಬದೊಂದಿಗೆ ವಾಸವಾಗಿರುತ್ತಾರೆ. ಹೀಗಾಗಿ **ಕಲ್ಲೇಶ್ ಕುಂಬಾರ್**ರ ತಾಯಿ ಮಾನಸಿಕ ಆಘಾತಕ್ಕೆ ಒಳಗಾಗುತ್ತಾರೆ. ಹೀಗಾಗಿ ಇಡೀ ಕುಟುಂಬ ದುಃಖದಲ್ಲಿ ಮುಳುಗಿ ಮೌನಕ್ಕೆ ಶರಣಾಗುತ್ತದೆ..

ಇದೇ ಹೊತ್ತಲ್ಲಿ **ಕಲ್ಲೇಶ್ ಕುಂಬಾರ್**ರ ಮದುವೆ ಮಾಡಿ ಮುಗಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿರುತ್ತದೆ. ಆದರೆ ಹೆಣ್ಣು ನೋಡುವ ವಿಚಾರ ಮಾಡಿರಲಿಲ್ಲ. ಆದರೆ ಕಲ್ಲೇಶ್‌ರವರ ತಂದೆಗೆ ರಕ್ತ ಸಂಬಂಧದಲ್ಲಿ ಹೆಣ್ಣು ನೋಡುವ ವಿಚಾರ ಮಾಡುತ್ತಾರೆ. ಒಂದು ದಿನ ಮದುವೆ ಬಗ್ಗೆ ಕಲ್ಲೇಶ್‌ನ

ಮುಮದೆ ಈ ಪ್ರಸ್ತಾಪ ಬಂದು ಬಿಡುತ್ತದೆ. ಆ ಕ್ಷಣದಲ್ಲಿ ಕಲ್ಲೇಶ್‌ರವರು ಪ್ರತಿಕ್ರಿಯಿಸದಿದ್ದರೂ ತಂದೆಯ ಮಾತುಗಳನ್ನು ನಿರಾಕರಿಸುವಂತಿರಲಿಲ್ಲ. ಇತ್ತ ಕಲ್ಲೇಶ್‌ರವರ ತಾಯಿಗೂ ಸಹ ತನ್ನ ತಮ್ಮನ ಹಿರಿಯ ಮಗಳನ್ನು (ಕಾಶವ್ವ) ಕಲ್ಲೇಶನಿಗೆ ಕೊಡಿಸಬೇಕೆಂಬ ಆಸೆ ಇರುತ್ತದೆ. ಈ ಎಲ್ಲಾ ಕಾರಣಗಳಿಂದ ಮತ್ತು ಮನೆಯಲ್ಲಿ ನಡೆದ ದುಃಖದ ಘಟನೆಯಿಂದ ಎಲ್ಲರೂ ಹೊರಬರುತ್ತಾರೆ ಎಂಬ ಕಾರಣದಿಂದ **ಕಲ್ಲೇಶ್ ಕುಂಬಾರ್**ರು ತನ್ನ ತಾಯಿಯ ತಮ್ಮನ ಮಗಳನ್ನು ಮದುವೆ ಮಾಡಿಕೊಳ್ಳಲು ಒಪ್ಪಿಕೊಳ್ಳುತ್ತಾರೆ. ಮುಂದೆ ಕೆಲವೇ ದಿನಗಳಲ್ಲಿ ಅದೊಂದು ಶುಭಗಳಿಗೆಯಲ್ಲಿ ಕಾಶವ್ವಳೊಂದಿಗೆ ಕಲ್ಲೇಶ್‌ರವರ ಮದುವೆ ನಡೆದು ಹೋಯಿತು. ಆದರೆ ಇಂದು **ಕಲ್ಲೇಶ್ ಕುಂಬಾರ್**ರ ಧರ್ಮ ಪತ್ನಿಯು ಕುಂಬಾರರ ಬದುಕಿಗೆ ಅನಿವಾರ್ಯವೆನಿಸುವಷ್ಟರ ಮಟ್ಟಿಗೆ ಹೆಗಲು ಕೊಟ್ಟಿದ್ದಾರೆ. ಒಂದು ವೇಳೆ ಕುಂಬಾರ್‌ರು ಕಾಶವ್ವನನ್ನು ಮದುವೆಯಾಗದಿದ್ದರೆ ಖಂಡಿತವಾಗಿಯೂ ಅವರು ಇಂದು ಇಷ್ಟು ಸುಖಿಯಾಗಿರುತ್ತಿರಲಿಲ್ಲ.

ನಂತರ ಮುಂದಿನ ಒಂದೆರಡು ವರ್ಷದಲ್ಲಿ **ಕಲ್ಲೇಶ್ ಕುಂಬಾರ್**ರಿಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಖಾಯಂ ಸರಕಾರಿ ನೌಕರಿ ಸಿಗುತ್ತದೆ. ಅವರು ಗ್ರಂಥಪಾಲಕರ ಹುದ್ದೆಗೆ ಆಯ್ಕೆಯಾಗಿ ನೌಕರಿಗೆಂದು ಬೀದರಗೆ ಹೋಗುವ ವರ್ಷದ ಮೊದಲೇ ಕುಂಬಾರ್‌ರಿಗೆ ಹಿರಿಯ ಮಗಳು ಕು. ಅಂಜನಾ ಹುಟ್ಟಿದಳು. ದೂರದ ಬೀದರನಲ್ಲಿ ನೌಕರಿ ಮಾಡುವುದೇ ಕುಂಬಾರರಿಗೆ ಹಿಂಸೆಯಾಗಿತ್ತು. ಹೀಗಾಗಿ ಪ್ರತಿ ವರ್ಷ ವರ್ಗಾವಣೆಗೆ ಪ್ರಯತ್ನ ಮಾಡುತ್ತಿದ್ದರು. ಕೊನೆಗೂ ನೌಕರಿ ಸೇರಿ ಮೂರನೆಯ ವರ್ಷಕ್ಕೆ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ತೇರದಾಳದ ಶಾಖಾ ಗ್ರಂಥಾಲಯಕ್ಕೆ ವರ್ಗಾವಣೆಯಾಯಿತು. ಆ ಮೇಲೆ ಬದುಕು ಹಗುರವೆನಿಸ ತೊಡಗಿತು. ಪರಿಚಿತ ಊರಲ್ಲಿ ಗೆಳೆಯರ ನಡುವೆ ಕೆಲಸ ಮಾಡುವುದೇ ಖುಷಿ ಎನಿಸತೊಡಗಿತು.

ಮೊದಲನೆ ಮಗಳು ಕು. ಅಂಜನಾಗೆ ಮೂರ್‍ನಾಕು ವರ್ಷ ತುಂಬುವುದರೊಳಗೆ ಎರಡನೆಯ ಮಗಳು ಗಂಗಾ ಜನಿಸಿದಳು. ಆಕೆಯ ನಂತರದಲ್ಲಿ ಮೂರನೆಯವಳು ಸತ್ಯವತಿ ಜನಸಿದಳು. ಕೊನೆಯಲ್ಲಿ ಗಂಡು ಮಗ ಬಸವಪ್ರಭು ಜನಿಸಿದ. ಹೀಗೆ **ಕಲ್ಲೇಶ್ ಕುಂಬಾರ್**ರ ಕುಟುಂಬ ಖುಷಿಯಿಂದ ತುಂಬಿತ್ತು.

ಸಧ್ಯ **ಕಲ್ಲೇಶ್ ಕುಂಬಾರ್**ರ ಮಗಳು ಜಮಖಂಡಿಯ ತುಂಗಳ ವಿಜ್ಞಾನ ಮಹಾವಿದ್ಯಾಲಯದಲ್ಲಿ ದ್ವಿತೀಯ ಪಿ.ಯು.ಸಿ (ವಿಜ್ಞಾನ) ವಿಭಾಗದಲ್ಲಿ ಓದುತ್ತಿದ್ದಾಳೆ. ಗಂಗಾ ಮತ್ತು ಸತ್ಯವತಿ ಹಾರೂಗೇರಿಯ ಕರೇಸಿದ್ಧೇಶ್ವರ ಪ್ರಾಥಮಿಕ ಶಾಲೆಯಲ್ಲಿ ೬ನೇ ತರಗತಿಯಲ್ಲಿ ಓದುತ್ತಿದ್ದಾರೆ. ಹಾಗೂ ಕೊನೆಯ ಮಗ ಬಸವಪ್ರಭು ಹಾರೂಗೇರಿಯ ಜನತಾ ಶಿಕ್ಷಣ ಸಂಸ್ಥೆಯ ಪ್ರಾಥಮಿಕ ಶಾಲೆಯಲ್ಲಿ ಮೂರನೆಯ ತರಗತಿಯಲ್ಲಿ ಓದುತ್ತಿದ್ದಾನೆ.

“ಸಧ್ಯ **ಕಲ್ಲೇಶ್ ಕುಂಬಾರ್**ರ ವೃತ್ತಿ ಮತ್ತು ಪ್ರವೃತ್ತಿಯನ್ನು ಪೋಷಿಸುತ್ತಿರುವ ಕುಟುಂಬದವರ ಪ್ರೀತಿ ಅವರನ್ನು ಇನ್ನಷ್ಟು - ಮತ್ತಷ್ಟು ಬರೆಯುವಂತೆ ಮಾಡಿದೆ. ಹಾಗೆಯೇ ಅವರ ಆಲೋಚನೆಗಳ

ದಿಕ್ಕನ್ನು ಬದಲಿಸಿ ಸರಿಯಾದ ಓದು ಮತ್ತು ಬರಹದ ದಾರಿಯಲ್ಲಿ ಮುನ್ನಡೆಸಲು ಕಾರಣರಾದ ಡಾ. ಅಮರೇಶ ನುಗಡೋಣಿ, ಜಿ. ಪಿ. ಬಸವರಾಜ, ಡಾ. ರಹಮತ ತರಿಕೇರಿ, ಕುಂವೀ, ಡಾ. ಬಾಳಾಸಾಹೇಬ ಲೋಕಾಪೂರ, ವಿಜಯಕಾಂತ ಪಾಟೀಲ, ಚನ್ನಪ್ಪ ಅಂಗಡಿ ಗೆಳೆಯ ಲಕ್ಷಣ ಬದಾಮಿ ಮುಂತಾದವರ ಸಲಹೆ ಸೂಚನೆ ಸಹಕಾರಗಳು ಅವರೊಳಗಿನ ಬರಹಗಾರನನ್ನು ಇಂದಿಗೂ ಜೀವಂತವಾಗಿರಿಸಿವೆ. ಲೇಖಕರು ಇಲಿಲ ತನ್ನ ಗೆಳೆಯರನ್ನು ನೆನೆಸಿಕೊಂಡಿರುವುದು ತಿಳಿದು ಬರುತ್ತದೆ"[೧].

೨.೩ ಕೃತಿಗಳು :

೧. ಸಂಭವಾಮಿ ಯುಗೇ ಯುಗೇ :

ಇದು **ಕಲ್ಲೇಶ್ ಕುಂಬಾರ್**ರ ಬರವಣಿಗೆಯ ಪ್ರಾರಂಭದಲ್ಲಿ ಉತ್ಸಾಹಕ್ಕೆ ಕಟ್ಟು ಬಿದ್ದು ಪ್ರಕಟಿಸಿದ್ದು, ಈ ಸಂಕಲನದ ಕಥೆಗಳನ್ನು ಈಗ ಇದನ್ನು ಓದಿದಾಗ ಅಂದಿನ ಹುಚ್ಚು ಹುಮ್ಮಸ್ಸಿನ ಕುರಿತು ನಗು ಬರುತ್ತದೆ. ಹೀಗಾಗಿ ಈ ಸಂಕಲನ ಮುಂದಿನ ದಿನಗಳಲ್ಲಿ ಲೇಖಕರು ಬರಹವನ್ನು ಜೀವಂತವಾಗಿರಿಸುವದಕ್ಕಷ್ಟೇ ಕಾರಣವಾಯಿತೆ ವಿನಃ ಹೆಚ್ಚು ಓದುಗರನ್ನು ತಲುಪಲಿಲ್ಲ.

೨. ಗುಮ್ಮಟ ನಾಡಿನ ಕೀರ್ತನಕಾರ :

ಈ ಕೃತಿಯು ಕೀರ್ತನಕಾರ ದಿ. ದಾನಪ್ಪ ಜತ್ತಿಯವರ ಜೀವನ – ಸಾಧನೆ ಕುರಿತು ಬರೆದದ್ದು, ಅವರು ದಿನಪತ್ರಿಕೆಗಳಲ್ಲಿ ಆಗಾಗ ನಾನು ಬರೆಯುತ್ತಿದ್ದ ಬಿಡಿ ಲೇಖನಗಳನ್ನು ಗಮನಿಸಿ ತಮ್ಮ ಜೀವನ – ಸಾಧನೆ ಕುರಿತು ಕೃತಿಯನ್ನು ನೀನೇ ಬರೆಯಬೇಕೆಂದು ಹೇಳಿ ಬರೆಸಿದ ಕೃತಿ ಈ ಕೃತಿಯನ್ನು ಅವರೇ ಪ್ರಕಟಿಸಿದ್ದು.

೩. ಪುರುಷದಾರಿಯ ಮೇಲೆ :

ನಾಡಿನ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡ ಬಿಡಿ ಕವಿತೆಗಳನ್ನು ಒಂದೆಡೆ ಸೇರಿಸಿ ೨೦೦೭ ರಲ್ಲಿ ಪ್ರಕಟಿಸಿದ ಕವನ ಸಂಕಲನ. ಹಾಸನದ ಹೊನ್ನ ಪ್ರಕಾಶನದ ಶ್ರೀಮತಿ ಜ. ನಾ. ತೇಜಶ್ರೀ ಈ ಸಂಕಲನದ ಪ್ರಕಾಶಕರು. ಈ ಕೃತಿಗೆ ಶ್ರೀ ಬಿ. ಆರ್. ಆಜೂರ್ ಪ್ರತಿಷ್ಠಾನದಿಂದ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ನೀಡುವ ದತ್ತಿನಿಧಿ ಬಹುಮಾನಗಳು ಬಂದಿವೆ.

---

೧. **ಕಲ್ಲೇಶ್ ಕುಂಬಾರ್‌ರು : ಉರಿಯ ನಾಲಿಗೆಯ ಮೇಲೆ : (ಲೇಖರ ಅನಿಸಿಕೆಯಿಂದ) ಪುಟ ಸಂಖ್ಯೆ : ೮**

೪. **ಉರಿಯ ನಾಲಿಗೆಯ ಮೇಲೆ :**

ಈ ಕಥಾ ಸಂಕಲನ ೨೦೧೦ರಲ್ಲಿ ಪ್ರಕಟಗೊಂಡಿದೆ. ಮೈಸೂರಿನ ರೂಪ ಪ್ರಕಾಶನದವರು ಈ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕಥಾ ಸಂಕಲನದಲ್ಲಿನ ಎಲ್ಲ ಕಥೆಗಳು ನಾಡಿನ ಪ್ರಮುಖ ದಿನಪತ್ರಿಕೆ – ವಾರಪತ್ರಿಕೆಗಳಲ್ಲಿ ಏರ್ಪಡಿಸುವ ಕಥಾ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿವೆ. ಈ ಕೃತಿ ಬೆಳಗಾವಿ ಜಿಲ್ಲೆಯ ಬರಹಗಾರರಿಗೆ ನೀಡುವ ಪುಸ್ತಕ ಪ್ರಶಸ್ತಿ ಪಡೆದುಕೊಂಡಿದೆ.

೨.೪ **ಪ್ರಶಸ್ತಿಗಳು :**

* ಪ್ರಜಾವಾಣಿ ದಿನಪತ್ರಿಕೆಯ ದೀಪಾವಳಿ ಕಥಾ ಸ್ಪರ್ಧೆಯಲ್ಲಿ (೨೦೦೨ ರಲ್ಲಿ) 'ಭವಕ್ಕೆ ಬೀಜವಾದುದು' ಕಥೆಗೆ ೩ನೇ ಬಹುಮಾನ.

* ಪ್ರಜಾವಾಣಿ ದಿನಪತ್ರಿಕೆಯ 'ದೀಪಾವಳಿ ಕಾವ್ಯ ಸ್ಪರ್ಧೆ – ೨೦೦೫'ರಲ್ಲಿ 'ಒಂದು ಕ್ಷಣದ ಸ್ಖಲನದ ಸುತ್ತ' ಕವಿತೆಗೆ ಮೆಚ್ಚುಗೆ ಬಹುಮಾನ.

* ಹಾವೇರಿಯ 'ಕನ್ನಡ ಯುವ ಜನ ಕ್ರೀಯಾ ಸಮಿತಿ (ಚಿಕ್ಕಾಂಶಿ – ಹೊಸೂರ) ಇವರು ಏರ್ಪಡಿಸುವ ರಾಜ್ಯ ಮಟ್ಟದ ಪಾಪು ಕಥಾ ಸ್ಪರ್ಧೆಯಲ್ಲಿ 'ಉರಿಯ ನಾಲಿಗೆಯ ಮೇಲೆ' ಕಥೆಗೆ 'ಪಾಪು ಕಥಾ ಪುರಸ್ಕಾರ'.

* ಗುಲಬರ್ಗಾ ವಿಶ್ವವಿದ್ಯಾಲಯದವರು ಏರ್ಪಡಿಸುವ 'ಜಯತೀರ್ಥ ರಾಜ ಪುರೋಹಿತ ಕಥಾ ಸ್ಪರ್ಧೆ'ಯಲ್ಲಿ 'ಶಬ್ದದೊಳಗಣ ನಿಶ್ಯಬ್ಧ' ಕಥೆಗೆ ಮೆಚ್ಚುಗೆ ಬಹುಮಾನ.

* 'ತಿಂಗಳು' – ಮಾಸಿಕ ಏರ್ಪಡಿಸಿದ 'ಕಾವ್ಯಸ್ಪರ್ಧೆ'ಯಲ್ಲಿ 'ಮಾತು ಕಥೆ' ಎಂಬ ಕವಿತಿಗೆ ದ್ವಿತೀಯ ಬಹುಮಾನ.

* 'ಗುರುತು' ಮಾಸಪತ್ರಿಕೆ ಏರ್ಪಡಿಸಿದ 'ಕಥಾಸ್ಪರ್ಧೆ'ಯಲ್ಲಿ 'ಉರಿಯ ನಾಲಿಗೆಯ ಮೇಲೆ' ಕಥೆಗೆ ಪ್ರಥಮ ಬಹುಮಾನ.

* ‘ಮೊಗವೀರ’ ಮಾಸಪತ್ರಿಕೆ ಏರ್ಪಡಿಸಿದ ‘ಕಥಾಸ್ಪರ್ಧೆ’ಯಲ್ಲಿ ‘ಹಂದಿ’ ಕಥೆಗೆ ದ್ವಿತೀಯ ಬಹುಮಾನ.

* ‘ಪುರುಷ ದಾರಿಯ ಮೇಲೆ’ ಕವನ ಸಂಕಲನಕ್ಕೆ ೨೦೦೭ನೇ ಸಾಲಿನ ದತ್ತಿನಿಧಿ ಪ್ರಶಸ್ತಿ ಹಾಗೂ ಅದೇ ಸಾಲಿನಲ್ಲಿ ಹಾರೂಗೇರಿಯ ಬಿ.ಆರ್. ಆಜೂರ ಪ್ರತಿಷ್ಠಾನ ನೀಡುವ ಪುಸ್ತಕ ಬಹುಮಾನವನ್ನು ಪಡೆದುಕೊಂಡಿದೆ.

* ‘ಕರವೇ ನಲ್ನುಡಿ’ ಮಾಸಪತ್ರಿಕೆಯ ಏರ್ಪಡಿಸುವ ‘ಕಥಾಸ್ಪರ್ಧೆ’ಯಲ್ಲಿ ೨೦೧೦ ರಲ್ಲಿ ‘ಅರಿವಿನ ಕೇಡು’ ಕಥೆಗೆ ಬಹುಮಾನ ಬಂದಿದೆ.

* ‘ಕರವೇ ನಲ್ನುಡಿ’ ಮಾಸಪತ್ರಿಕೆ ಏರ್ಪಡಿಸುವ ‘ಕಥಾಸ್ಪರ್ಧೆ’ಯಲ್ಲಿ ೨೦೧೧ರಲ್ಲಿ ‘ಉಣಲೆಂದು ಬಂದ ಸುಖ’ ಕಥೆಗೆ ಬಹುಮಾನ ಬಂದಿದೆ.

* ‘ಉರಿಯ ನಾಲಿಗೆಯ ಮೇಲೆ’ ಕಥಾ ಸಂಕಲನಕ್ಕೆ ಬೆಳಗಾವಿಯ ‘ಕನ್ನಡ ಸಂಘ’ ದವರು ಬೆಳಗಾವಿ ಜಿಲ್ಲಾ ಬರಹಗಾರರಿಗೆ ನೀಡುವ ‘ಪುಸ್ತಕ ಬಹುಮಾನ’ ೨೦೧೧ರಲ್ಲಿ ದೊರೆತಿದೆ.

* * *

ಅಧ್ಯಾಯ – ೩

ಉರಿಯ ನಾಲಿಗೆಯ ಮೇಲೆ ೯ ಕಥೆಗಳ ವಿಮರ್ಶೆ

ಅಧ್ಯಾಯ – ೩

ಉರಿಯ ನಾಲಿಗೆಯ ಮೇಲೆ – ೯ ಕಥೆಗಳ ವಿಮರ್ಶೆ

'ಉರಿಯ ನಾಲಿಗೆಯ ಮೇಲೆ' **ಶ್ರೀ ಕಲ್ಲೇಶ್ ಕುಂಬಾರ್**‌ರ ಪ್ರಥಮ ಕಥಾಸಂಕಲನ. ಇಲ್ಲಿನ ಒಂಬತ್ತು ಕಥೆಗಳನ್ನು ಓದಿದರೆ ಯಾರಿಗಾದರೂ ಈ ಕಥಾಸಂಕಲನ ಕಥೆಗಾರರ ಪ್ರಥಮ ಕಥಾಸಂಕಲನ ಎನಿಸಲಾರದು. ಯಾಕೆಂದರೆ ಇಲ್ಲಿನ ಕಥೆಗಳು ಗ್ರಾಮೀಣ ಪ್ರದೇಶದ ಬದುಕು, ಕಲೆ, ಸಂಸ್ಕೃತಿ, ಭಾಷೆ, ನೋವು-ನಲಿವನ್ನು ಎತ್ತಿ ತೋರಿಸಿತ್ತದೆ. ಸಧ್ಯದ ಸಂದರ್ಭದಲ್ಲಿ ತಮ್ಮ ಎಲ್ಲಾ ಶಕ್ತಿ-ಸಾಮರ್ಥ್ಯಗಳನ್ನು ಒರೆಗಚ್ಚಿ ಮಹಾತ್ವಾಕಾಂಕ್ಷೆಯಿಂದ ಸಾಹಿತ್ಯ ಲೋಕಕ್ಕೆ ಪ್ರವೇಶಿಸಬೇಕೆಂದು ಚಡಪಡಿಸುತ್ತಿರುವ ಕೆಲವೇ ತರುಣ ಬರಹಗಾರರಲ್ಲಿ **ಕಲ್ಲೇಶ್ ಕುಂಬಾರ್**‌ರ ನಿಸ್ಸಂದೇಹವಾಗಿ ಒಬ್ಬರು.

ಕಲ್ಲೇಶ್ ಕುಂಬಾರ್‌ರ ಈ ಪ್ರಥಮ ಕಥಾ ಸಂಕಲನ ಕನ್ನಡದ ಸಣ್ಣ ಕಥೆಗಳಲ್ಲಿ ಒಂದು ವಿಚಿತ್ರ ತಿರುವಿನಲ್ಲಿ ಸಿಕ್ಕು ಹೊಯ್ದಾಡುತ್ತಿರುವ ಗಳಿಗೆಯಲ್ಲಿ ಪ್ರಕಟವಾಗುತ್ತಿದೆ. ಜಾಗತೀಕರಣದ ಹೊಸಗಾಳಿ ಈಗ ಕನ್ನಡದ ಸೃಜನಶೀಲತೆಯ ಮೇಲೂ ತೀವ್ರವಾಗಿ ಬೀಸುತ್ತಿದೆ. ಈ ಹೊಸಗಾಳಿ ಸೃಷ್ಟಿಸುತ್ತಿರುವ ಕಂಪನಗಳಿಗೆ ತೆರಕೊಂಡು ಕೆಲವೇ ಬರಹಗಾರರು ಅವರು ಕಟ್ಟಿ ಕೊಡುತ್ತಿರುವ ಕಥೆಗಳು ಮತ್ತು ಅನುಭವಗಳು ವಿಪರೀತ ಚರ್ಚೆಯ ಕೂಡ ವಿಮರ್ಶಾವಲಯವನ್ನು ತುಂಬಿಕೊಂಡಿದೆ. ಇಲ್ಲಿ ಕಂಡು ಬರುವ ಎಲ್ಲಾ ಕಥೆಗಳು ಸಹ ಅದಕ್ಕೆ ಹೊರತಾಗಿಲ್ಲ.

ಕಲ್ಲೇಶ್ ಕುಂಬಾರ್‌ರ ಹಿಂದುಳಿದ ಪ್ರದೇಶ ಮತ್ತು ವರ್ಗಕ್ಕೆ ಸೇರಿದವರು. ಇದನ್ನು ಅವರ ಕಥೆಗಳೇ ಸ್ವಯಂ ತಾವೇ ಧ್ವನಿ ತೆಗೆದು ಹೇಳುವಂತಿವೆ. ಇಲ್ಲಿರುವ ಒಂಬತ್ತು ಕಥೆಗಳನ್ನು ಒಂದೇ ಹಿಡಿಗೆ ಓದಿದರೆ ಈ ಕಥೆಗಳು ಒಂದು ನೀಳ ಕಾದಂಬರಿಯ ವಿವಿಧ ಭಾಗಗಳಂತೆ ಒಂದು ಪ್ರದೇಶದ ಜೀವನ ಕಥೆಯ ಹಲವು ಸೀಳುಗಳನ್ನು ಒಂದು ಎಳೆಗೆ ತಂದು ಜೋಡಿಸಿದಂತೆ ಬಾಸವಾಗುತ್ತವೆ. ಒಟ್ಟಿನಲ್ಲಿ ಈ ಉರಿಯ ನಾಲಿಗೆಯ ಮೇಲೆ ಕಥಾ ಸಂಕಲನದಲ್ಲಿ ಬರುವ ಎಲ್ಲಾ ಕಥೆಗಳನ್ನು ಗಮನಿಸಿದರೆ ಅವುಗಳ ತಿರುಳು ಅವುಗಳ ಹೋಲಿಕೆ, ಅವುಗಳ ಶೈಲಿ ಎಲ್ಲವನ್ನು ಗಮನಿಸಿದರೆ ಈ ಒಂಬತ್ತು ಕಥೆಗಳನ್ನು ವಿಮರ್ಶೆ ಮಾಡುವುದು ಅವಶ್ಯಕ ಎನಿಸುವುದು.

೨.೧ ಉರಿಯ ನಾಲಿಗೆಯ ಮೇಲೆ :

'ಉರಿಯ ನಾಲಿಗೆಯ ಮೇಲೆ' ಈ ಕಥೆಯಲ್ಲಿ ಕಥೆಗಾರ **ಕಲ್ಲೇಶ್ ಕುಂಬಾರ್**ರು ಒಂದು ಹೆಣ್ಣಿನ ಬದುಕಿನಲ್ಲಿ ನಡೆಯುವ ಅನೇಕ ಘಟನೆಗಳನ್ನು ಎತ್ತಿ ತೋರಿದ್ದಾರೆ. **ರತ್ನವ್ವ** ಎಂಬ ಹೆಣ್ಣಿನ ಜೀವನದಲ್ಲಿ ಯಾವ ರೀತಿ ವಿಧಿಯಾಟ ಆಡುವುದನ್ನು ಎಂಬುದನ್ನು ಚಿತ್ರಿಸುವುದರ ಜೊತೆಗೆ ಆ ವಿಧವೆ ರತ್ನವ್ವನ ಮಗಳು ಯಲ್ಲವ್ವನ ರೂಪ ಸೌಂದರ್ಯಕ್ಕೆ ಊರಿನ ಗೌಡ ಈರನಗೌಡ ಮರಳಾಗುವುದನ್ನು ಹಾಗೂ ಆ ಗೌಡನ ಕಾಮದಾಹಕ್ಕೆ ರತ್ನವ್ವನ ಬದುಕಿಗೆ ಆಧಾರವಾಗಿದ್ದ ಎಲ್ಲಮ್ಮ ದೇವಿಯ ಪೂಜೆ ಮತ್ತು ಕೊಂಡದ ಜಾತ್ರೆಯಲ್ಲಿ ಕಿಚ್ಚು ಹಾಯುವುದನ್ನು ಬಿಡಿಸಿ ಕಥೆಗಾರರು ವರ್ಣರಂಜಿತವಾಗಿ ವಿವರಿಸಿದ್ದಾರೆ.

**"ಆಳುವವರ ಆಸರೆ ಕೆಳಗಿರುವ
ಪುಟ್ಟಗುಡಿನ ಹಕ್ಕಿ ಚಿತ್ಕರಿಸಿ ಕರೆದಾಗ
ರಾತ್ರಿ ಬೆಳಗಾಗುವ ಕ್ಯಾಂಡಲು ಗಗ್ಗನೆ
ಆರಿದೆ"!**

ಮೇಲಿನ ಕವನ ಹೇಳುವಂತೆ ಗ್ರಾಮೀಣ ಪ್ರದೇಶಗಳಲ್ಲಿ ಊರಗೌಡರ ದರ್ಬಾರು ಯಾವ ರೀತಿ ಇರುತ್ತದೆ ಎಂಬುದು ಈ ಕಥೆಯಿಂದ ತಿಳಿದು ಬರುತ್ತದೆ. ವಿಧವೆ ರತ್ನವ್ವನ ಮಗಳು ಹೈಸ್ಕೂಲಿಗೆ ಹೋದಾಗ ಆ ಹುಡುಗಿ ಯಲ್ಲವ್ವ ರೂಪವತಿಯು ಆಗಿದ್ದು, ಆಕೆ ಶಾಲೆಯಲ್ಲಿ ನಡೆಯುವ ಅನೇಕ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿದ್ದಳು. ಆ ಸಂದರ್ಭದಲ್ಲಿ ಅವಳ ಸೌಂದರ್ಯಕ್ಕೆ ಮರುಳಾದ ಈರನಗೌಡ ಆ ಹುಡಿಗಯ ಸಲುವಾಗಿ ಆ ಕುಟುಂಬಕ್ಕೆ ಖಳನಾಗಿ ಬಿಡುತ್ತಾನೆ. "ಇಲ್ಲಿ ಈರನಗೌಡನ ದಬ್ಬಾಳಿಕೆ ಎದ್ದು ಕಾಣುತ್ತದೆ. ಆತ ತನ್ನ ಅಧಿಕಾರವನ್ನು ಚಲಾಯಿಸಿ ಆ ಶಾಲೆಯ ಶಿಕ್ಷಕರ ಮೇಲೆಯು ದಬ್ಬಾಳಿಕೆಯನ್ನು ತೋರಿಸ ತೊಡಗಿದ. ಜೊತೆಗೆ ಶಾಲೆಯಲ್ಲಿಯೇ ಯಲ್ಲವ್ವನ ಮೈಕೈಯಿ ಮುಟ್ಟುವುದು, ಮಾತನಾಡುವುದು ಜೋರಾಗಿ ನಡೆಯಿತು. ಇದನ್ನು ನೋಡಿದ ಶಿಕ್ಷಕರು ಮೂಕ ಪ್ರೇಕ್ಷಕರಾಗಿ ಬಿಟ್ಟರು"[೧].

ಇಲ್ಲಿ ಏನು ತಿಳಿಯುತ್ತದೆ ಎಂದರೆ ಹಳ್ಳಿಗಳಲ್ಲಿ ಶ್ರೀಮಂತ ಜನರು ಅಥವಾ ಊರಿನ ಗೌಡರು ಏನು ಮಾಡಿದರು ನಡೆಯುತ್ತದೆ ಎಂಬುದನ್ನು ಲೇಖಕರು ಎತ್ತಿ ತೋರಿಸುವದರೊಂದಿಗೆ ಅವರ ದಬ್ಬಾಳಿಕೆಯನ್ನು ಸಹ ಚಿತ್ರಿಸಿದ್ದಾರೆ. ಇದರಿಂದ ಊರಿನ ಜನರೆಲ್ಲ ಗೌಡನ ಕೈಗೊಂಬೆಯಾಗಿರಬೇಕು ಎಂಬುದು ತಿಳಿದು ಬರುತ್ತದೆ. ಈ ಒಂದು ಪರಿಸ್ಥಿತಿಯು ಸಧ್ಯದ ಕಾಲದಲ್ಲಿಯು ಕೂಡಾ ಅನೇಕ ಹಳ್ಳಿಗಳಲ್ಲಿ ಈಗಲೂ ಕಂಡು ಬರುತ್ತದೆ. ಇಂತಹ ವ್ಯಕ್ತಿಗತ ಸೊಕ್ಕನ್ನು ಮುರಿಯುವುದೇ ಲೇಖಕರ ಉದ್ದೇಶವಾಗಿರುವುದು ಇಲ್ಲಿ ಕಂಡು ಬರುತ್ತದೆ.

---

೧. **ಕಲ್ಲೇಶ್ ಕುಂಬಾರ್‌ರ : ಕವನಸಂಕಲನ : ಪುರುಷದಾರಿಯ ಮೇಲೆ : (ಭುಜಗಳು ಕವನ) ಪುಟ ಸಂಖ್ಯೆ : ೦೩**

ಈ ಮೇಲಿನ ಎಲ್ಲಾ ಸ್ಥಿತಿಗತಿಗಳನ್ನು ತಿಳಿದುಕೊಂಡ ಯಲ್ಲವ್ವನ ತಾಯಿ ರತ್ನವ್ವ ಇದನನ್ನು ಸಹಿಸಿಕೊಳ್ಳಲಾಗಲಿಲ್ಲ. ತನ್ನ ಮಗಳ ಮೇಲೆ ಕಣ್ಣಾಕಿದವರನ್ನು ಸುಮ್ಮನೇ ಬಿಡಬಾರದೆಂದು ರತ್ನವ್ವ ನೇರವಾಗಿ ಈರನಗೌಡನ ಮನೆಗೆ ನಡೆದಳು. ಅಲ್ಲಿ ರತ್ನವ್ವ ತನ್ನ ಬಾಯಿಗೆ ಬಂದ ಎಲ್ಲಾ ಅಶ್ಲೀಲ ಬೈಗಳುಗಳನ್ನು ಈರನಗೌಡನಿಗೆ ಬೈದಳು. ತನ್ನ ಕೋಪ ಕರಗುವ ತನಕ ಚಿರಾಡಿದಳು. ರತ್ನವ್ವ ಯಾರಿಗೂ ಹೆದರದೆ ಈರನಗೌಡನ ವಿರುದ್ಧ ಎದೆ ತಟ್ಟಿ ನಿಂತಳು. ಗೌಡನ ವಿರೋಧವನ್ನು ಕಟ್ಟಿಕೊಂಡಳು. ಆ ಸಮಯದಲ್ಲಿ ಊರಿನ ಜನರೆಲ್ಲ ಅಲ್ಲಿಯೇ ಸೇರಿಕೊಂಡರು. ಇದನೆಲ್ಲವನ್ನು ನೋಡಿಕೊಂಡು ಈರನಗೌಡನಿಗೆ ತುಂಬಾ ಅಪಮಾನವಾಯಿತು. ಇದೇ ರತ್ನವ್ವನ ಜೀವನಕ್ಕೆ ಮುಳುವಾಯಿತು. ಇದರಿಂದ ರತ್ನವ್ವ ದೇವಿಯ ಜಾತ್ರೆಯನ್ನು ಮಾಡುವುದನ್ನು ಮತ್ತು ಕಿಚ್ಚು ಹಾಯುವುದನ್ನು ನಿಲ್ಲುಸುವಂತಾಯಿತು.

ಚಿಕ್ಕಂದಿನಲ್ಲಿದ್ದಾಗಲೇ ತನ್ನ ತಂದೆ–ತಾಯಿಯನ್ನು ಕಳೆದುಕೊಂಡಿದ್ದ ರತ್ನವ್ವ ತನ್ನ ಅಣ್ಣನ ಆಶ್ರಯದಲ್ಲಿ ಬೆಳೆದು ದೊಡ್ಡವಳಾಗುತ್ತಿದ್ದಂತೆ ಅಣ್ಣ ಶಿವರಾಯಿ ಒಳ್ಳೆಯ ಮನೆತನ ನೋಡಿ ರತ್ನವ್ವನನ್ನು ಮದುವೆ ಮಾಡಿಕೊಡುತ್ತಾನೆ. ಆದರೆ ರತ್ನವ್ವನ ಗಂಡ ವಿಪರಿತ ಕುಡಿತದ ಚಟವನ್ನು ಹೊಂದಿದ್ದ. ಅಂತಹ ಕಷ್ಟದಲ್ಲಿಯೂ ರತ್ನವ್ವ ಒಂದು ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ. ತವರಿನಲ್ಲಿ ಬಾನಂತಿತನವನ್ನು ಮುಗಿಸಿ ಗಂಡನ ಮನೆಗೆ ಹೋಗುತ್ತಾಳೆ. ಆದರೆ ಅಲ್ಲಿ ರತ್ನವ್ವನ ಗಂಡ ತಿಪ್ಪಣ್ಣ ಕುಡಿತ ಚಟದಿಂದ ಕೆಲವೇ ದಿನಗಳಲ್ಲಿ ತೀರಿಕೊಳ್ಳುತ್ತಾನೆ. ನಂತರ ರತ್ನವ್ವ ತನ್ನ ಮಗಳು ಯಲ್ಲವ್ವನನ್ನು ಕರೆದುಕೊಂಡು ತನ್ನ ಅಣ್ಣನಾದ ಶಿವರಾಯಿ ಹತ್ತಿರ ಬಂದು ಶಾಶ್ವತವಾಗಿನೆಲೆ ನಿಲ್ಲುತ್ತಾಳೆ. ಕೆಲವು ವರ್ಷಗಳಲ್ಲಿ ಅಣ್ಣ ಶಿವರಾಯಿ ಕೂಡಾ ಹೃದಯಾಘಾತದಿಂದ ತೀರಿಕೊಳ್ಳುತ್ತಾನೆ. ಇದರಿಂದ ರತ್ನವ್ವ ಅನಾಥಳಾಗುತ್ತಾಳೆ. ಆದರೆ ಮುಂದೆ ರತ್ನವ್ವ ತನ್ನ ಹೊಟ್ಟೆಪಾಡಿಗಾಗಿ ಯಲ್ಲಮ್ಮ ದೇವಿಯ ಪೂಜೆ ಮತ್ತು ಕಿಚ್ಚು ಹಾಯುವುದನ್ನು ಮುಂದುವರೆಸುತ್ತಾಳೆ. ಆದರೆ ಈ ಕೆಲಸ ಈರನಗೌಡನ ಆಜ್ಞೆಯ ಮೇರೆಗೆ ನಿಂತು ಹೋಗುತ್ತದೆ. ಇದರಿಂದ ರತ್ನವ್ವ ಮತ್ತು ಅವಳ ಮಗಳು ಯಲ್ಲವ್ವ ಮತ್ತಷ್ಟು ಸಂಕಷ್ಟದಲ್ಲಿ ಸಿಲುಕವಂತಾಗುತ್ತದೆ.

ಹೆಣ್ಣಿನ ಬಾಳಿನಲ್ಲಿ ಎಷ್ಟೊಂದು ಕಷ್ಟಗಳು ಬರುತ್ತವೆ ಎಂಬುದು ಈ ಮೇಲಿನ ಘಟನೆಗಳನ್ನು ನೋಡಿದರೆ ತಿಳಿಯುತ್ತದೆ. ಇಷ್ಟಾದರೂ ದೃತಿಗೆಡದೆ ಹೆಣ್ಣು ಧೈರ್ಯದಿಂದ ಊರಿನ ಗೌಡನ ವಿರುದ್ಧ ಸಿಡಿದೆದ್ದಿದ್ದಾಳೆ ಎಂದರೆ ಇಂತಹ ಹೆಣ್ಣನ್ನು ಮೆಚ್ಚಲೇಬೇಕು. ಯಾಕೆಂದರೆ ಸಮಯ ಸಾದಕತ್ವದ ಈಗಿನ ಕಾಲದಲ್ಲಿ ಹಣಕ್ಕೆ ಬೆಲೆ ಕೊಡುವ ಕಾಲದಲ್ಲಿ ತನ್ನ ಮತ್ತು ತನ್ನ ಮಗಳ ಮಾನ–ಮರ್ಯಾದೆ ಸಲುವಾಗಿ ತನ್ನ ಹೊಟ್ಟೆಯ ಉದ್ಯೋಗವನ್ನು ಲೆಕ್ಕಿಸದೇ ಊರಿನ ಗೌಡನ ವಿರುದ್ಧ ಹೋರಾಟಕ್ಕೆ ನಿಂತಿರುವುದು ಹೆಮ್ಮೆಯ ಸಂಗತಿ.

ಇಷ್ಟೆಲ್ಲ ಆದರೂ ರತ್ನವ್ವ ಮನೆಯಲ್ಲಿದ್ದಾಗ ಈರನಗೌಡನು ಮತ್ತೊಂದು ಕುತಂತ್ರ ಹೆಣಯುತ್ತಾನೆ. ಅದೇನೆಂದರೆ ರತ್ನವ್ವನ ಮನೆ ಇದ್ದದ್ದು ಶಾಲೆಯ ಆವರಣದಲ್ಲಿ ಎಂದು ಹೇಳಿ ಶಾಲೆಯ ಆಡಳಿತ

ಮಂಡಳಿಯ ಎಲ್ಲಾ ಸದಸ್ಯರಿಗೆ ರತ್ನವ್ವನ ಮೈ ಮೇಲೆ ದೇವರು ಬರುವುದಿಲ್ಲ. ಅವಳು ಸುಳ್ಳು ನಾಟಕ ಮಾಡುತ್ತಿದ್ದಾಳೆ. ಅದಕ್ಕಾಗಿ ಅವಳ ಮನೆಯು ನಮ್ಮ ಶಾಲೆಯ ಆವರಣದಲ್ಲಿದೆ. ಆದರಿಂದ ಆ ಮನೆಯನ್ನು ಕೆಡವಿ ಶಾಲೆಯ ಆವರಣ ಮಾಡೋಣ ಎಂದು ಎಲ್ಲ ಸದಸ್ಯರಿಗೆ ಹೇಳುತ್ತಾನೆ. ಇದನ್ನು ಕೇಳಿದ ಸದಸ್ಯರು, ಚೇರಮನ್ನರು ಈರನಗೌಡನ ಮಾತಿಗೆ ಒಪ್ಪಿಕೊಳ್ಳುತ್ತಾರೆ ಮತ್ತು ಈರನಗೌಡನ ಶಾಲೆಯ ಆವರಣದಲ್ಲಿದ್ದ ದೇವಿಯ ಗುಡಿಯನ್ನು ಸಹ ತಮ್ಮ ಶಾಲೆಯ ಜಾಗೆಯಲ್ಲಿದೆ ಎಂದು ತಮ್ಮ ಹೆಸರಿಗೆ ಮಾಡಿಸಿಕೊಂಡು ಬಿಡುತ್ತಾರೆ. ಇದರಿಂದ ರತ್ನವ್ವ ಇನ್ನು ಮುಂದೆ ದೇವಿಯ ಗುಡಿಯು ನಮ್ಮ ಆಧೀನದಲ್ಲಿದೆ. ಪೂಜೆ–ಪುನಸ್ಕಾರ ಯಾರ ಕೈಯಿಂದ ಮಾಡಿಸಬೇಕೆಂಬುದು ನಮಗೆ ಸಂಬಂಧ ಪಟ್ಟಿದ್ದು, ನಾವು ಯಾರಿಗೆ ಬೇಕಾದರೂ ಹೇಳುತ್ತೇವೆ. ಅವರೇ ಪೂಜೆ ಮಾಡಬೇಕು. ಕಿಚ್ಚು ಹಾಯಬೇಕು ಎನ್ನುತ್ತಾನೆ ಈರನಗೌಡ. ಆದರೆ ರತ್ನವ್ವ ಇದನ್ನೆಲ್ಲ ಲೆಕ್ಕಿಸದೇ ನಾನು ದೇವಿ ಜಾತ್ರೆಯಲ್ಲಿ ಕಿಚ್ಚು ಹಾಯ್ದು ತೀರುತ್ತೇನೆ. ಇದನ್ನು ಯಾರು ತಡೆಯುತ್ತಾರೆ ಎಂದು ನೋಡುತ್ತೇನೆ ಎಂದು ಪ್ರತಿಸವಾಲು ಹಾಕುವಲ್ಲಿ ಕಥೆ ಮುಕ್ತಾಯವಾಗುತ್ತದೆ.

ಈ ಕಥೆಯ ಸಂಪೂರ್ಣ ವಿವರಣೆಯನ್ನು ನೋಡಿದರೆ ಹೆಣ್ಣು ಎಷ್ಟೇ ಕಷ್ಟಗಳು ಬಂದರು ಅದನನ್ನು ಸಹಿಸಿ ಅವುಗಳಿಗೆ ತಕ್ಕ ಉತ್ತರ ನೀಡುತ್ತಾಳೆ ಎಂಬುದು ತಿಳಿಯುತ್ತದೆ. ಹಾಗೂ ಹೆಣ್ಣು ಮನಸ್ಸು ಮಾಡಿದರೆ ಏನೆಲ್ಲ ನಡೆಯಬಹುದು ಎಂಬುದನ್ನು ಈ ಕಥೆಯಲ್ಲಿ ನಾವು ತಿಳಿಯಬಹುದು. ಎಷ್ಟೇ ಕಷ್ಟಗಳು ಬಂದರು ಅದನನ್ನು ಧೈರ್ಯದಿಂದ ಎದುರಿಸುವ ಸಾಮರ್ಥ್ಯಬೇಕು ಎಂಬುದನ್ನು ಈ ಕಥೆಯಲ್ಲಿ ಬರುವ ರತ್ನವ್ವನ ಪಾತ್ರದಿಂದ ತಿಳಿದು ಬರುತ್ತದೆ.

ಲೇಖಕರು ಈ ಕಥೆಯಲ್ಲಿ ಹೆಣ್ಣಿನ ಮೇಲೆ ನಡಯುವ ಶೋಷನೆಯನ್ನು ಸಹ ಚಿತ್ರಿಸಿದಂತೆ ಕಾಣುತ್ತದೆ. ಅಂದರೆ ಅವರ ಅಸಹಾಯಕತೆಯು ಇಲ್ಲಿ ತಿಳಿಯುತ್ತದೆ. ಜೋಗತಿಯರು ಜೋಗ ಬೇಡುವುದು, ದೇವಿ ಜಾತ್ರೆಯಲ್ಲಿ ಜೋಗತಿಯರು ಕುಣಿಯುವುದು. ಆ ಕುಣಿತವನ್ನು ನೋಡುತ್ತ ಗಂಡಸರು ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯಗಳು ಇಲ್ಲಿ ತಿಳಿದು ಬರುತ್ತದೆ ಮತ್ತು ಈ ಕಥೆಯಲ್ಲಿ ಬರುವಂತೆ ಮಾತಿನ ಶೈಲಿ ಸ್ವಲ್ಪ ಅಶ್ಲೀಲತೆಯಿಂದ ಕೂಡಿದಂತೆ ಕಂಡು ಬಂದರೂ ಸಂದರ್ಭಕ್ಕೆ ತಕ್ಕಂತೆ ಉಚಿತವಾಗಿ ಮೂಡಿ ಬಂದಿದೆ.

ಉದಾ : ಬೈಗಳುಗಳು, ಅನೇಕ ಮಾತಿನ ಶೈಲಿಗಳು.

ಈ 'ಉರಿಯ ನಾಲಿಗೆಯ ಮೇಲೆ' ಎಂಬ ಕಥೆಯು ಜನಪದ ಶೈಲಿಯನ್ನು, ಜನಪದ ಕಲೆಯನ್ನು ಮತ್ತು ಉತ್ತರ ಕರ್ನಾಟಕದ ಭಾಷೆಯ ಶೈಲಿಯನ್ನು ಈ ಭಾಗದ ಜನರ ಜೀವನ ನಡೆ–ನುಡಿ, ಜನರ ಬದುಕನ್ನು ಎತ್ತಿ ಹಿಡಿದಿದೆ ಎಂದು ಹೇಳಬಹುದು. ಈ ಕಥೆಯು ಕೇವಲ ಒಂದು ಕಥೆಯಾಗಿ ನಿಲ್ಲದೇ ಅದು ಸದ್ಯದ ಪರಿಸ್ಥಿತಿಯನ್ನು ನಡೆಯುವ ಘಟನೆಗಳ ಅನಾವರಣವಾಗಿದೆ ಎಂದು ಹೇಳಬಹುದು. ಈ ಕಥೆಯಲ್ಲಿ ಬರುವ ಕಥಾಸಾರವು ನಿಜ ಜೀವನದಲ್ಲಿ ನಡೆದಂತೆ ಮತ್ತು

ಕಣ್ಣ ಮುಂದೆ ಕಟ್ಟಿದಂತೆ ಲೇಖಕರು ವರ್ಣಿಸಿದ್ದಾರೆ. ಈ ಕಥೆಯಲ್ಲಿ ಹಳ್ಳಿಗಳಲ್ಲಿ ನಡೆಯುವ ಜಾತ್ರೆ, ಹಬ್ಬಗಳ ವರ್ಣನೆಯನ್ನು ಇನ್ನಷ್ಟು ಹೆಚ್ಚಿಸಬಹುದಿತ್ತು. ಅಲ್ಲದೇ ದೇವರ ಬಗ್ಗೆ ಹೆಚ್ಚಿನ ಪ್ರಸ್ತಾಪಿಸದಿದ್ದರು ದೇವರು ಮೈ ಮೇಲೆ ಬರುವುದು, ದೇವರ ಹೇಳುವುದು, ಕುಣಿಯುವುದು, ಕಿಚ್ಚು ಹಾಯುವುದು ಇವೆಲ್ಲ ಮೂಢನಂಬಿಕೆಯಂತೆ ಕಂಡು ಬಂದರೂ ಈ ಕಥೆಯ ವಾಸ್ತವದ ಸ್ಥಿತಿಗೆ ತಕ್ಕಂತೆ ಮೂಡಿ ಬಂದಿವೆ ಎಂದು ಹೇಳಬಹುದು.

ಈ ಕಥೆಯಲ್ಲಿ ಬರುವ ಎಲ್ಲಾ ಆಚರಣೆಗಳು ಕೇವಲ ಹಳ್ಳಿಗಳಿಗೆ ಮಾತ್ರ ಸೀಮಿತವಾದಂತವುಗಳೆನ್ನಬಹುದು. ಆದರೆ ಈ ಎಲ್ಲ ಘಟನೆಗಳು ಬದುಕಿನಲ್ಲಿ ನಡೆಯುವ ಘಟನೆಗಳಂತೆ ಮೂಡಿ ಬಂದಿವೆ. ಲೇಖಕರು ಒಳ್ಳೆಯ ರೀತಿಯಿಂದ ಗ್ರಾಮೀಣ ಪ್ರದೇಶದ ಸೊಗಡನ್ನು ಈ ಕಥೆಯಲ್ಲಿ ಚಿತ್ರಿಸಿದ್ದಾರೆ. ಈ ಕಥೆಯಲ್ಲಿ ಕಂಡು ಬರುವ ಎಲ್ಲಾ ವಿವರಣೆ ಕೇವಲ ಗ್ರಾಮೀಣ ಪ್ರದೇಶಕ್ಕೆ ಸೀಮಿತ ಎನಿಸಿದರೂ ನಗರ ಪ್ರದೇಶಗಳಿಗೂ ಅನ್ವಯಿಸುವಂತಿವೆ. ಒಟ್ಟಿನಲ್ಲಿ ಈ ಕಥೆಯಲ್ಲಿ ನಿಜ ಜೀವನದಲ್ಲಿ ನಡೆಯುವ ಎಲ್ಲಾ ಘಟನೆಗಳನ್ನು ಕ್ರೂಡಿಕರಿಸಿ ವಿವರಿಸಿದಂತೆ ಕಂಡು ಬರುತ್ತದೆ.

'ಉರಿಯ ನಾಲಿಗೆಯ ಮೇಲೆ' ಈ ಕಥೆಯಲ್ಲಿಯು ಕೆಲವು ಲೋಪ-ದೋಷಗಳು ಕಂಡು ಬಂದರು ಅವು ಅಷ್ಟೊಂದು ಎದ್ದು ಕಾಣುವುದಿಲ್ಲ. ಅಂದರೆ ಈ ಕಥೆಯಲ್ಲಿ ಕಂಡು ಬರುವ ಭಾಷೆಯ ಶೈಲಿಯು ಉತ್ತರ ಕರ್ನಾಟಕಕದಾಗಿದ್ದು, ಅದರಲ್ಲಿಯು ಮುಂಬಯಿ ಕರ್ನಾಟಕದ ಶೈಲಿಯಲ್ಲಿ ಮರಾಠಿ ಮಿಶ್ರಿತ ಕನ್ನಡ ಶೈಲಿಯನ್ನು ಹೊಂದಿದ್ದರು. ಆ ಪ್ರದೇಶಕ್ಕೆ ಅದು ಹೊಂದಿಕೊಂಡಿದೆ. ಮತ್ತು ಈ ಕಥೆಯಲ್ಲಿ ಬಳಸಿದ ಭಾಷೆಯು ಸಂಪೂರ್ಣ ಗ್ರಾಮ ರೂಪದಲ್ಲಿ ಇರುವುದು ಕಂಡುಬರುತ್ತದೆ. ಆದರೆ ಲೇಖಕ ಈ ಗ್ರಾಮ ಭಾಷೆಯ ಪದಗಳನ್ನು ಅತ್ಯಂತ ರಂಜನೀಯವಾಗಿ ವರ್ಣಿಸಿದ್ದಾರೆ.

ಈ ಕಥೆಯಲ್ಲಿ ಬರುವ ಪಾತ್ರಗಳಲ್ಲಿ ಹೆಚ್ಚಿನ ಆಧ್ಯತೆಯನ್ನು ರತ್ನವ್ವನ ಪಾತ್ರಕ್ಕೆ ನೀಡಿದ್ದಾರೆ. ಈ ಕಥೆಯಲ್ಲಿ ಇನ್ನು ಅನೇಕ ಪಾತ್ರಗಳನ್ನು ಸೃಷ್ಟಿಸಬಹುದಿತ್ತು. ಅಲ್ಲದೇ ರತ್ನವ್ವನ ಮಗಳು ಯಲ್ಲವ್ವನ ಪಾತ್ರವನ್ನು ಸಹ ಇನ್ನೂ ವಿವರಿಸಬಹುದಿತ್ತು. ಅಲ್ಲದೇ ಈ ಕಥೆಯಲ್ಲಿ ಎಲ್ಲಿಯೂ ಸಹ ಹಾಸ್ಯದ ಸನ್ನಿವೇಶಗಳು ಕಂಡು ಬರುವುದಿಲ್ಲ. ಆದರೂ ಸಹ ಲೇಖಕ ಈ ಕಥೆಗೆ ತಕ್ಕಂತೆ ಪಾತ್ರಗಳನ್ನು ಇಟ್ಟುಕೊಂಡು ಅವುಗಳನ್ನು ಮುಂದುವರೆಸಿಕೊಂಡು ಬಂದಿದ್ದಾನೆ. ಕಥೆಗಾರ ಪಾತ್ರಗಳಿಗೆ ತಕ್ಕಂತೆ ಮಾತುಗಳನ್ನು ಜೋಡಿಸಿರುವುದು ಎದ್ದು ಕಾಣುತ್ತದೆ. ಒಟ್ಟಿನಲ್ಲಿ ಲೇಖಕ ಗ್ರಾಮೀಣ ಪ್ರದೇಶದ ಜನರ ಜೀವನಕ್ಕೆ ಅವರ ಬದುಕಿಗೆ ತಕ್ಕಂತೆ ಈ ಕಥೆಯನ್ನು ಹೆಣೆದಿದ್ದಾನೆ.

ಮಂಜುನಾಥ ಲತಾ ಹೇಳುವ ಪ್ರಕಾರ **ಕಲ್ಲೇಶ್ ಕುಂಬಾರ್**ರು ಒಬ್ಬ ಸಾಮಾಜಿಕ ಕಥೆಗಾರರು. "ಈ ಕಥೆಯು ಸಮಾಜಕ್ಕೆ ಒಂದು ಸಂದೇಶವನ್ನು ನೀಡುತ್ತದೆ. ಅಂದರೆ ಸಮಾಜದಲ್ಲಿ ಶ್ರೀಮಂತರ ದೌರ್ಜನ್ಯ ಮತ್ತು ಸಾಮಾನ್ಯ ಜನರನ್ನು ಅಂತಹ ಜನರು ಯಾವ ರೀತಿ ಬಳಸಿಕೊಳ್ಳುತ್ತಾರೆ ಎಂಬುವುದನ್ನು

ಅದರ ಜೊತೆಗೆ ಸಮಾಜದಲ್ಲಿ ಒಂದು ದಿಕ್ಕು ಇಲ್ಲದ ಹೆಣ್ಣಿನ ಮೇಲೆ ಯಾವ ರೀತಿಯ ಶೋಷಣೆಗಳು ನಡೆಯುತ್ತವೆ ಎಂಬುದನ್ನು ಮತ್ತು ಅಂತಹ ಎಲ್ಲ ಕಷ್ಟಗಳನ್ನು ಎದುರಿಸಿ ತನ್ನ ಹೊಟ್ಟೆಯ ಉದ್ಯೋಗವನ್ನು ಲೆಕ್ಕಿಸದೇ ದಿಟ್ಟತನದಿಂದ ಹೋರಾಡುವ ಒಂದು ಹೆಣ್ಣಿನ ಬಗ್ಗೆ ಕಥೆಗಾರ ತುಂಬಾ ಮಾರ್ಮಿಕವಾಗಿ ಈ ಕಥೆಯಲ್ಲಿ ಮನಮುಟ್ಟುವ ರೀತಿಯಲ್ಲಿ ವರ್ಣಿಸಿದ್ದಾರೆ"[೨]. ಅದರ ಜೊತೆಗೆ ಈ ಕಥೆಯಲ್ಲಿ ಗೌಡರ ಧರ್ಬಾರ ಯಾವ ರೀತಿ ಇರುತ್ತದೆ ಎಂಬುದನ್ನು ಸಹ ತಿಳಿಸಿದ್ದಾರೆ. ಇಲ್ಲಿ ಶ್ರೀಮಂತ ವರ್ಗದವರು ಏನು ಬೇಕಾದನ್ನು ಮಾಡಿದರೆ ನಡೆಯುತ್ತದೆ ಎಂಬುದನ್ನು ತಿಳಿಸಿದ್ದಾರೆ. ಯಾಕೆಂದರೆ ಊರಿನ ಗೌಡ ಅನಾಥ ರತ್ನವ್ವನ ಮೇಲೆ ಯಾವ ರೀತಿಯಾಗಿ ಸೇಡನ್ನು ತಿರಿಸಿಕೊಳ್ಳುತ್ತಾನೆ ಎಂಬುದನ್ನು ಈ ಕಥೆಯಲ್ಲಿ ತಿಳಿಯುತ್ತದೆ. ಆದರಿಂದ ಈ ಕಥೆಯು ಹಳ್ಳಿಗಳಲ್ಲಿ ನಡೆಯುವ ಗೌಡರ ಧರ್ಬಾರನ್ನು ನೆನೆಪಿಸುತ್ತದೆ. ಮತ್ತು ಅವರು ಮಾಡುವ ಕಾರ್ಯಗಳ ಬಗ್ಗೆ ಈ ಕಥೆಯು ಬೆಳಕನ್ನು ಚಲ್ಲುತ್ತದೆ. ಆದರಿಂದ ಈ ಕಥೆಯು ಗ್ರಾಮೀಣ ಪ್ರದೇಶದ ಬದುಕನ್ನು ನೆನೆಪಿಸುವಂತೆ ಕಥೆಯಾಗಿದೆ ಎಂದು ಹೇಳಬಹುದು.

ಈ ಕಥೆಯಲ್ಲಿ ಲೇಖಕರು ಕಥೆಯ ತಿರುಳನ್ನು ಹಿಂದ–ಮುಂದೆ ಮಾಡಿ ಬರೆದಿದ್ದಾರೆ ಎನಿಸುತ್ತದೆ. ಆದರೆ ಕಥೆಯನ್ನು ಓದುತ್ತಾ ಹೋದಂತೆ ಕಥೆಯ ಸಂಪೂರ್ಣ ಮಾಹಿತಿಯು ದೊರೆಯುತ್ತದೆ. ಇಲ್ಲಿ ನಮಗೆ ಮತ್ತೊಂದು ಸಂಗತಿ ತಿಳಿಯುತ್ತದೆ. ಈ ಕಥೆಯಲ್ಲಿ ಲೇಖಕ ಸಂಪೂರ್ಣವಾಗಿ ಹಳ್ಳಿಯ ಭಾಷೆಯನ್ನೇ ಬಳಸಿದ್ದಾರೆ ಎಂದು ಅನಿಸುತ್ತದೆ. ಯಾಕೆಂದರೆ ಇಲ್ಲಿ ಕಂಡು ಬರುವ ಪಾತ್ರದ ಬೆಳವಣಿಗೆ ಸಂಪೂರ್ಣ ಹಳ್ಳಿಯ ಶೈಲಿಯಲ್ಲಿ ಕಂಡು ಬರುತ್ತದೆ. ಇದರ ಜೊತೆಗೆ ಈ ಕಥೆಯಲ್ಲಿ ಗ್ರಾಮೀಣ ಪ್ರದೇಶದ ಹಬ್ಬಗಳನ್ನು ಸಹ ಇಲ್ಲಿ ಲೇಖಕ ನೆನಪಿಸಿದ್ದಾರೆ. ಅಂದರೆ ಗ್ರಾಮೀಣ ಜನರು ತಮ್ಮ ಹಬ್ಬಗಳಿಗೆ ಎಷ್ಟೊಂದು ಮಹತ್ವ ನೀಡುತ್ತಿದ್ದರು ಎನ್ನುವುದಕ್ಕೆ ರತ್ನವ್ವ ನಡೆಸಿಕೊಂಡು ಬಂದಿರುವ ಯಲ್ಲಮ್ಮನ ಜಾತ್ರೆಯನ್ನು ನಾವು ನೋಡಬಹುದು. ಇಂತಹ ಹಬ್ಬಗಳು ತಮ್ಮದೆಯಾದ ವೈಶಿಷ್ಟ್ಯವನ್ನು ಹೊಂದಿರುತ್ತವೆ ಎಂಬುದನ್ನು ಈ ಕಥೆಯು ತಿಳಿಸಿಕೊಡುತ್ತದೆ.

ಈ ಕಥೆಯಲ್ಲಿ ಮತ್ತೊಂದು ಮಹತ್ವದ ವಿಷಯವೇನೆಂದರೆ ಬಡವ ಮತ್ತು ಶ್ರೀಮಂತರ ನಡುವಿನ ತಾರತಮ್ಯವನ್ನು ಇಲ್ಲಿ ಲೇಖಕರು ಎತ್ತಿ ತೋರಿಸಿದ್ದಾರೆ. ಅದು ಊರಿನ ಗೌಡನ ವಿಷಯದಲ್ಲಿ ಆಗಿರಬಹುದು. ಆ ಊರಿನ ಗೌಡ ತನ್ನ ಧರ್ಬಾರನ್ನು ಚಲಾಯಿಸುತ್ತಾ ಬಡ ಜನರ ಬಗ್ಗೆ ಕೀಳರಿಮೆಯನ್ನು ಹೊಂದಿದ್ದಾರೆ ಎನ್ನಬಹುದು. ಅಂತಹ ಶ್ರೀಮಂತರಿಗೆ ಬಡವರ ಬಗ್ಗೆ ಕರುಣೆ ಇರುವುದಿಲ್ಲ ಎಂದೆನಿಸುತ್ತದೆ. ಇಲ್ಲಿ ರತ್ನವ್ವನ ಮಗಳು ಯಲ್ಲವ್ವ ರೂಪವತಿಯಾದ ಹುಡುಗಿ ಈ ಯಲ್ಲವ್ವನನ್ನು ಹೇಗಾದರೂ ಮಾಡಿ ಪಡೆಯಲೇಬೇಕೆಂಬುದು ಊರ ಗೌಡನ ಆಸೆಯಾಗಿರುತ್ತದೆ. ಆದ್ದರಿಂದ ಗೌಡ ಯಲ್ಲಮ್ಮನನ್ನು ತನ್ನ ಕಾಮಚೆಷ್ಟೆಗೆ ಬಳಸಿಕೊಳ್ಳಲು ಇಷ್ಟೆಲ್ಲ ಆಟ ಆಡಬೇಕಾಗುತ್ತದೆ. ಆದರೆ ಇಲ್ಲಿ ಗೌಡನ ಒಂದು ದಬ್ಬಾಳಿಕೆಯನ್ನು ಕೇಳುವವರು ಯಾರು ಇಲ್ಲದಂತಿದೆ. ಹೀಗಾಗಿ ಗೌಡರು ಬಡವರ ಮೇಲೆ ಏನಬೇಕಾದನ್ನು ಮಾಡಿದರೆ ನಡೆಯುತ್ತದೆ ಎಂಬುದನ್ನು ಲೇಖಕರು ಈ ಕಥೆಯಲ್ಲಿ ತಿಳಿಸಿದ್ದಾರೆ.

---

೨. ಮಂಜುನಾಥ ಲತಾ : ಉರಿಯ ನಾಲಿಗೆಯ ಮೇಲೆ : ಬೆನ್ನುಡಿ :

ಗ್ರಾಮೀಣ ಪ್ರದೇಶದಲ್ಲಿ ಬಡ ಕುಟುಂಬದಲ್ಲಿ ಒಂದು ಸುಂದರವಾದ ಹೆಣ್ಣು ಹುಟ್ಟಿತೆಂದರೆ ಅದರ ಮೇಲೆ ಊರ ಶ್ರೀಮಂತರ ಕಣ್ಣು ನೆಟ್ಟಿರುತ್ತದೆ ಎಂಬುದು ಈ ಕಥೆಯಿಂದ ತಿಳಿಯುತ್ತದೆ. ಇಲ್ಲಿ ಹೆಚ್ಚಾಗಿ ಶ್ರೀಮಂತ ವರ್ಗದಲ್ಲಿ ಕಾಮುಕ ಜನ ಹೆಚ್ಚಾಗಿರುತ್ತಾರೆ. ಅಂತವರಿಗೆ ಬಡ ಹೆಣ್ಣು ಮಕ್ಕಳು ಬಲಿಯಾಗುವ ರೀತಿಯನ್ನು ಸಹ ಲೇಖಕರು ಇಲ್ಲಿ ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ. ಈ ಕಥೆಯಲ್ಲಿ ಬರುವ ಎಲ್ಲಾ ಘಟನೆಗಳು ಹಳ್ಳಿಗಳಲ್ಲಿ ನಡೆಯುವಂತವುಗಳಾಗಿವೆ. ಆದರಿಂದ ಈ ಕಥೆಯು ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಒಂದು ನೈಜ ಘಟನೆಗಳಂತೆ ತಿಳಿದು ಬರುತ್ತದೆ. ಕಥೆಗಾರ ಈ ಕಥೆಯನ್ನು ಹಳ್ಳಿಗಳಲ್ಲಿ ನಡೆಯುವ ಎಲ್ಲಾ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ರಚಿಸಿದ್ದಾರೆ ಎಂದು ಅನಿಸುತ್ತದೆ.

'ಉರಿಯ ನಾಲಿಗೆಯ ಮೇಲೆ' ಎಂಬ ಈ ಕಥೆಯು ಗ್ರಾಮೀಣ ಬದುಕನ್ನು ಬಿಂಬಿಸುವ ಒಂದು ಕಥೆಯಾಗಿದ್ದು, ಇಲ್ಲಿ ಒಂದು ಹೆಣ್ಣಿನ ಜೀವನದಲ್ಲಿ ಬರುವಂತಹ ಅನೇಕ ಘಟನೆಗಳನ್ನು ಲೇಖಕರು ತುಂಬಾ ಸೊಗಸಾಗಿ ಚಿತ್ರಿಸಿದ್ದಾರೆ. ಜೊತೆಗೆ ಈ ಘಟನೆಗಳು ನಮ್ಮ ಸಮಾಜದಲ್ಲಿ ಸ್ತ್ರೀಯರ ಮೇಲೆ ಯಾವ ರೀತಿಯಾದ ಒಂದು ಶೋಷಣೆ ನಡೆಯುತ್ತದೆ ಎಂಬುದನ್ನು ತಿಳಿಸಿಕೊಡುತ್ತದೆ. ಇಲ್ಲಿ ಬರುವಂತೆ ಪಾತ್ರಗಳು ಸಹ ಗ್ರಾಮೀಣ ಬದುಕನ್ನು ನೆನೆಪಿಸುತ್ತವೆ. ಈ ಕಥೆಯಿಂದ ಹಳ್ಳಿಗಳಲ್ಲಿ ಬಡ ಮಹಿಳೆಯರಿಗೆ ಯಾವ ರೀತಿಯಾದ ಒಂದು ತೊಂದರೆ ಇರುತ್ತದೆ ಎಂಬುದು ಇಲ್ಲಿ ತಿಳಿದು ಬರುತ್ತದೆ. ಗ್ರಾಮೀಣ ಪ್ರದೇಶದ ಬಡ ಹೆಣ್ಣು ಮಕ್ಕಳ ಬದುಕು ಯಾವ ರೀತಿಯಾಗಿ ಇರುತ್ತದೆ. ಅವರನ್ನು ಶ್ರೀಮಂತರು ಯಾವ ರೀತಿಯಾಗಿ ನೋಡಿಕೊಳ್ಳುತ್ತಾರೆ ಎಂಬುವುದನ್ನು ಲೇಖಕರು ಈ ಕಥೆಯ ಮೂಲಕ ಕಣ್ಣ ಮುಂದೆ ಕಟ್ಟುವ ರೀತಿಯಲ್ಲಿ ವರ್ಣಿಸಿದ್ದಾರೆ.

ಹಳ್ಳಿಗಳಲ್ಲಿ ಅನಾಥ ಮಹಿಳೆಯರಿಗೆ ಯಾರೋಬ್ಬರೂ ಸಹಾಯಕರಾಗಿ ನಿಲ್ಲುವುದಿಲ್ಲ ಎಂಬುದನ್ನು ಇಲ್ಲಿ ನಾವು ನೋಡಹಬುದು. ಇಲ್ಲಿ ಬರುವ ರತ್ನವ್ವನ ಪಾತ್ರವನ್ನು ನೋಡಿದರೆ ಎಂಥವರ ಕರುಳು ಚುರುಕು ಎನ್ನುವ ರೀತಿಯಲ್ಲಿ ಕಥೆಗಾರರು ಈ ಪಾತ್ರವನ್ನು ರಚಿಸಿದ್ದಾರೆ. ರತ್ನವ್ವ ಎಷ್ಟೇ ಕಷ್ಟ ಪಟ್ಟರು ಸಹ ಅವಳು ಯಾರಿಗೆ ಹೆದರದೇ ಗೌಡನನ್ನು ವಿರೋಧ ಕಟ್ಟಿಕೊಳ್ಳುತ್ತಾಳೆ. ಅದರಿಂದ ಈ ಕಥೆಯಲ್ಲಿ ರತ್ನವ್ವನ ಪಾತ್ರವನ್ನು ಮೆಚ್ಚಲೇಬೇಕು ಎನಿಸುತ್ತದೆ. ರತ್ನವ್ವನ ತನಗೆ ಬಂದ ಎಲ್ಲಾ ಕಷ್ಟಗಳನ್ನು ನುಂಗಿಕೊಂಡು ತನ್ನ ಮಗಳು ಯಲ್ಲವ್ವನನ್ನು ರಕ್ಷಿಸಿಕೊಳ್ಳುತ್ತಾಳೆ. ಆದರಿಂದ ಈ ಕಥೆಯಲ್ಲಿ ರತ್ನವ್ವನ ಪಾತ್ರಕ್ಕೆ ಲೇಖಕರು ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ ಎಂದು ಅನಿಸುತ್ತದೆ.

ಲೇಖಕರು ಈ ಕಥೆಯನ್ನು ಸಧ್ಯದ ಸಂದರ್ಭದಲ್ಲಿ ಎಲ್ಲರಿಗೂ ತಿಳಿಯುವಂತೆ ರಚಿಸಿದ್ದಾರೆ. ಏಕೆಂದರೆ ಶ್ರೀಮಂತರ ದಬ್ಬಾಳಿಕೆಯನ್ನು ಈಗ ಸಧ್ಯದಲ್ಲಿಯೂ ಅನೇಕ ಹಳ್ಳಿಗಳಲ್ಲಿ ಮುಂದುವರೆದುಕೊಂಡು ನಡೆದಿದೆ. ಅದಕ್ಕಾಗಿ ಸಧ್ಯದ ಪರಿಸ್ಥಿತಿಗೂ ಸಹ ಈ ಕಥೆ ಒಳ್ಳೆಯ ಪಾಠವಾಗಿದೆ ಎಂದು ಅನಿಸುತ್ತದೆ. ಆದರಿಂದ ಲೇಖಕರು ಈ ಕಥೆಯಲ್ಲಿ

ಬರುವ ತಿರುಳನ್ನು ಎಲ್ಲಾ ಕಾಲಕ್ಕೂ ಅನ್ವಯಿಸುವಂತೆ ಕಥೆಯನ್ನು ರಚಿಸಿದ್ದಾರೆ. ಈ ಕಥೆಯಲ್ಲಿ ಬರುವ ಘಟನೆಗಳು ಎಲ್ಲಾ ಕಾಲಕ್ಕೂ ನಡೆಯುವಂತೆ ಘಟನೆಗಳಾಗಿವೆ. ಆದುದರಿಂದ ಲೇಖಕರು ಈ ಕಥೆಯನ್ನು ಮುಂದಾಲೋಚನೆಯಿಂದ ಈ ಕಥೆಯನ್ನು ರಚಿಸಿರಬಹುದು ಎಂದು ತಿಳಿದು ಬರುತ್ತದೆ. ಒಟ್ಟಿನಲ್ಲಿ ಈ ಕಥೆಯಲ್ಲಿ ಗ್ರಾಮೀಣರ ಬದುಕನ್ನು ಪ್ರತಿಬಿಂಬಿಸಿ ಅವರ ನಡುವಳಿಕೆಗಳನ್ನು ಈ ಕಥೆಯ ಮೂಲಕ ಚಿತ್ರಿಸಿದ್ದಾರೆ.

ಈ ಕಥೆಯಿಂದ ಲೇಖಕರು ಸಮಾಜಕ್ಕೆ ಒಂದು ಸಂದೇಶವನ್ನು ನೀಡಲು ಹೊರಟಂತಿದೆ. ಅದೇನೆಂದರೆ ಸಮಾಜದಲ್ಲಿ ನಡೆಯುವ ತಾರತಮ್ಯಗಳು, ಬಡವ – ಶ್ರೀಮಂತ, ಹೆಣ್ಣು – ಗಂಡು ಎಂಬ ಬೇಧ, ಭಾವ, ಮೋಸ, ಅನ್ಯಾಯ, ಅತ್ಯಾಚಾರ, ದಬ್ಬಾಳಿಕೆ ಈ ಎಲ್ಲ ಕೆಟ್ಟ ಘಟನೆಗಳ ಮೇಲೆ ಈ ಕಥೆಯು ಬೆಳಕನ್ನು ಚೆಲ್ಲುವಂತಿದೆ. ಆದರಿಂದ ಕಥೆಗಾರರು ಈ ಕಥೆಯ ಮೂಲಕ ಸಮಾಜದಲ್ಲಿ ನಡೆಯುವ ಅನೇಕ ಕೆಟ್ಟ ಘಟನೆಗಳ ಬಗ್ಗೆ ಜನರಿಗೆ ತಿಳಿಹೇಳುವ ಪ್ರಯತ್ನ ಮಾಡಿದ್ದಾರೆ ಎಂದು ಅನಿಸುತ್ತದೆ. ಒಟ್ಟಿನಲ್ಲಿ ಈ 'ಉರಿಯ ನಾಲಿಗೆಯ ಮೇಲೆ' ಎಂಬ ಕಥೆಯು ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ನೀಡುವಂತಹ ಕಥೆಯಾಗಿದೆ ಎಂದು ಹೇಳಬಹುದು.

೩.೨ ಕೆಂಡದ ಮಳೆ ಕರೆವಲ್ಲಿ :

'ಕೆಂಡದ ಮಳೆ ಕರೆವಲ್ಲಿ' ಎಂಬ ಕಥೆಯಲ್ಲಿ ಲೇಖಕ **ಕಲ್ಲೇಶ್ ಕುಂಬಾರ್**ರು ಸಮಾಜದಲ್ಲಿ ಜನರು ಹೇಗಿರುತ್ತಾರೆ ಎಂಬುವದನ್ನು ಮನಮೋಹಕವಾಗಿ ಚಿತ್ರಿಸಿದ್ದಾರೆ. ಈ ಕಥೆಯಲ್ಲಿ ಒಬ್ಬ ಸಾಧು ಮಠದೊಳಗೆ ಎಂತೆಂಥ ಕೆಲಸಗಳನ್ನು ನಡೆಸುತ್ತಾನೆ ಎಂಬುದನ್ನು ಕಥೆಗಾರರು ವಿವರಿಸಿದ್ದಾರೆ. ಈ ಕಥೆಯಿಂದ ಮರಾಠಿಯ ಒಂದು ಗಾದೆ ನೆನಪಾಗುತ್ತದೆ. 'ದಿನಕಾ ಸಾದು, ರಾತ್‌ಕಾ ಚೋದು' ಎಂಬ ಮಾತು ನೆನಪಾಗುತ್ತದೆ. ಅಂದರೆ ಸಾಧುವಿನ ವೇಷದಲ್ಲಿದ್ದವರು ಎಂಥ ಕೆಲಸಗಳನ್ನು ಮಾಡುತ್ತಾರೆ ಎಂಬುದನ್ನು ಈ ಕಥೆಯಲ್ಲಿ ತಿಳಿಸುತ್ತದೆ.

'ಕೆಂಡದ ಮಳೆ ಕರೆವಲ್ಲಿ' ಕಥೆ ಕೂಡಾ ಒಂದು ಬಗೆಯ ಅನುಭವ ದ್ರವ್ಯವನ್ನು ಒಳಗೊಂಡ ಕಥೆ. "ಸಾಧು ಆಗಿ ಮಠದೊಳಗಿರುವವರು ಸಮಾಜಕ್ಕೆ ಅವರು ಮಾದರಿಯಾಗಿರಬೇಕು. ಅವರ ನಡೆ–ನುಡಿ ಎಲ್ಲವು ಚೆನ್ನಾಗಿರಬೇಕು. ಅವರು ಸಮಾಜದ ಜನರಿಗೆ ಮಾರ್ಗದರ್ಶಕರಾಗಿರಬೇಕು. ಆವಾಗ ಮಾತ್ರ ಅವರಿಗೆ ಒಂದು ಪೂಜ್ಯನೀಯ ಸ್ಥಾನ ಸಿಗುತ್ತದೆ. ಅದನ್ನು ಬಿಟ್ಟು ಮನಸ್ಸಿನಲ್ಲಿ ಕೆಟ್ಟ ಭಾವನೆಗಳನ್ನು ತುಂಬಿಕೊಂಡು ಹೊರಗಡೆ ಇರುವ ಜನರಿಗೆ ಸಾಧುವಿನ ರೂಪವನ್ನು ತೋರಿಸಿದರೆ ಅವರನ್ನು ನಿಜವಾದ ಸಾಧು ಎಂದು ಅನಿಸುವುದಿಲ್ಲ. ಅವನು ಒಬ್ಬ ಕಪಟ, ಮೋಸಗಾರ ಎಂದು ತಿಳಿಯುತ್ತಾರೆ"[೩].

---

೩. ಡಾ॥ ಪ್ರಹ್ಲಾದ ಅಗಸನಕಟ್ಟೆ : ಉರಿಯ ನಾಲಿಗೆಯ ಕಥೆಗಳು : (ಮುನ್ನುಡಿಯಿಂದ) ಪುಟ ಸಂಖ್ಯೆ : ೧೩

ಇಂತಹ ಒಬ್ಬ ಮೋಸಗಾರ, ಕಪಟ ಸಾಧುವಿನ ಮೇಲೆ ಹೆಣೆದಿರುವ ಈ 'ಕೆಂಡದ ಮಳೆ ಕರೆವಲ್ಲಿ' ಎನ್ನುವಂತೆ ಈ ಕಥೆಯಲ್ಲಿ ಒಂದು ಹೆಣ್ಣಿನ ಮೇಲೆ ಕಾಮ ತೀಟೆಯನ್ನು ತಿರಿಸಿಕೊಂಡ ಒಬ್ಬ ಸಾಧುವಿನ ಕಥೆಯನ್ನು ನಂತರ ಆ ಹೆಣ್ಣಿನ ಬದುಕು ಯಾವ ರೀತಿಯಾಗಿ ಹಾಳಾಗುತ್ತದೆ. ಆ ಹೆಣ್ಣಿನ ಮನೆಯವರ ಸ್ಥಿತಿ ಏನಾಗುತ್ತದೆ ಮತ್ತು ಈ ಕಪಟ ಸಾದುನನ್ನು ಯಾವ ರೀತಿಯಾಗಿ ಜನ ರಕ್ಷಿಸುತ್ತಾರೆ ಎಂಬುದನ್ನು ಲೇಖಕರು **ಕಲ್ಲೇಶ್ ಕುಂಬಾರ್**ರು ಈ ಕಥೆಯಲ್ಲಿ ಗ್ರಾಮೀಣ ಭಾಷೆಯನ್ನು ಬಳಸಿ ತುಂಬಾ ಮನಮೋಹಕವಾಗಿ ಚಿತ್ರಿಸಿದ್ದಾರೆ.

ಬಸವ್ವ ಎಂಬ ಹೆಣ್ಣು ಹುಡುಗಿಯನ್ನು ಅವಳ ತಂದೆ – ತಾಇಯರು ಬಸವ್ವನಿಗೆ ತಿಳಿಯದ ವಯಸ್ಸಿನಲ್ಲಿ ಅಂದರೆ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿಕೊಡುತ್ತಾರೆ. ನಂತರ ಬಸವ್ವ ದೊಡ್ಡವಳಾಗಿ ಮೈನೆರಯುವಷ್ಟರಲ್ಲಿ ಬಸವ್ವಳ ಗಂಡ ಟಿ.ಬಿ. ಎಂಬ ರೋಗಕ್ಕೆ ತುತ್ತಾಗಿ ತೀರಿಕೊಳ್ಳುತ್ತಾನೆ. ಆಗ ಬಸವ್ವ ಪ್ರಾಯಕ್ಕೆ ಬರುವಷ್ಟರಲ್ಲಿಯೇ ವಿಧವೆಯಾಗುತ್ತಾಳೆ. ಇದು ಬಸವ್ವಳ ತಂದೆ – ತಾಯಿ ಮಾಡಿದ ಮೂರ್ಖತನದಿಂದ. ಯಾಕೆಂದರೆ ಬಸವ್ವಳಿಗೆ ಪ್ರಾಯ ಬಂದು ಆಕೆಗೆ ತಿಳುವಳಿಕೆ ಬಂದ ನಂತರ ಮದುವೆಯನ್ನು ಮಾಡಿದರೆ ಈ ಅನಾಹುತ ಆಗುತ್ತಿರಲಿಲ್ಲ. ಅದಕ್ಕಾಗಿ ಲೇಖಕರು ಈ ಒಂದು ಘಟನೆಯ ಮೂಲಕ ಬಾಲ್ಯ ವಿವಾಹ ಪದ್ಧತಿಯು ಅನಿಷ್ಟ ಪದ್ಧತಿ ಎಂದು ಇದರಿಂದ ಎಂತೆಂಥಹ ಅನಾಹುತಗಳಾಗುತ್ತವೆ ಎಂಬುದನ್ನು ತೋರಿಸಿ ಈ ಬಾಲ್ಯ ವಿವಾಹ ಪದ್ಧತಿಯನ್ನು ನಿಲ್ಲಿಸಬೇಕು ಎಂಬ ಸಂದೇಶವನ್ನು ಹೊತ್ತು ಲೇಖಕರು ತುಂಬಾ ಮಾರ್ಮಿಕವಾಗಿ ವರ್ಣಿಸಿದ್ದಾರೆ.

ಮಗಳು ಚಿಕ್ಕ ವಯಸ್ಸಿನಲ್ಲಿಯೇ ವಿಧವೆ ಯಾದಳಲ್ಲ ಎಂಬ ಕೊರಗಿನಿಂದ ಬಸವ್ವನ ತಂದೆ ತೀರಿಕೊಂಡ. ನಂತರ ಬಸವ್ವನ ತಾಯಿಗೆ ದಿಗಿಲು ಬಡಿದಂತಾಗಿ ಚಿಂತಾಕ್ರಾಂತಳಾಗುತ್ತಾಳೆ. ಅದೇ ಸಂದರ್ಭದಲ್ಲಿ ಬಸವ್ವನ ತಾಯಿ ಹಾರೂಗೇರಿಯಲ್ಲಿ ಮತ್ತೊಂದು ಕಡೆ ಸಂಬಂಧ ಹುಡುಕಿ ಬಸವ್ವನಿಗೆ ಎರಡನೇ ಮದುವೆಯನ್ನು ಮಾಡಿಕೊಡುತ್ತಾಳೆ. ಆಗ ಬಸವ್ವನ ಗಂಡನ ಜೊತೆಗೆ ಒಂದೆರೆಡು ವರ್ಷ ಸಂಸಾರ ಮಾಡಿ ಒಂದು ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ. ಆದರೆ ಅಷ್ಟರಲ್ಲಿ ಬಸವ್ವನ ಗಂಡ ಅದೇ ಊರಿನ ಒಬ್ಬ ವೇಷ್ಯ (ಸೂಳೆ) ಜೊತೆ ಊರು ಬಿಟ್ಟು ಓಡಿ ಹೋಗುತ್ತಾನೆ. ಬಸವ್ವಳ ಗಂಡ ಮತ್ತೆ ತಿರುಗಿ ಬರುವುದೇ ಇಲ್ಲ. ಇತ್ತ ಬಸವವನ ತಾಯಿಯು ತೀರಿಹೋಗುತ್ತಾಳೆ. ಆವಾಗ ಬಸವ್ವ ಹೆಣ್ಣು ಮಗುವನ್ನು ತೆಗೆದುಕೊಂಡು ಅನಾಥಳಾಗುತ್ತಾಳೆ. ಆವಾಗ ಬಸವ್ವನ ಸ್ಥಿತಿಯನ್ನು ನೋಡಿದ ಜನರು ಬಸವ್ವನನ್ನು ಮಠದಲ್ಲಿ ತಂದು ಬಿಡುವರು. ಆಗ ಮಠದಲ್ಲಿ ಚನ್ನಮಲ್ಲ ತಾತನವರು ಬಸವ್ವಳನ್ನು ಮಠದ ಕೆಲಸಕ್ಕೆ ಇಟ್ಟುಕೊಂಡು ಮಗಳಂತೆ ನೋಡಿಕೊಳ್ಳುತ್ತಾರೆ. ಬಸವ್ವ ಸಹ ಚನ್ನಮಲ್ಲ ತಾತನನ್ನು ತಂದೆಯಂತೆ ನೋಡಿಕೊಳ್ಳುತ್ತಾಳೆ. ಬಸವ್ವನ ಮಗಳು ಲಸಮವ್ವ ಬೆಳೆದು ದೊಡ್ಡವಳಾಗುತ್ತಿದ್ದಂತೆ ಬಸವ್ವ ತನ್ನ ಹಿಂದಿನ ಎಲ್ಲ ದುಃಖವನ್ನು ಮರೆಯುತ್ತಿರುವಷ್ಟರಲ್ಲಿಯೇ ಮಠದಲ್ಲಿ ಚನ್ನಮಲ್ಲ ತಾತನು ಲಿಂಗೈಕ್ಯರಾಗುತ್ತಾರೆ. ಇದರಿಂದ ಬಸವ್ವನ ಬದುಕಿನಲ್ಲಿ ಮತ್ತೆ ಬರಸಿಡಿಲು ಬಡಿದಂತಾಗುತ್ತದೆ. ಬಸವ್ವ ಮತ್ತೇ ಅನಾಥಳಾಗುತ್ತಾಳೆ.

ಚನ್ನಮಲ್ಲ ತಾತ ಲಿಂಗೈಕ್ಯಯಾದ ನಂತರ ಮಠದ ಉತ್ತರಾಧಿಕಾರಿಯಾಗಿ ಬಂದವನೇ ಕಾಮುಕ, ಕಪಟ ಸಾದು ನಾಗಯ್ಯಸ್ವಾಮಿ. ಈ ನಾಗಯ್ಯ ಸ್ವಾಮಿಯು ಹೀನ ಗುಣದವನಾಗಿರುತ್ತಾನೆ. ಮಠಕ್ಕೆ ಬಂದ ಹೆಂಗಸರೆಲ್ಲರನ್ನು ಕಾಮುಕ ದೃಷ್ಟಿಯಿಂದ ನೋಡುರುತ್ತಾನೆ. ನಾಗಯ್ಯ ಸ್ವಾಮಿಯು ಸ್ವಭಾವವೆಲ್ಲ ಬಸವ್ವಳಿಗೆ ತಿಳಿಯುತ್ತಿದ್ದಂತೆ ಬಸವ್ವ ಪ್ರಾಯಕ್ಕೆ ಬಂದ ತನ್ನ ಮಗಳು ಲಸಮವ್ವನನ್ನು ಕರೆದುಕೊಂಡು ಮಠದ ಹೊಲದಲ್ಲಿ ಹೋಗಿ ಅಲ್ಲಿಯೇ ಒಂದು ಗುಡಿಸಲನ್ನು ಹಾಕಿಕೊಂಡು ವಾಸಿಸಲು ಪ್ರಾರಂಭಿಸುತ್ತಾಳೆ. ನಾಗಯ್ಯ ಸ್ವಾಮಿಯ ಮುಖನೋಡಿದರೆ ಬಸವ್ವನಿಗೆ ಆಗಿ ಬರುತ್ತಿರಲಿಲ್ಲ.

ನಾಗಯ್ಯ ಸ್ವಾಮಿ ಮಠಕ್ಕೆ ಪೀಠಾಧೀಶನಾಗಿ ಬಂದ ನಂತರ ಮಠಕ್ಕೆ ಭಕ್ತರು ಬರುವ ಸಂಖ್ಯೆ ಕಡಿಮೆಯಾಗತೊಡಗುತ್ತದೆ. ಆದರೂ ಸಹ ಮಠದ ಉಸ್ತುವಾರಿಯನ್ನು ನೋಡುತ್ತಿದ್ದ ಶಿವರಾಯಿ ಮತ್ತಿತ್ತರು ಸೇರಿಕೊಂಡು ಜಾತ್ರೆಯನ್ನು ನಡೆಸಿಕೊಂಡು ಬರುತ್ತಾರೆ. ಈ ನಾಗಯ್ಯ ಸ್ವಾಮಿ ಶಿವರಾಯಿಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿರುತ್ತಾನೆ. ನಾಗಯ್ಯ ಸ್ವಾಮಿ ಹೇಳಿದಂತೆ ಶಿವರಾಯಿ ಕೇಳುತ್ತಿರುತ್ತಾನೆ. ನಾಗಯ್ಯ ಸ್ವಾಮಿ ಏನಾದರೂ ತಪ್ಪು ಮಾಡಿದರೆ ಶಿವರಾಯಿ ಅದನ್ನು ಮುಚ್ಚಿ ಹಾಕುವ ಕೆಲಸ ಮಾಡುತ್ತಿರುತ್ತಾನೆ.

ಶಿವರಾತ್ರಿ ಸಂದರ್ಭದಲ್ಲಿ ಲಸಮವ್ವ ಮಠದಲ್ಲಿ ನಡೆದಿದ್ದ ಸಪ್ತಾಹದ ಕೊನೆಯ ದಿನ ಚನ್ನಮಲ್ಲ ತಾತನ ಗದ್ದುಗೆಗೆ ನೈವೇದ್ಯೆಯನ್ನು ತೆಗೆದುಕೊಂಡು ಹೋಗಬೇಕು ಅಂದುಕೊಂಡು ಊಟದ ಕೋನೆಗೆ ಲಸಮವ್ವ ಹೋಗುತ್ತಾಳೆ. ಅದೇ ಸಮಯಕ್ಕೆ ಕಾಮುಕ ನಾಗಯ್ಯ ಸ್ವಾಮಿ ಹಿಂದಿನಿಂದ ಬಂದು ಲಸಮವ್ವನನ್ನು ತಬ್ಬಿಕೊಂಡು ಬಿಡುತ್ತಾನೆ. ಎಷ್ಟೇ ಕಿರುಚಾಡಿದರು ನಾಗಯ್ಯ ಸ್ವಾಮಿ ಬಿಡದೆ ತನ್ನ ಕಾಮ ತೃಪ್ತಿಯನ್ನು ತೀರಿಸಿಕೊಂಡು ಬಿಡುತ್ತಾನೆ. ಈ ಸುದ್ದಿಯನ್ನು ಹೊರಗಡೆ ಹೇಳಿದರೆ ನಿಮ್ಮವ್ವ ಬಸವ್ವನಿಗೂ ಹೀಗೆ ಮಾಡುತ್ತೇನೆ ಎಂದು ನಾಗಯ್ಯ ಸ್ವಾಮಿ ಹೆದರಿಸುತ್ತಾನೆ.

ಲಸಮವ್ವ ಈ ಸುದ್ದಿಯನ್ನು ಹೊರಗಡೆ ಯಾರಿಗೂ ಹೇಳದೆ ಬಚ್ಚಿಟ್ಟಿರುತ್ತಾಳೆ. ಆದರೆ ಹೊಟ್ಯಾಗ ಬೆಳೆಯುತ್ತಿದ್ದ ಪಾಪದ ಪಿಂಡ ಹೇಗೆ ಸುಮ್ಮನಿದ್ದೀತು? ಅದು ಬೆಳೆಯುತ್ತಾ ದೊಡ್ಡದಾಗುತ್ತದೆ. ಒಂದು ದಿನ ಲಸಮವ್ವನಿಗೆ ವಾಂತಿ ಬೇಧಿ ಶುರುವಾಯಿತು. ಆವಾಗ ಬಸವ್ವ ಮಗಳಿಗೆ ಪಿತ್ತ ಹೆಚ್ಚಾಗಿರಬೇಕು ಅಂತಾ ತಿಳಿದು ಜಿರಲಿ ಪಂಡಿತನ ಹತ್ತಿರ ಕರೆದುಕೊಂಡು ಹೋಗುತ್ತಾಳೆ. ಆ ಜಿರಲಿ ಪಂಡಿತನ ಹತ್ತಿರ ಮೊದಲೇ ಬಂದು ಕುಂತಿದ್ದ ಮಠದ ಚಾಕರಿ ಆಳು ನಿಂಗಪ್ಪ ತನ್ನ ಧಮ್ಮಿಗೆ ಔಷಧಿಯನ್ನು ತೆಗೆದುಕೊಳ್ಳಲು ಬಂದಿದ್ದ. ನಂತರ ಬಸವ್ವ ಪಂಡಿತರ ನನ್ನ ಮಗಳು ಯಾಕೋ ಏನೋ ವಾಂತಿ ಮಾಡಿಕೊಳ್ಳುತ್ತಿದ್ದಾಳ ಸ್ವಲ್ಪ ನೋಡಿ ಎಂದಳು. ಪಂಡಿತರು ಲಸಮವ್ವನ ನಾಡಿ ಹಿಡಿದು ನೋಡಿದರು. ನಂತರ ನಾಲಿಗೆ ನೋಡಿದರು. ಆವಾಗ ಪಂಡಿತರು ಲಸಮವ್ವನ ಹೊಟ್ಟೆ ನೋಡಿ ಬಸವ್ವ 'ಕೆಲಸ ಕೆಟ್ಹೋಗಿದೆಯಲ್ಲ!'. ನಿನ್ನ ಮಗಳು ಹೊಟ್ಟೆಲೆ (ಗರ್ಭಿಣಿ) ಇದ್ದಾಳೆ ಎಂದು ಜಿರಲಿ ಪಂಡಿತ ಹೇಳುತ್ತಾನೆ. ಆವಾಗ ಬಸವ್ವನಿಗೆ ಮುಗಿಲೇ ಮೈ ಮೇಲೆ ಬಿದ್ದಂತೆ ಆಯಿತು. ಈ

ಸುದ್ದಿಯನ್ನು ಮಠದ ಚಾಕ್ರಿ ನಿಂಗಪ್ಪನು ಸಹ ಕೇಳುತ್ತಾನೆ. ಬಸವ್ವ ಮಗಳನ್ನು ಕೈಯಿಂದ ಹಿಡಿದು ಬರಬರನೆ ಮನೆಗೆ ಎಳೆದುಕೊಂಡು ತರುತ್ತಾಳೆ.

ಮನೆಯಲ್ಲಿ ಬಸವ್ವನ ಮಗಳು ಲಸಮವ್ವನನ್ನು ಕಟ್ಟಿಗೆಯಿಂದ ಹೊಡೆಯಲಾರಂಭಿಸುತ್ತಾಳೆ. ಇದಕ್ಕೆಲ್ಲ ಯಾರು ಕಾರಣ? ಆ ಭೋಳಿ ಮಗ ಯಾರು? ಎಂದು ಬಸವ್ವ ಸಿಟ್ಟಿನಿಂದ ಕೇಳುತ್ತಾಳೆ. ಆವಾಗ ಲಸಮವ್ವ ನಡೆದ ವಿಷಯವನ್ನೆಲ್ಲ ಹೇಳುತ್ತಾಳೆ. ನಾಗಯ್ಯ ಸ್ವಾಮಿ ಶಿವರಾತ್ರಿ ಸಪ್ತಾಹದ ದಿನ ಅಂಬಲಿ ಕುಡಿಯಲು ಹೋದಾಗ ನನ್ನ ಮೈ ಮೇಲೆ ಬಿದ್ದು ನನ್ನನ್ನು ಕೆಡಿಸಿ ಬಿಟ್ಟ. ಈ ವಿಷಯವನ್ನು ಹೊರಗಡೆ ಹೇಳಿದರೆ ನಿಮ್ಮವ್ವನಿಗೆ ಹಿಂಗೆ ಮಾಡುತ್ತೇನೆ ಎಂದಿದ್ದ. ಅದಕ್ಕೆ ಮುಚ್ಚಿಟ್ಟೆ ಎನ್ನುತ್ತಾಳೆ. ಆಗಲೇ ನಾಗಯ್ಯ ಸ್ವಾಮಿಯ ಮಾನ ಮರ್ಯಾದೆಯನ್ನು ತೆಗೆಯಬೇಕು. ಆತನಿಗೆ ಬೆಳ್ಳಿ ತುಲಾಭಾರ ಮಾಡುವ ಸಂದರ್ಭದಲ್ಲಿ ಆತನ ಮಾನವನ್ನು ಕಳೆಯಬೇಕು ಎಂದು ಕೊಳ್ಳುತ್ತಾಳೆ ಬಸವ್ವ !

ಈ ಸುದ್ದಿ ನಿಂಗಪ್ಪನಿಂದ ನಾಗಯ್ಯ ಸ್ವಾಮಿಯ ಕಿವಿಗೆ ಬಿಳುತ್ತದೆ. ಇದನ್ನು ಕೇಳಿದ ನಾಗಯ್ಯ ಸ್ವಾಮಿ ಒಳಗೊಳಗೆ ಮರಗುತ್ತಿರುತ್ತಾನೆ. ಜೊತೆಗೆ ಇದರಿಂದ ಹೇಗಾದರು ಮಾಡಿ ಪಾರಾಗಬೇಕೆಂದು ಯೋಚಿಸಿರುತ್ತಾನೆ. ಆವಾಗ ಮಠದ ಉಸ್ತುವಾರಿ ವಹಿಸುತ್ತಿದ್ದ ಶಿವರಾಯಿಯನ್ನು ಕರೆದುಕೊಂಡು ಆತನ ಮುಂದೆ ಈ ಎಲ್ಲಾ ವಿಷಯವನ್ನು ಹೇಳುತ್ತಾನೆ. ಇದರಿಂದ ಹೇಗಾದರು ಮಾಡಿ ಪಾರು ಮಾಡು ಎಂದು ಶಿವರಾಯಿಯನ್ನು ಕೇಳಿಕೊಳ್ಳುತ್ತಾನೆ. ಆಗ ಶಿವರಾಯಿ ಚಿಂತಿಸ ಬೇಡಿ ಸ್ವಾಮಿಗಳೆ ನಾನು ಹೋಗಿ ಬರುತ್ತೇನೆ ಎಂದು ಹೇಳುತ್ತಾನೆ ಶಿವರಾಯಿ.

ಶಿವರಾಯಿ ನೇರವಾಗಿ ಬಸವ್ವನ ಮನಗೆ ಬರುತ್ತಾನೆ. ಬಸವ್ವನನ್ನು ಕರೆಸಿ ನಿನ್ನ ಮಗಳಿಗೆ ಆದ ವಿಷಯವನ್ನು ಯಾರಿಗೆ ಹೇಳಬೇಡ. ಮಠದ ಕಾರ್ಯಕ್ರಮ ಮುಗಿದ ನಂತರ ಗೋಕಾಕಕ್ಕೆ ಹೋಗಿ ಹೊಟ್ಟೆಯಲ್ಲಿರುವ ಪಿಂಡವನ್ನು ತಗೆಸಿಕೊಂಡು ಬರುತ್ತೇನೆ ಚಿಂತಿಸಬೇಡ ಎನ್ನುತ್ತಾನೆ. ಏನಾದರು ಮಠದ ಪುಣ್ಯರಾಧನೆಯ ಸಂದರ್ಭದಲ್ಲಿ ಈ ವಿಷಯವನ್ನು ಹೊರಗಡೆ ಪ್ರಚಾರ ಮಾಡಿದರೆ ಪರಿಣಾಮ ನೆಟ್ಟಗೆ ಆಗುವದಿಲ್ಲ ಎಂದು ಶಿವರಾಯಿ ಬಸವ್ವನಿಗೆ ಹೆದರಿಸುತ್ತಾನೆ. ಈ ಸುದ್ದಿ ಹೊರಗೆ ತಿಳಿಬಾರದು ನೋಡು ಅಂತಾ ಹೇಳಿ ಶಿವರಾಯಿ ಹೊರಟು ಹೋಗುತ್ತಾನೆ.

ಬಸವ್ವ ಶಿವರಾಯಿ ಮಾತನ್ನು ಕೇಳಿ ರೊಚ್ಚಿಗೇಳುತ್ತಾಳೆ. ಆ ನಾಗಯ್ಯ ಸ್ವಾಮಿಯನ್ನು ಒಂದು ಕೈ ನೋಡಿಯೇ ಬಿಡಿತ್ತೇನೆ ಎಂದು ಹಠ ತೊಡುತ್ತಾಳೆ. ಮಠದ ಕಾರ್ಯಕ್ರಮದಲ್ಲಿ ನಾಗಯ್ಯ ಸ್ವಾಮಿಗೆ ಬುದ್ದಿ ಕಲಿಸುತ್ತೇನೆ ನೀನು ತಯಾರಾಗು ಎಂದಳು. ಲಸಮವ್ವನಿಗೆ ಬಸವ್ವ ಸಿಟ್ಟಿನಿಂದ ಒಳಗಿನ ಕುಡಗೋಲನ್ನು ತೆಗೆದುಕೊಂಡು ಬಾ ಎಂದು ಹೇಳಿದಳು.

ಒಟ್ಟು ಈ ಕಥೆಯ ತಿರುಳನ್ನು ನೋಡಿದರೆ ಸಮಾಜದಲ್ಲಿ ಒಬ್ಬ ಅನಾಥ ಹೆಣ್ಣಿಗೆ ಸಹಾಯಕರೇ ಇಲ್ಲ ಎನಿಸುತ್ತದೆ. "ಲೇಖಕರು ಈ ಕಥೆಯಲ್ಲಿ ಒಂದು ಹೆಣ್ಣಿನ ಬಾಳಿನಲ್ಲಿ ಯಾವ ರೀತಿಯ ಘಟನೆಗಳು ನಡೆಯುತ್ತವೆ ಎಂಬುದನ್ನು ಹಾಗೂ ಅವಳು ಅನುಭವಿಸಿದ ನೋವು - ವೇತನೆಯನ್ನು ಮನ ಮುಟ್ಟುವಂತೆ ವರ್ಣಿಸಿದ್ದಾರೆ. ಇದರ ಜೊತೆಗೆ ಲೇಖಕರು ಸಮಾಜದಲ್ಲಿ ನಡೆಯುವ ಅನೇಕ ಕೆಟ್ಟ ಘಟನೆಗಳನ್ನು ಮತ್ತು ಕೆಟ್ಟ ಜನರನ್ನು ಎತ್ತಿ ತೋರಿಸಿದ್ದಾರೆ. ಒಬ್ಬ ಸಾಧು ಸಮಾಜವನ್ನು ತಿದ್ದುವಂತವನಾಗಿರಬೇಕು. ಅವನೇ ಕೆಟ್ಟ ಕೆಲಸ ಮಾಡಿದರೆ ಸಮಾಜ ಹೇಗೆ ಉಳಿಯುತ್ತದೆ ಎಂಬ ಸಂದೇಶವನ್ನು ಲೇಖಕರು ಬಹು ಮಾರ್ಮಿಕವಾಗಿ ವಿವರಿಸಿದ್ದಾರೆ"[೪].

ಈ ಕಥೆಯನ್ನು ನೋಡಿದರೆ ಎಲ್ಲಿಯೂ ಹೆಚ್ಚಿನ ಆಡಂಬರತೆ ಕಂಡು ಬರುವುದಿಲ್ಲ. ಸ್ವಲ್ಪ ಮಟ್ಟಿಗೆ ಮಠದ ಉತ್ಸವಕ್ಕೆ ಪೆಂಡಾಲ ಹಾಕುವುದನ್ನು ಲೇಖಕರು ಹೆಚ್ಚಾಗಿ ಕಾಣಿಸಿದರು. ಸಂದರ್ಭಕ್ಕೆ ತಕ್ಕಂತೆ ಇದೆ ಎಂದು ತಿಳಿಯುತ್ತದೆ. ಹಾಗೂ ಈ ಕಥೆಯಲ್ಲಿ ಮಾತಿನ ಶೈಲಿಯನ್ನು ಜನಪದ ರೂಪದಲ್ಲಿ ವರ್ಣಿಸಿದ್ದಾರೆ. ಸರಳತೆಯು ಎದ್ದು ಕಾಣುತ್ತದೆ. ಒಟ್ಟಿನಲ್ಲಿ ಈ ಕಥೆಯಿಂದ ಲೇಖಕರು ಒಂದು ಒಳ್ಳೆಯ ಸಂದೇಶವನ್ನು ಜನರಿಗೆ ತಿಳಿಸುವ ಪ್ರಯತ್ನ ಮಾಡಿದ್ದಾರೆ.

ಲೇಖಕರು ಈ ಕಥೆಯಲ್ಲಿ ದಿಕ್ಕಿಲ್ಲದ ಒಂದು ಹೆಣ್ಣಿನ ಬಾಳಿನಲ್ಲಿ ನಡೆಯುವ ಘಟನೆಯನ್ನು ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ. ಇಲ್ಲಿ ಬರುವ ಬಸವ್ವ ಎಂಬ ಹೆಣ್ಣಿನ ಗೋಳನ್ನು ವರ್ಣಿಸಿದ್ದಾರೆ. ಯಾಕೆಂದರೆ ಬಸವ್ವ ಚಿಕ್ಕಂದಿನಲ್ಲಿಯೇ ಮದುವೆಯಾಗುತ್ತಾಳೆ. ನಂತರ ಅವಳು ಬೆಳೆದು ದೊಡ್ಡವಳಾಗುವಷ್ಟರಲ್ಲಿ ಗಂಡನನ್ನು ಕಳೆದುಕೊಳ್ಳುತ್ತಾಳೆ. ಗಂಡ ತೀರಿಕೊಂಡ ನಂತರ ಬಸವ್ವ ಎಳೆಯ ವಯಸ್ಸಿನಲ್ಲಿಯೇ ವಿಧವೆಯಾಗುತ್ತಾಳೆ. ಈ ಘಟನೆಯನ್ನು ನೋಡಿದ ಈ ಕಥೆಯು ಚಿಕ್ಕ ವಯಸ್ಸಿನಲ್ಲಿ ಬಾಲ್ಯ ವಿವಾಹವನ್ನು ಮಾಡುವದರಿಂದ ಎಂತಹ ಅನಾಹುತವಾಗುತ್ತದೆ ಎಂಬುದನ್ನು ಲೇಖಕರು ಇಲ್ಲಿ ತಿಳಿಸಿದ್ದಾರೆ. ಈ ಬಾಲ್ಯ ವಿವಾಹವನ್ನು ತಡೆಗಟ್ಟುವಲ್ಲಿ ಈ ಕಥೆಯು ಸಮಾಜಕ್ಕೆ ಒಂದು ಒಳ್ಳೆಯ ಸಂದೇಶವನ್ನು ನೀಡಿದಂತಿದೆ.

ಹೆಣ್ಣಿಗೆ ಎಷ್ಟೊಂದು ತೊಂದರೆಗಳು ಬರುತ್ತವೆ ಎಂಬುದನ್ನು ಈ ಕಥೆಯಲ್ಲಿ ತಿಳಿಸುವುದರ ಮುಖಾಂತರ ಅವಳಿಗೆ ಸಮಾಜದಲ್ಲಿ ಯಾರು ಸಹ ಸಹಾಯ ಮಾಡುವುದಿಲ್ಲ. ಇದರಿಂದ ಹೆಣ್ಣಿನ ವೇಧನೆಯನ್ನು ಲೇಖಕರು ಇಲ್ಲಿ ವಿವರಣೆ ನೀಡಿದ್ದಾರೆ. ಇಂತಹ ಸಂದರ್ಭದಲ್ಲಿ ಬಸವ್ವ ಚಿಕ್ಕಂದಿನಲ್ಲಿರುವ ವಿಧವೆಯಾದ ನಂತರ ಅವಳ ತಂದೆ ತೀರಿಹೋಗುತ್ತಾರೆ. ಆವಾಗ ಬಸವ್ವ ಮತ್ತಷ್ಟು ತೊಂದರೆ ಅನುಭವಿಸಿ ತಾಯಿ ಬಸವ್ವನಿಗೆ ಅಲ್ಲಿಯ ಹಾರೂಗೇರಿಯಲ್ಲಿಯೇ ಮತ್ತೊಂದು ಮರು ಮದುವೆ ಮಾಡಿಸುತ್ತಾಳೆ. ಒಂದೇರಡು ವರ್ಷ ಸಂಸಾರ ಮಾಡಿ ಬಸವ್ವನ ಗಂಡ ಬೇರೆಯ ಹೆಣ್ಣಿನ ಜೊತೆಗೆ

---

೪. ಕಲ್ಲೇಶ್ ಕುಂಬಾರ್‌ರ : ಸಂಭವಾಮಿ ಯುಗೇ ಯುಗೇ : ಕಥಾ ಸಂಕಲನ : ಪುಟ ಸಂಖ್ಯೆ : ೧೩

ಓಡಿ ಹೋಗುತ್ತಾನೆ. ಇತ್ತ ಹೆಣ್ಣು ಮಗುವನ್ನು ತೆಗೆದುಕೊಂಡು ಬಸವ್ವ ಅನಾಥಳಾಗುತ್ತಾಳೆ. ನಂತರ ಕೆಲ ದಿನಗಳಲ್ಲಿ ಬಸವ್ವನ ತಾಯಿಯು ಕೂಡ ತೀರಿಕೊಳ್ಳುತ್ತಾಳೆ. ಹೀಗಾಗಿ ಬಸವ್ವನಿಗೆ ತೊಂದರೆ ಮೇಲೆ ತೊಂದರೆ ಬಂದೊದಗುತ್ತವೆ. ಆವಾಗ ಬಸವ್ವನಿಗೆ ಚನ್ನಮಲ್ಲ ತಾತನ ಮಠದಲ್ಲಿ ಆಶ್ರಯ ಸಿಗುತ್ತದೆ. ಬಸವ್ವ ಹೆಣ್ಣು ಮಗಳು ಲಸಮವ್ವನನ್ನು ಕರೆದುಕೊಂಡು ಮಠದಲ್ಲಿ ವಾಸವಾಗುತ್ತಾಳೆ. ಹೀಗೆ ಈ ಕಥೆಯಲ್ಲಿ ಹೆಣ್ಣಿನ ಬದುಕಲ್ಲಿ ಯಾವ ರೀತಿಯಾದ ತೊಂದರೆಗಳು ಬರುತ್ತವೆ ಎಂಬುದನ್ನು ಲೇಖಕರು ಮನ ಕಲಕುವಂತೆ ವಿವರಿಸಿದ್ದಾರೆ.

ಈ ಕಥೆಯಲ್ಲಿ ಲೇಖಕರು ಹೆಣ್ಣಿಗೆ ಎಷ್ಟೇ ತೊಂದರೆ ಬಂದರೂ ಅದನ್ನು ಧೈರ್ಯದಿಂದ ಎದುರಿಸುವ ಬಗೆಯನ್ನು ಲೇಖಕರು ಈ ಕಥೆಯಿಂದ ತಿಳಿಸಿದ್ದಾರೆ. ಯಾಕೆಂದರೆ ಜೀವನದಲ್ಲಿ ಕಷ್ಟಗಳು ಎಲ್ಲರಿಗೂ ಬರುವುದು ಸಾಮಾನ್ಯ. ಆದರೆ ಅಂತಹ ಕಷ್ಟಗಳನ್ನು ಧೈರ್ಯದಿಂದ ಎದುರಿಸುವುದು ಒಂದು ಹೆಮ್ಮೆಯ ವಿಷಯ. ಇದನ್ನೇ ಲೇಖಕರು ಬಸವ್ವನ ರೂಪದಲ್ಲಿ ತಿಳಿಸಿದ್ದಾರೆ. ಬಸವ್ವನಿಗೆ ಚಿಕ್ಕಂದಿನಿಂದ ಅನೇಕ ನೋವುಗಳು ತನ್ನ ಬದುಕಿನಲ್ಲಿ ಬಂದಿರುತ್ತವೆ. ಆದರೆ ಆ ಎಲ್ಲ ನೋವುಗಳನ್ನು ನುಂಗಿಕೊಂಡು ತನ್ನ ಬದುಕನ್ನು ಮುನ್ನಡೆಸಿಕೊಂಡು ಹೋಗುವ ರೀತಿಯನ್ನು ಲೇಖಕರು ಸೊಗಸಾಗಿ ವಿವರಿಸಿದ್ದಾರೆ. ಆದರಿಂದ ಈ ಕಥೆಯಲ್ಲಿ ಹೆಣ್ಣಿನ ನೋವನ್ನು ಕುರಿತಾಗಿದೆ ಎನ್ನಬಹುದು.

ಲೇಖಕರು ಮತ್ತೊಂದು ವಿಷಯವನ್ನು ಈ ಕಥೆಯಲ್ಲಿ ರೋಮಾಂಚನವಾಗಿ ವಿವರಿಸಿದ್ದಾರೆ. ಅದೇನೆಂದರೆ ಕಪಟ ಸಾಧುವಿನ ಬಗ್ಗೆ. ಯಾಕೆಂದರೆ ಈಗಿನ ಸಂದರ್ಭದಲ್ಲಿ ಇಂತಹ ಕಪಟ ಸಾಧುಗಳೇ ತುಂಬಾ ಹೆಚ್ಚಾಗಿದ್ದಾರೆ. ಇಂಥವರು ಮೇಲೊಂದು ಬಣ್ಣ ಒಳಗೆ ಮತ್ತೊಂದು ಬಣ್ಣವನ್ನು ಹೊಂದಿರುತ್ತಾರೆ. ಅಂದರೆ ಮೇಲೆ ಸಾಧು ಒಳಗೆ ಚೋದು ಎಂಬಂತೆ ತಮ್ಮ ನಟನೆಯನ್ನು ಮಾಡುತ್ತಿರುತ್ತಾರೆ. ಇಂತಹ ಸಾಧುಗಳ ಬಗ್ಗೆ ಲೇಖಕರು ಈ ಒಂದು ಕಥೆಯಲ್ಲಿ ತುಂಬಾ ಸೊಗಸಾಗಿ ವಿವರಣೆಯನ್ನು ನೀಡಿದ್ದಾರೆ. ಆ ಸಾಧುವಿನ ವರ್ತನೆ ಆತನ ಹಾವಭಾವ ಅವನ ನಡುವಳಿಕೆ ಎಲ್ಲವನ್ನು ಈ ಕಥೆಯಲ್ಲಿ ಸೊಗಸಾಗಿ ವಿವರಿಸಿದ್ದಾರೆ.

ಸಾಧುಗಳು ಸಮಾಜದ ಒಂದು ಒಳ್ಳೆಯ ಸಂದೇಶಗಾರರಾಗಿರುತ್ತಾರೆ. ಅಂದರೆ ಸಾಧುಗಳು ಸಮಾಜದಲ್ಲಿ ನಡೆಯುವ ಕೆಟ್ಟ ಘಟನೆಗಳನ್ನು ಹೋಗಲಾಡಿಸಲು ಪ್ರಯತ್ನಿಸಬೇಕು. ಒಂದು ಜಾತಿಯತೆ ಯಾಗಿರಬಹುದು. ಮೇಲು – ಕೀಳು ಎಂಬ ಭಾವನೆಯಾಗಿರಬಹುದು. ಸ್ತ್ರೀ–ಪುರುಷರ ನಡುವಿನ ಬೇಧಭಾವ ಮತ್ತು ಸ್ತ್ರೀಯರಿಗೆ ಗೌರವ ನೀಡುವದಾಗಿರಬಹುದು. ಈ ಎಲ್ಲ ವಿಷಯಗಳ ಬಗ್ಗೆ ಸಾಧುಗಳು ಸಮಾಜದಲ್ಲಿ ಬೆಳಕನ್ನು ಚೆಲ್ಲಬೇಕು. ಆದರೆ ಈ ಕಥೆಯಲ್ಲಿ ಬರುವಂಥ ಸಾಧು ಒಬ್ಬ ಕಪಟ ಸಾದು ಆಗಿರುತ್ತಾನೆ. ಅವನು ಸಮಾಜವನ್ನು ದುಸ್ಥಿತಿಗೆ ಕರೆಯೊಯ್ಯುವ ಸಾಧು ಆಗಿರುತ್ತಾನೆ. ಅಂತವನ ಬಗ್ಗೆ ಲೇಖಕರು ಈ ಕಥೆಯಲ್ಲಿ ಜನರಿಗೆ ಅವನ ಎಲ್ಲಾ ಚಟುವಟಿಕೆಗಳನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ.

ಒಬ್ಬ ಸಾಧು ಏನನ್ನು ಮಾಡಬಾರದೋ ಅದನ್ನು ಮಾಡಿ ಜನರಿಂದ ಯಾವ ರೀತಿ ತಿರಸ್ಕರಿತನಾಗುತ್ತಾನೆ ಎಂಬುದು ಇಲ್ಲಿ ತಿಳಿದು ಬರುತ್ತದೆ. ನಾಗಯ್ಯ ಎಂಬ ಸ್ವಾಮಿ ಸಾಧುವಿನ ರೂಪದಲ್ಲಿ ಮಠದಲ್ಲಿ ಬಂದು ಸೇರಿ ಆ ಮಠಕ್ಕೆ ಬರುವಂತ ಹೆಣ್ಣು ಮಕ್ಕಳನ್ನು ಆ ನಾಗಯ್ಯ ಸ್ವಾಮಿ ಕಾಮುಕ ದೃಷ್ಟಿಯಿಂದ ನೋಡುತ್ತಾನೆ. ಇದರ ಪರಿಣಾಮವಾಗಿ ಬಸವ್ವನ ಮಗಳು ಲಸಮವ್ವನನ್ನು ಈ ಕಪಟ ಸಾಧು ಮಠದ ಒಳಗೆ ಅವಳನ್ನು ಬಲತ್ಕರಿಸಿ ಬಿಡುತ್ತಾನೆ. ಇದರಿಂದ ಲಸಮವ್ವ ಗರ್ಭವತಿಯಾಗುತ್ತಾಳೆ. ಆದರೆ ಕಪಟ ಸಾಧುವಿಗೆ ಅನೇಕ ಕಪಟ ಜನರ ಸಹವಾಸವಿರುತ್ತದೆ. ಈ ಕಪಟ ಜನರ ಗೆಳೆತನದಿಂದ ನಾಗಯ್ಯ ಸ್ವಾಮಿ ಮಠದೊಳಗೆ ನಡೆಸುವ ಎಲ್ಲಾ ಕೆಟ್ಟ ಕೆಲಸಗಳನ್ನು ಮುಚ್ಚಿಹಾಕುತ್ತಿದ್ದರು. ಹೀಗೆ ಈ ಕಥೆಯಲ್ಲಿ ಕಪಟ ಸ್ವಾಮಿಯ ಬಗ್ಗೆ ಮತ್ತು ಆತನ ಸಂಗಡಿಗರ ಬಗ್ಗೆ ಲೇಖಕರು ಇಲ್ಲಿ ಸೊಗಸಾಗಿ ವಿವರಣೆ ನೀಡಿದ್ದಾರೆ. ಒಟ್ಟಿನಲ್ಲಿ ಈ ಕಥೆಯಲ್ಲಿ ಸಮಾಜದಲ್ಲಿ ನಡೆಯುವ ಕೆಟ್ಟ ಜನರ ಬಗ್ಗೆಯು ಇಲ್ಲಿ ತಿಳಿಸುವ ಪ್ರಯತ್ನ ಮಾಡಿದ್ದಾರೆ.

೩.೩ ಅರಿವಿನ ಕೇಡು :

'ಅರಿವಿನ ಕೇಡು' ಎಂಬ ಕಥೆಯಲ್ಲಿ "ಲೇಖಕ **ಕಲ್ಲೇಶ್ ಕುಂಬಾರ್**ರು ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಅನೇಕ ಘಟನೆಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಬರುವ ಅಡ್ಡ ಹೆಸರುಗಳ ಬಗ್ಗೆ, ಅಲ್ಲಿಯ ಸ್ವಚ್ಛತೆ ಬಗ್ಗೆ, ಆ ಗ್ರಾಮೀಣ ಜನರಿಗೆ ಕೈಯಲ್ಲಿ ಸ್ವಲ್ಪ ಹಣ ಬಂದರೆ, ಅವರ ವರ್ತನೆ ಯಾವ ರೀತಿ ಬದಲಾಗುತ್ತದೆ ಮತ್ತು ಆ ವರ್ತನೆಯಿಂದ ಯಾವ ಕೆಟ್ಟ ಪರಿಣಾಮಗಳಾಗುತ್ತವೆ ಮತ್ತು ವೇಶ್ಯಯರ ಸಹವಾಸದಿಂದ ಆಗುವ ಪರಿಣಾಮಗಳನ್ನು ಅದಲ್ಲದೇ ಗ್ರಾಮೀನ ಪ್ರದೇಶದಲ್ಲಿ ಕಂಡುಬರುವ ಜಗಳಗಳು ಯಾವ ರೀತಿ ವಿಕೋಪಕ್ಕೆ ತಿರುಗುತ್ತವೆ. ಆ ಸಣ್ಣ ಸಣ್ಣ ಜಗಳಗಳೇ ಕೋಮು ಗಲಭೆಯಾಗಿ ಇಡೀ ಊರಿಗೆ ಊರು ನಿಶ್ಯಬ್ಧವಾಗಿ ಬಿಡುತ್ತದೆ. ಈ ಎಲ್ಲ ಘಟನೆಗಳ ಬಗ್ಗೆ ಲೇಖಕರು 'ಅರಿವಿನ ಕೇಡು' ಎಂಬ ಕಥೆಯಲ್ಲಿ ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ"[೩].

ಈ ಕಥೆಯಲ್ಲಿ ಬರುವ ತಿಪ್ಪಮನಿ ಬಸವ್ವ ಎಂಬ ಅಡ್ಡ ಹೆಸರು ಬರಲು ಕಾರಣ ಬಸವ್ವನ ಅತ್ತೆ ಅಂದರೆ ಬಸವ್ವನ ಗಂಡ ಗುರಪ್ಪನ ತಾಯಿ ತನ್ನ ಮನೆಯ ಮುಂದೆ ತಿಪ್ಪೆಯನ್ನು ಬೆಳೆಸಿಕೊಂಡು ಬಂದಿರುತ್ತಾಳೆ. ಆ ತಿಪ್ಪೆಯಲ್ಲಿ ಊರ ಜನರು ಹೊಲಸನ್ನು ಅದರಲ್ಲಿ ಚಲ್ಲುರುತ್ತಾರೆ. ಆ ತಿಪ್ಪೆಯಿಂದ ಬಂದ ಗೊಬ್ಬರದಿಂದ ಚನ್ನಾಗಿ ಬೆಳೆಯನ್ನು ತಗೆಯುತ್ತಿರುತ್ತಾರೆ. ಗುರಪ್ಪನ ತಾಯಿ ತಿರಿಹೋದ ನಂತರ ಆ ತಿಪ್ಪೆಯ ಜವಾಬ್ದಾರಿಯೆಲ್ಲ ಸೊಸೆ ಬಸವ್ವನ ಹೆಗಲಿಗೆ ಬೀಳುತ್ತದೆ. ಬಸವ್ವ ಸಹ ಅತ್ತೆಯಂತೆ ತಿಪ್ಪೆಯನ್ನು ಸಾಕುತ್ತಾ ಬರುತ್ತಾಳೆ. ಇದರಿಂದ ತಿಪ್ಪಿಮನಿ ಬಸವ್ವ ಎಂಬ ಹೆಸರು ಬರುತ್ತದೆ ಎಂಬುದನ್ನು ಕಥೆಗಾರರು ಸೊಗಸಾಗಿ ವಿವರಿಸಿದ್ದಾರೆ.

---

೩. ಡಾ॥ ಪ್ರಹ್ಲಾದ ಅಗಸನಕಟ್ಟೆ : ಉರಿಯ ನಾಲಿಗೆಯ ಕಥೆಗಳು" : (ಮುನ್ನುಡಿಯಿಂದ) ಪುಟ ಸಂಖ್ಯೆ : ೧೨

ತಿಪ್ಪಿಯಿಂದ ಬಂದ ಗೊಬ್ಬರವನ್ನು ತನ್ನ ಹೊಲಕ್ಕೆ ಹಾಕಿ ಚನ್ನಾಗಿ ಬೆಳೆ ತೆಗೆದುಕೊಂಡು ತುಂಬಾ ಹಣ ಮಾಡಿಕೊಂಡು ಸಾಹುಕಾರನಾಗಿ ಊರಲ್ಲಿ ದೌಲತನ್ನು ತೋರಿಸುತ್ತಾ ಮೆರೆಯುವವನು ಬಸವ್ವನ ಗಂಡ ಗುರಪ್ಪ. ಈ ಗುರಪ್ಪನ ಕೈಯಲ್ಲಿ ಹಣ ಬಂದ ತಕ್ಷಣ ಆತ ಮೈ ಮೇಲೆ ಬಂಗಾರದ ಒಡವೆಗಳನ್ನು ಹಾಕಿಕೊಂಡು ಹೊಸ ಹೊಸ ಬಟ್ಟೆಯನ್ನು ಹಾಕಿಕೊಂಡು ಊರಲ್ಲಿ ತಿರುಗಾಡಲು ಶುರು ಮಾಡುತ್ತಾನೆ. ಇವನ ಸಾಹುಕಾರಿಕೆಯನ್ನು ನೋಡಿ ಆಗತಾನೇ ಮುಂಬಯಿ ಇಂದ ರೋಗನ್ನು ಹಚ್ಚಿಕೊಂಡು ಬಂದ ವೇಶ್ಯ ಕಮಲಿಯು ಗುರಪ್ಪನನ್ನು ಬಲೆಗೆ ಕೆಡವಿಕೊಳ್ಳುತ್ತಾಳೆ. ಗುರಪ್ಪ ಕಮಲಿಯ ರೂಪಕ್ಕೆ ಮನಸೋತು ಅವಳಲ್ಲಿ ವಿಲಿನನಾಗಿ ಕಮಲಿಯಲ್ಲಿದ್ದ ಎಲ್ಲ ರೋಗವನ್ನು ಗುರಪ್ಪ ಪಡೆದುಕೊಳ್ಳುತ್ತಾನೆ. ರೋಗ ಪಿಡಿತನಾದ ಗುರಪ್ಪನನ್ನು ಕಮಲಿ ಎಲ್ಲ ಹಣವನ್ನು ಕಸೆದುಕೊಂಡು ಮನೆಯಿಂದ ಹೊರ ಹಾಕುತ್ತಾಳೆ. ಗುರಪ್ಪ ವಿಧಿ ಇಲ್ಲದೇ ತನ್ನ ಹೆಂಡತಿ ಬಸವ್ವ ಮತ್ತು ಮಗ ಪರಮೇಶಿ ಹತ್ತಿರ ಬಂದು ಮನೆಯಲ್ಲಿ ಹಾಸಿಗೆ ಹಿಡಿಯುತ್ತಾನೆ. ಹೆಂಡತಿ ಮತ್ತು ಮಗ ಗುರಪ್ಪನ ಆರೈಕೆಯನ್ನು ಮಾಡುತ್ತಾರೆ.

ಲೇಖಕರು ಈ ಸಂದರ್ಭದಲ್ಲಿ ಗಂಡಸರು ಹೇಗೆ ಹಾಳಾಗುತ್ತಾರೆ ಮತ್ತು ಹೆಣ್ಣಿನ ಮೋಹಕ್ಕೆ ಹೇಗೆ ಒಳಗಾಗುತ್ತಾರೆ ಎಂಬುದನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ. ಅದಲ್ಲದೇ ಪರಸ್ತ್ರೀಯರ ಸಹವಾಸದಿಂದ ಯಾವ ರೀತಿ ತೊಂದರೆಯಾಗುತ್ತದೆ ಎಂಬುದನ್ನು ಸಹ ಕಥೆಗಾರರು ಜನರಿಗೆ ಒಂದು ಒಳ್ಳೆಯ ಸಂದೇಶವನ್ನು ಈ ಕಥೆಯ ಮೂಲಕ ತಿಳಿಸಿದ್ದಾರೆ.

ರೋಗ ಪಿಡಿತನಾಗಿ ಹಾಸಿಗೆ ಹಿಡಿದ ಗುರಪ್ಪನಿಗೆ ಕೋಳಿಯ ಸಾರನ್ನು ತಿನ್ನುವ ಆಸೆಯಾದಾಗ ಮಗ ಪರಮೇಶಿ ತಮ್ಮ ತಿಪ್ಪೆಯಲ್ಲಿ ಹುಳಗಳನ್ನು ಮೆಯುತ್ತಿದ್ದ ಒಂದು ಕೋಳಿಯನ್ನು ಹಿಡಿದು ಮನೆಗೆ ತರುತ್ತಾನೆ. ಅದನ್ನು ಕೋಳಿಯ ಒಡತಿ ಪಾತಿಮಾಳ ಮಗಳು ನೋಡಿರುತ್ತಾಳೆ. ಕೋಳಿ ಕದ್ದ ವಿಷಯವನ್ನು ಮಗಳು ಪಾತಿಮಾಳಿಗೆ ಹೇಳಿದಾಗ ಪಾತಿಮಾ ತಿಪ್ಪಿಮನಿ ಬಸವ್ವನ ಮನೆಗೆ ಬಂದು ಬಸವ್ವನನ್ನು ಮತ್ತು ಪರಮೇಶಿಯನ್ನು ಎಳೆದು ತಂದು ಹೊಡೆಯುತ್ತಾಳೆ. ಈ ಜಗಳ ವಿಕೋಪಕ್ಕೆ ತಿರುಗಿ ಪರಮೇಶಿ ಮತ್ತು ಪಾತಿಮಾಳ ಗಂಡ ಹುಸೇನ ಇಬ್ಬರಿಗೂ ಜಗಳವಾಗುತ್ತದೆ. ಈ ಜಗಳವನ್ನು ಬಗೆಹರಿಸಲು ಬಂದವರ ಮಾತನ್ನು ಇವರು ಕೇಳುವುದಿಲ್ಲ. ನಂತರ ಈ ಜಗಳ ಕೋಮುಗಲಭೆಯಾಗಿ ಪರಿವರ್ತನೆಯಾಗುತ್ತದೆ.

ಸಣ್ಣ ಪುಟ್ಟ ಜಗಳಗಳು ಯಾವ ರೀತಿಯಾಗಿ ಕೋಮುಗಲಭೆಯಾಗಿ ರೂಪುಗೊಳ್ಳುತ್ತವೆ ಎಂಬುದನ್ನು ಲೇಖಕರು ತಿಳಿಸಿಕೊಟ್ಟಿದ್ದಾರೆ. ಅಂದರೆ ಇದರಿಂದ ನಮಗೆ ತಿಳಿಯುವದೇನೆಂದರೆ 'ಒಂದು ಬೆಂಕಿಯ ಕಿಡಿ ಜಗತ್ತನ್ನೇ ಸುಡಬಹುದು' ಎಂಬುದನ್ನು ತಿಳಿಸುತ್ತದೆ. ಇಂತಹ ಜಗಳಗಳು ಊರಿನ ಶಾಂತಿಯನ್ನು ಕೆಡಿಸುತ್ತದೆ. ನೆಮ್ಮದಿಯನ್ನು ಕೆಡಿಸುತ್ತದೆ. ಆದ್ದರಿಂದ ಇಂತಹ ಕೋಮುಗಲಭೆಗಳಿಗೆ ಆಸ್ಪದ ಕೊಡಬಾರದು ಎಂಬ ಸಂದೇಶವನ್ನು ಲೇಖಕರು ಮನಮೋಹಕವಾಗಿ ಚಿತ್ರಿಸಿದ್ದಾರೆ.

ಪರಮೇಶಿ ಈ ಜಗಳದಿಂದ ರೊಚ್ಚಿಗೇಳುತ್ತಾನೆ. ಅಷ್ಟರಲ್ಲಿ ಪರಮೇಶಿ ತಂದೆ ಗುರಪ್ಪ ತೀರಿಹೋಗುತ್ತಾನೆ. ಇದರಿಂದ ಪರಮೇಶಿಯ ಸಿಟ್ಟು ನೆತ್ತಿಗೇರುತ್ತದೆ. ತನ್ನ ಮನೆ ಮುಂದೆ ನರಳುತ್ತಾ ಬಿದ್ದಿರುವ ಹಂದಿಯನ್ನು ರಾತ್ರಿ ಸಮಯದಲ್ಲಿ ಮಸೀದಿಯಲ್ಲಿ ಹಾಕಿ ಬರುತ್ತಾನೆ. ಇದರಿಂದ ಜನರೆಲ್ಲ ರೊಚ್ಚಿಗೆದ್ದು ಹಿಂದುಗಳ ದೇವರ ಮುಂದೆ ಗದ್ದಲ ಮಾಡುತ್ತಾರೆ. ಹಿಂದುಗಳ ದೇವಸ್ಥಾನಕ್ಕೆ ಕಲ್ಲುಗಳನ್ನು ಹೇರುತ್ತಾರೆ. ಇದರಿಂದ ಕೋಮುಗಲಭೆಯಾಗಿ ಊರ ತುಂಬಾ ಪೋಲಿಸರು ಬರುವಂತಾಗುತ್ತದೆ. ಇದರಿಂದ ಊರಿನ ಶಾಂತಿಯು ಹದಗೆಡುತ್ತದೆ. ಊರ ನೆಮ್ಮದಿಯು ಹಾಳಾಗುತ್ತದೆ. ಪೋಲಿಸರು ಪರಮೇಶಿಯನ್ನು ಹುಡುಕುತ್ತಾರೆ. ಊರ ಜನರಲ್ಲಿ ಆತಂಕ ಹುಟ್ಟುತ್ತದೆ.

ಪರಮೇಶಿ ಮತ್ತೆ ಆತನ ಅನೇಕ ಸ್ನೇಹಿತರು ಸೇರಿ ಪೋಲಿಸರಿಗೆ ಕಂಪ್ಲೆಂಟ್ ಕೊಡುತ್ತಾರೆ. ಗೋಹತ್ಯೆ ನಿಷೇಧ ಕಾಯ್ದೆಯಡಿ ಯಾವುದೇ ಜಾನುವಾರುಗಳನ್ನು ಕಡಿಯಬಾರದು ಎಂದು ಕಂಪ್ಲೇಂಟ್ ಕೊಡುವಾಗ ಪೋಲಿಸರು ಮಾಂಸದಂಗಡಿ ಹುಸೇನನನ್ನು ಹಿಡಿದುಕೊಂಡು ಹೋಗುತ್ತಾರೆ. ಇದರಿಂದ ಮುಸ್ಲಿಂರಲ್ಲಿ ಮತ್ತಷ್ಟು ಸಿಟ್ಟು ಹೆಚ್ಚಾಗುತ್ತದೆ. ಮುಸ್ಲಿಂ ಯುವಕರು ಮತ್ತು ಹಿಂದು ಯುವಕರ ಮಧ್ಯೆ ಜಗಳ ಪ್ರಾರಂಭವಾಗಿ ಹೊಡೆದಾಡುತ್ತಾರೆ. ಹೀಗೆ ಒಂದು ಸಣ್ಣ ಜಗಳ ಎಷ್ಟೊಂದು ಅನಾಹುತ ಮಾಡುತ್ತದೆ ಎಂಬುದನ್ನು ಲೇಖಕರು ತಿಳಿಸುತ್ತಾರೆ.

ಈ ಕೋಮುಗಲಭೆಯಲ್ಲಿ ಮುಸ್ಲಿಂ ಯುವಕರು ಒಂದು ಗುಂಪು ಕಟ್ಟಿಕೊಂಡು ತಿರುಗುತ್ತಾರೆ. ಹಾಗೆ ಹಿಂದು ಯುವಕರು ಸಹ ಒಂದು ಗುಂಪು ಕಟ್ಟಿಕೊಂಡು ತಿರುಗುತ್ತಾರೆ. ಈ ಎರಡು ಗುಂಪಿನವರು ಎಲ್ಲಿಯಾದರು ಕಾಣಿಸಿದರೆ ಬಡಿದಾಟ ಶುರುವಾಗಿ ಬಿಡುತ್ತದೆ. ಈ ಗುಂಪಿನವರು ಯಾರಾದರೂ ಬುದ್ಧಿವಾದ ಹೇಳಲಿಕ್ಕೆ ಬಂದರೆ ಅವರ ಮಾತನ್ನು ಸಹ ಕೇಳುತ್ತಿರಲಿಲ್ಲ. ಹೀಗೆ ಅನೇಕ ರೀತಿಯಿಂದ ಇಂತಹ ಗಲಭೆಗಳಿಂದ ತುಂಬಾ ತೊಂದರೆಯಾಗುತ್ತದೆ.

ಕೆಲವು ಸಂದರ್ಭಗಳಲ್ಲಿ ಇಂತಹ ಜಗಳವನ್ನು ರಾಜಕೀಯ ವ್ಯಕ್ತಿಗಳು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುವುದುಂಟು. ಯಾಕೆಂದರೆ ಈ ರಾಜಕೀಯ ಜನರಿಗೆ ಬರಿ ತಮಗೆ ಓಟು ಬೇಕಾಗಿರುತ್ತದೆ. ಆದರಿಂದ ಲೇಖಕರು ಈ ಕಥೆಯಲ್ಲಿ ನೇರವಾಗಿ ಹೇಳದಿದ್ದರು ಪರೋಕ್ಷವಾಗಿ ಹೇಳಿದಂತಿದೆ. ಇಲ್ಲಿ ಜನರಿಗೆ ಕೋಮುಗಲಭೆ ಯಾವ ರೀತಿಯಾಗಿ ಹುಟ್ಟುತ್ತವೆ ಮತ್ತು ಅಂತಹ ಕೋಮುಗಲಭೆಯಿಂದ ಎಂತಹ ದುಷ್ಪರಿಣಾಮಗಳಾಗುತ್ತವೆ ಎಂಬುದನ್ನು ತಿಳಿಸುವುದೇ ಲೇಖಕರ ಉದ್ದೇಶವಾಗಿದೆ ಅನಿಸುತ್ತದೆ.

ಈ ಕೋಮುಗಲಭೆಯಿಂದ ಯಾರಿಗೂ ಸಹ ಲಾಭವಿಲ್ಲ. ಇದರಿಂದ ಆದಷ್ಟು ಹಾನಿಯೇ ಹೆಚ್ಚಾಗುತ್ತದೆ ಎಂಬುದನ್ನು ಲೇಖಕರು ತಿಳಿಸಿದ್ದಾರೆ. ಈ ಕಥೆಯಿಂದ ನಮಗೆ ಮತ್ತೊಂದು ಸಂದೇಶ ತಿಳಿದು ಬರುತ್ತದೆ. ಈ ಸಣ್ಣ ಪುಟ್ಟ ಜಗಳಗಳು ಕೋಮುಗಲಭೆಯಾಗಿ ಆ ಕೋಮುಗಲಭೆಗಳು ವಿಕೋಪಕ್ಕೆ ತಿರುಗಿ ಅದರಿಂದ ದೇಶದಲ್ಲಿ ಒಡಕು ಉಂಟಾಗುವ ಸಾಧ್ಯತೆಗಳು ಸಹ ಇರುತ್ತವೆ

ಎಂದೆನಿಸುತ್ತದೆ. ಆದ್ದರಿಂದ ಈ ಕಥೆಯಿಂದ ತಿಳಿಯುವುದು ಬಹಳವಿದೆ. ಈ ಕಥೆಯಲ್ಲಿ ಲೇಖಕರು ಜನರಿಗೆ ಒಂದು ಒಳ್ಳೆಯ ಸಂದೇಶವನ್ನು ನೀಡಿದ್ದಾರೆ ಎಂದು ಹೇಳಬಹುದು. ನಾವು ಸಮಾಜದಲ್ಲಿ ಯಾವ ರೀತಿಯಾಗಿರಬೇಕು. ನಾವು ಒಂದು ಕ್ಷಣ ಮೈ ಮರೆತರೆ ಯಾವ ಪರಿಸ್ಥಿತಿ ಬರುತ್ತದೆ ಎಂಬುದನ್ನು ಈ ಒಂದು ಕಥೆಯ ಮೂಲಕವಾಗಿ ಮಾರ್ಮಿಕವಾಗಿ ತಿಳಿಸಿದ್ದಾರೆ.

'ಅರಿವಿನ ಕೇಡು' ಎಂಬ ಕಥೆಯಲ್ಲಿ ಕಥೆಗಾರರು **ಕಲ್ಲೇಶ್ ಕುಂಬಾರ್**ರು ಗ್ರಾಮೀಣ ಭಾಷೆಯನ್ನು ಬಳಸಿಕೊಂಡಿದ್ದಾರೆ. ಜೊತೆಗೆ ಸರಳವಾದ ಮತ್ತು ಎಲ್ಲ ಜನರಿಗೂ ತಿಳಿಯುವ ರೀತಿಯಲ್ಲಿ ಈ ಕಥೆಯಲ್ಲಿ ಭಾಷೆಯನ್ನು ಬಳಸಿಕೊಂಡಿದ್ದಾರೆ. ಇಲ್ಲಿ ಬಂದಿರುವ ಎಲ್ಲಾ ಘಟನೆಗಳನ್ನು ವೀಕ್ಷಿಸಿದರೆ ಇದು ಒಂದು ನಿಜವಾಗಿಯು ನಡೆದಂತ ಘಟನೆಯಾಗಿದೆ ಎಂದೆನಿಸುತ್ತದೆ. ಆದ್ದರಿಂದ ಈ ಕಥೆ ಓದುಗರ ಮನ ಮುಟ್ಟುವಂತಿದೆ.

ಕಲ್ಲೇಶ್ ಕುಂಬಾರ್ರು ಈ ಒಂದು 'ಅರಿವಿನ ಕೇಡು' ಎಂಬ ಕಥೆಯಲ್ಲಿ ಜನರಿಗೆ ಒಂದು ಒಳ್ಳೆಯ ಸಂದೇಶವನ್ನು ನೀಡಿದ್ದಾರೆ ಎನ್ನಬಹುದು. ನಮ್ಮ ವರ್ತನೆ ಯಾವ ರೀತಿಯಾಗಿರಬೇಕು. ನಾವು ಒಂದು ಕ್ಷಣ ಯಾಮಾರಿದರೆ ಎಂಥ ಅನಾಹುತಗಳಾಗುತ್ತವೆ ಎಂಬುದನ್ನು ಸಹ ಈ ಕಥೆಯಲ್ಲಿ ತಿಳಿಸಿದ್ದಾರೆ. ಜೊತೆಗೆ ನಾವು ನಮ್ಮ ಧರ್ಮ, ಜಾತಿಯ ಜೊತೆಗೆ ಅನ್ಯ ಧರ್ಮ, ಜಾತಿಗಳನ್ನು ಸಹ ನಾವು ಗೌರವಿಸಬೇಕು ಎಂಬುದನ್ನು ಲೇಖಕರು ತಿಳಿಸಿದ್ದಾರೆ. ನಾವು ಬೇರೆಯವರ ಧರ್ಮ, ಜಾತಿಯ ಮೇಲೆ ದಬ್ಬಾಳಿಕೆ, ಅನ್ಯಾಯ, ಅನಾಚಾರ ಮಾಡಿದರೆ ಅದು ನಮಗೆ ತೊಂದರೆ ಜೊತೆಗೆ ಊರಿನ ಶಾಂತಿಯುನ್ನು ನೆಮ್ಮದಿಯುನ್ನು ಹಾಳುಮಾಡುತ್ತದೆ. ಆದ್ದರಿಂದ ಈ ಒಂದು ಕಥೆಯಲ್ಲಿ ನಮ್ಮ ಧರ್ಮದ ಜೊತೆಗೆ ಅನ್ಯ ಧರ್ಮವನ್ನು ನಾವು ಗೌರವಿಸಬೇಕು ಎಂಬುದನ್ನು ತಿಳಿಸಿಕೊಟ್ಟಿದ್ದಾರೆ.

ಈ ಕಥೆಯಲ್ಲಿ ಮೊದಲಿಗೆ ಅಂದರೆ ಕಥೆ ಪ್ರಾರಂಭವಾದ ಮೊದಲ ಭಾಗದಲ್ಲಿ ಸ್ವಲ್ಪ ಬೇಜಾರು ಎನಿಸಿದರೂ ಮುಂದುವರೆದ ಹಾಗೆ ಕಥೆಯಲ್ಲಿ ಒಳ್ಳೆಯತನ ತುಂಬಿಕೊಳ್ಳುತ್ತದೆ. ಅಂದರೆ ಕಥೆಯ ಮೊದಲ ಭಾಗ ಸ್ವಲ್ಪ ಗದ್ದಲವನ್ನುಂಟು ಮಾಡಿದರೆ ಮುಂದಿನ ಎಲ್ಲಾ ಭಾಗಗಳು ಸರಳವಾಗಿ ತಿಳಿಯುವಂತಿದೆ. ವ್ಯಕ್ತಿಯ ವರ್ತನೆ ಯಾವ ರೀತಿಯಾಗಿರಬಹುದು, ನಡುವಳಿಕೆ ಶ್ರೀಮಂತರ ದಬ್ಬಾಳಿಕೆ, ಹೆಣ್ಣಿನ ಮೋಹ, ಅದರ ಪರಿಣಾಮ, ಭಯಾನಕ ರೋಗದ ಸ್ಥಿತಿ, ಅದರ ಪರಿಣಾಮ, ಸಣ್ಣ ಸಣ್ಣ ವಿಷಯಕ್ಕಾಗಿ ಜಗಳ, ಅದರ ಪರಿಣಾಮ ಈ ಎಲ್ಲಾ ಘಟನೆಗಳು ಈ ಕಥೆಯಲ್ಲಿ ಕಣ್ಮುಂದೆ ನಡೆದಂತೆ ಲೇಖಕರು ಈ ಕಥೆಯಲ್ಲಿ ಚಿತ್ರಿಸಿದ್ದಾರೆ. ಅದಲ್ಲದೇ ಒಂದು ಹಳ್ಳಿಯಲ್ಲಿ ಎಲ್ಲಾವರ್ಗದ ಜನರು ಒಂದಾಗಿ ಬಾಳಬೇಕು ಎಂಬ ಸಂದೇಶವನ್ನು ಕೂಡಾ ನೀಡಿದ್ದಾರೆ. ಅಲ್ಲದೇ ಹಿಂದು – ಮುಸ್ಲಿಂ ಅಂತಾ ಬಡಿದಾಡಿದರೆ ಅದರಿಂದ ಎಲ್ಲಾ ವರ್ಗದ ಜನರಿಗೆ ತುಂಬಾ ತೊಂದರೆಯಾಗುತ್ತದೆ ಎಂಬುದನ್ನು ಸಹ ಲೇಖಕರು ಈ 'ಅರಿವಿನ ಕೇಡು' ಎಂಬ ಕಥೆಯ ಮೂಲಕ ತಿಳಿಸಿ ಕೊಟ್ಟಿದ್ದಾರೆ. ಆದ್ದರಿಂದ ಇದೊಂದು ಸಮಾಜವನ್ನು ತಿದ್ದುವಂಥ ಕಥೆಯಾಗಿದೆ ಎನ್ನಬಹುದು.

ಲೇಖಕರು ಈ ಕಥೆಯಲ್ಲಿ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಎಲ್ಲಾ ವಿಷಯಗಳು ಅಷ್ಟೇ ಮುಖ್ಯ ಎನಿಸುತ್ತದೆ. ಹೇಗೆಂದರೆ ಈ ಕಥೆಯಿಂದ ನಮ್ಮ ಮನೆಯನ್ನು ಹೇಗೆ ಸ್ವಚ್ಛವಾಗಿಡಬೇಕು ಎಂಬುದು ಸಹ ತಿಳಿಸುತ್ತದೆ. ಮತ್ತು ಮನೆಯ ಮುಂದೆ ತಿಪ್ಪೆಯನ್ನು ಮಾಡುವುದರಿಂದ ಆಗುವ ಅನೇಕ ತೊಂದರೆಗಳು ಆಗುತ್ತವೆ ಎಂಬುದನ್ನು ಕೂಡಾ ತಿಳಿಸುತ್ತದೆ ಮತ್ತು ಈ ಕಥೆಯಲ್ಲಿ ಮುಖ್ಯವಾಗಿ ಬಸವ್ವನ ಗಂಡ ಗುರಪ್ಪನ ಬಗ್ಗೆ ಇಲ್ಲಿ ಹೆಚ್ಚಿನ ಗಮನ ಸೆಳೆಯಬೇಕಾಗುತ್ತದೆ. ಕಾರಣ ಗುರಪ್ಪ ತನ್ನ ಮನೆಯಲ್ಲಿ ಸುಂದರವಾದ ಹೆಂಡತಿ–ಮಕ್ಕಳನ್ನು ಬಿಟ್ಟು ಬೇರೆಯೊಬ್ಬ ಹೆಣ್ಣಿನ ಸಂಗಡ ಅನೈತಿಕ ಸಂಬಂಧವನ್ನು ಇಟ್ಟುಕೊಳ್ಳುತ್ತಾನೆ. ಈ ಅನೈತಿಕ ಸಂಬಂಧದಿಂದ ಎಂತಹ ಪರಿಣಾಮವನ್ನು ಎದುರಿಸಬೇಕಾಯಿತು ಎಂಬುದನ್ನು ಈ ಕಥೆಯ ಮೂಲಕವಾಗಿ ತಿಳಿಸಿಕೊಟ್ಟಿದೆ. ಸದ್ಯದ ಪರಿಸ್ಥಿತಿಯಲ್ಲಿ ಎಲ್ಲರೂ ಈ ಒಂದು ವಿಷಯದ ಬಗ್ಗೆ ತಿಳಿಯಬೇಕಾಗಿದೆ. ಯಾಕೆಂದರೆ ಅನೇಕ ಗಂಡಸರು ತಮ್ಮ ಚಟದ ಸಲುವಾಗಿ ಯಾರೋ ಗೊತ್ತಿಲ್ಲದ ಹೆಣ್ಣಿನ ಸಂಗಡ ಅನೈತಿಕ ಸಂಬಂಧವನ್ನು ಬೆಳೆಸಿಕೊಂಡು ಅವಳಿಂದ ಕೆಟ್ಟ ರೋಗವನ್ನು ತರಿಸಿಕೊಳ್ಳುವ ಜನ ಈಗಲೂ ಹೆಚ್ಚಾಗುತ್ತಿದ್ದಾರೆ. ಅದರಿಂದ ಈ ಕಥೆಯಲ್ಲಿ ಗುರಪ್ಪನ ಪಾತ್ರವನ್ನು ಎಲ್ಲರೂ ಲಕ್ಷಕೊಟ್ಟು ಕೇಳುವಂತೆ ಲೇಖಕರು ಸಮಾಜಕ್ಕೆ ಹಾಗೂ ಜನರಿಗೆ ಈ ಕಥೆಯ ಮೂಲಕ ಒಂದು ಸಂದೇಶವನ್ನು ನೀಡಿದ್ದಾರೆ.

ಒಂದು ಚಿಕ್ಕ ಕೋಳಿಯ ಜಗಳ ಊರ ಶಾಂತಿಯನ್ನೇ ಹಾಳು ಮಾಡುತ್ತದೆ. ಆ ಸಣ್ಣ ಜಗಳ ಕೋಮುಗಲಭೆಯಾಗಿ ಮಾರ್ಪಾಟಾಗುತ್ತದೆ. ಅದರಿಂದ ಈ ವಿಷಯವು ಇಲ್ಲಿ ಮುಖ್ಯವಾಗುತ್ತದೆ ಎನ್ನಬಹುದು. ಒಂದು ಕೋಳಿಗಾಗಿ ಹುಟ್ಟಿಕೊಂಡ ಈ ಜಗಳ ಪರಪ್ಪನ ಮಗ ಪರಮೇಶಿಯ ಮೂಲಕವಾಗಿ ಅದೊಂದು ಹಿಂದು – ಮುಸ್ಲಿಂ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತದೆ. ಪರಮೇಶಿ ಮಾಡಿದ ಎಡವಟ್ಟಿನಿಂದ ಅಂದರೆ ಸತ್ತ ಹಂದಿಯನ್ನು ಮಸೀದಿಯಲ್ಲಿ ಎಸೆದು ಬಂದಿದ್ದರಿಂದ ಅಲ್ಲಿ ಎಲ್ಲಾ ಮುಸ್ಲಿಂರು ರೊಚ್ಚಿಗೆದ್ದು ಹಿಂದು ದೇವಾಲಯಗಳ ಮೇಲೆ ಹಾಗೂ ಹಿಂದು ಜನರ ಮೇಲೆ ಸೇಡನ್ನು ತಿರಿಸಿಕೊಳ್ಳಲು ಹತ್ತಿದರು. ಇದರಿಂದ ಕೋಮುಗಲಭೆ ಉಂಟಾಗಿ ಊರಿನ ಶಾಂತಿ ಹಾಳಾಗುತ್ತದೆ. ಇದು ಸಹ ಈ ಕಥೆಯ ಒಂದು ಮುಖ್ಯ ಭಾಗವಾಗಿದೆ.

ಲೇಖಕರು **ಕಲ್ಲೇಶ್ ಕುಂಬಾರ್**ರ ಈ 'ಅರಿವಿನ ಕೇಡು' ಕಥೆಯಲ್ಲಿ ಒಂದು ಊರಿನಲ್ಲಿ ಈ ಘಟನೆ ನಿಜವಾಗಿ ನಡೆದಿರುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಮತ್ತು ಈ ಕಥೆಯಲ್ಲಿ ಮಾತಿನ ಶೈಲಿಯನ್ನು ಸಹ ಸೊಗಸಾಗಿ ವರ್ಣಿಸಿದ್ದಾರೆ. ಈ ಕಥೆಯು ಸಂಪೂರ್ಣವಾಗಿ ಒಂದು ಹಳ್ಳಿಯ ಚಿತ್ರಣವನ್ನು ತಿಳಿಸಿಕೊಡುತ್ತದೆ. ಈ ಕಥೆಯ ತಿರುಳು ಬೇಗನೆ ತಿಳಿಯದಿದ್ದರು ಓದುತ್ತಾ ಹೋದಂತೆ ಅದರಲ್ಲಿ ಬರುವ ಎಲ್ಲಾ ಮಾಹಿತಿಯು ಸ್ಪಷ್ಟವಾಗುತ್ತದೆ. ಅದಲ್ಲದೇ ಈ ಕಥೆಗೆ ಹಳ್ಳಿಯ ಭಾಷೆಯನ್ನು ಸಹ ಅಳವಡಿಸಿ ಕಥೆಗೆ ಮೆರಗು ಬರುವಂತೆ ಮಾಡಿದ್ದಾರೆ. ಈ ಕಥೆಯುನ್ನು ಓದಿದರೆ ನಮಗೆ ಮತ್ತೊಂದು ವಿಷಯ ತಿಳಿಯುತ್ತದೆ. ಇಲ್ಲಿ ಬರುವ ಜನರು ಹೆಚ್ಚಿನ ಪ್ರಮಾನದಲ್ಲಿ ಶಿಕ್ಷಣವನ್ನು ಪಡೆದವರಾಗಿರುವುದಿಲ್ಲ ಎಂಬುದು ತಿಳಿದು ಬರುತ್ತದೆ. ಏಕೆಂದರೆ

ಒಂದು ಸಣ್ಣ ವಿಷಯವನ್ನು ದೊಡ್ಡದಾಗಿಸಿ ಅದರಿಂದ ಊರ ಶಾಂತಿ ಹಾಳಾಗುತ್ತದೆ ಎಂದರೆ ಅಲ್ಲಿಯ ಜನರ ಬಗ್ಗೆ ತಿಳಿದು ಬರುತ್ತದೆ.

"'ಅರಿವಿನ ಕೇಡು' ಶೀರ್ಷಿಕೆಯೇ ಈ ಕತೆಯೊಳಗಣ ಪ್ರಪಂಚದ ವಾಸ್ತವವನ್ನು ತೆರೆದಿಡುತ್ತದೆ. ಈ ಕಥೆಯು ಸದ್ಯದ ಸಂದರ್ಭದಲ್ಲಿ ಹಿಂದು – ಮುಸ್ಲಿಂ ಅಂತಹ ಜಗಳ ವಾಡುತ್ತಿರುವವರಿಗೆ ಒಂದು ಒಳ್ಳೆಯ ಪಾಠವಾದಂತಿದೆ. ಆದ್ದರಿಂದ ಈ ಕಥೆಯಿಂದ ನಾವು ಸಮಾಜದಲ್ಲಿ ನಮ್ಮ ಅನ್ಯ ಧರ್ಮದವರ ಜೊತೆ ಹೇಗೆ ಇರಬೇಕು ಎಂಬುದನ್ನು ಕೂಡಾ ತಿಳಿಸಿಕೊಡುತ್ತದೆ. ಅದಲ್ಲದೇ ಸಮಾಜದಲ್ಲಿ ಎಲ್ಲರೂ ಸಹೋದರ ರೀತಿಯಲ್ಲಿ ನಡೆದುಕೊಳ್ಳಬೇಕು ಎಂಬುದನ್ನು ಸಹ ತಿಳಿಸುತ್ತದೆ. ಯಾವ ಧರ್ಮವು ಕಡಿಮೆಯಲ್ಲ ಎಲ್ಲ ಧರ್ಮಗಳು ಸಮಾನವು ಎಂದು ಈ ಕಥೆಯಿಂದ ಲೇಖಕರು ತಿಳಿಸಿದ್ದಾರೆ"[೬].

೩.೪ ಕಿಚ್ಚು :

ಕಲ್ಲೇಶ್ ಕುಂಬಾರ್ರು 'ಕಿಚ್ಚು' ಎಂಬ ಕಥೆಯಲ್ಲಿ ಎಂಥವರ ಮನವು ಕರಗುವಂತೆ ಕಥೆಯನ್ನು ಹೆಣೆದಿದ್ದಾರೆ. ಈ ಕಥೆಯಲ್ಲಿ ಒಂದು ಕುಟುಂಬದಲ್ಲಿ ಒಂದು ಹೆಣ್ಣು ಮಗಳು ತನ್ನ ಗಂಡನನ್ನು ಕಳೆದುಕೊಂಡ ನಂತರ ವಯಸ್ಸಿಗೆ ಬಂದ ಮಗನನ್ನು ಕಳೆದುಕೊಂಡು ಅನಾಥಳಾಗುತ್ತಾಳೆ. ಆ ಹೆಣ್ಣಿನ ದುಃಖಕ್ಕೆ ಕೊನೆಯ ಇಲ್ಲದಂತಾಗುತ್ತದೆ. ಆ ತಾಯಿಯ ದುಃಖವನ್ನು ಕೇಳಿದರೆ 'ಸತ್ಯಹರಿಚ್ಚಂದ್ರ' ನಾಟಕದಲ್ಲಿ ಮಗ ರಾಹುಲನನ್ನು ಕಳೆದುಕೊಂಡು ದುಃಖಿಸುತ್ತಿರುವ 'ಚಂದ್ರಮತಿಯ ಪ್ರಲಾಪ' ನೆನಪಿಗೆ ಬರುತ್ತದೆ. ಅಷ್ಟೊಂದು ರೋಮಾಂಚನವಾಗಿ ಕಟುಕನ ಮನಸ್ಸು ಕರಗುವಂತೆ ಕಥೆಗಾರರು ಈ 'ಕಿಚ್ಚು' ಎಂಬ ಕಥೆಯನ್ನು ಬರೆದಿದ್ದಾರೆ.

ಲೇಖಕರು ಈ ಕಥೆಯಲ್ಲಿ ಒಬ್ಬ ಪವಾಡ ಪುರುಷನ ಕಥೆಯನ್ನು ಸಹ ಇದರಲ್ಲಿ ವಿವರಿಸಿದ್ದಾರೆ. ಆತನ ನಡುವಳಿಕೆ ಆ ಪವಾಡ ಪುರುಷನ ಹಾವಭಾವ, ಮಾತಿನ ಶೈಲಿ, ಆತನ ದಿನಚರಿ, ಆತನ ಮಾತುಗಳು, ಆ ಪವಾಡ ಪುರುಷ ಹೇಳಿದ ಎಲ್ಲಾ ಮಾತುಗಳು ನಿಜವಾಗಿದ್ದು, ಆತ ಒಬ್ಬ ದೇವ ಮಾನವನಿದ್ದಂತೆ ಎಂಬುದನ್ನು ಲೇಖಕರು ಈ 'ಕಿಚ್ಚು' ಎಂಬ ಕಥೆಯಲ್ಲಿ ವಿವರಿಸಿದ್ದಾರೆ.

ಈ ಪವಾಡ ಪುರುಷ ಲಿಂಗ್ಯಕ್ಯರಾದ ನಂತರ ಊರಗೌಡ ಅಲ್ಲಿ ಒಂದು ಮಠವನ್ನು ಕಟ್ಟಿಸುತ್ತಾನೆ. ಆದರೆ ಕಾಲಾಂತರದಲ್ಲಿ ಆ ಮಠದ ಚಿತ್ರಣವೇ ಬೇರೆಣಿಸುತ್ತದೆ. ಆ ಮಠಕ್ಕೆ ಒಬ್ಬ ಕಪಟ ಸನ್ಯಾಸಿ ಬರುತ್ತಾನೆ. ಆ ಮಠದಲ್ಲಿ ಮಾಡಬಾರದ ಎಲ್ಲಾ ಕೆಲಸ ಮಾಡಿದ. ಇದನ್ನು ತಿಳಿದು ಊರಿನ ಜನರು ಮಠಕ್ಕೆ ಬರುವುದನ್ನು ನಿಲ್ಲಿಸುತ್ತಾರೆ. ಇದರ ಬಗ್ಗೆಯೂ ಲೇಖಕರು ಚೆನ್ನಾಗಿ ವಿವರಿಸಿದ್ದಾರೆ.

---

೬. ಡಾ॥ ಪ್ರಹ್ಲಾದ ಅಗಸನಕಟ್ಟೆ : ಉರಿಯ ನಾಲಿಗೆಯ ಕಥೆಗಳು : (ಮುನ್ನುಡಿಯಿಂದ) ಪುಟ ಸಂಖ್ಯೆ : ೧೩

ಈ ಕಥೆಯಲ್ಲಿ ಮುರಿಗೆವ್ವನ ಗಂಡ ಲಗಮಣ್ಣ ಸತ್ತಿರುವುದು ಸಹ ಒಂದು ರೋಮಾಂಚನಕಾರಿಯಾದ ಕಥೆಯಾಗಿದೆ. ಪರಪ್ಪಗೌಡನ ಮನೆಯಲ್ಲಿ ಜೀತಕ್ಕಿದ್ದ ಲಗಮಣ್ಣ, ಗೌಡನ ಮಗನನ್ನು ಶಾಲೆಗೆ ಕಳುಹಿಸಿ ಬರಲು ಹೋದಾಗ ಮುಳ್ಳು ತುಳಿದು ಆ ಮುಳ್ಳಿನಿಂದ ಮೈಯಲ್ಲಿ ವಿಷವೇರಿ ದುರ್ಮರಣಕ್ಕೀಡಾದ ಕಥೆಯನ್ನು ಸಹ ಲೇಖಕರು ಮನಮೋಹಕವಾಗಿ ವಿವರಿಸಿದ್ದಾರೆ.

ಕೊನೆಗೆ ಈ ಕಥೆಯಲ್ಲಿ ಮುರಿಗವ್ವನ ಮಗ ಅಂದರೆ ಸಿದ್ರಾಮ ಸತ್ತಿರುವುದನ್ನು ಸಹ ಲೇಖಕರು ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಕಂಡುಬರುವುದೇ ಈ ಸಿದ್ರಾಮನ ಕಥೆ. ಈ ಸಿದ್ರಾಮ ಸಹ ತನ್ನ ತಂದೆ ಲಗಮಣ್ಣನ ಹಾಗೆ ಪರಪ್ಪಗೌಡನ ಹತ್ತಿರ ಜೀತಕ್ಕೆ ನಿಂತುಕೊಳ್ಳುತ್ತಾನೆ. ಈ ಸಿದ್ರಾಮನ ಊಟ, ಉಪಚಾರ, ಮಲಗುವುದೆಲ್ಲ ಗೌಡನ ಮನೆಯಲ್ಲಿ ಇರುತ್ತದೆ. ಸಿದ್ರಾಮ ಮೈಕಟ್ಟಿನಿಂದ ಪೈಲವಾನನಾಗೆ ಕಾಣುತ್ತಾನೆ. ಇವನ ಮೈಕಟ್ಟಿಗೆ ಮರುಳಾಗಿ ಗೌಡನ ಸೊಸೆ ಚೆನ್ನವ್ವ ಗೌಡತಿ ಸಿದ್ರಾಮನ ಮೇಲೆ ಮನಸ್ಸು ಮಾಡಿ ಸಿದ್ರಾಮನಿಂದ ತನ್ನ ಆಸೆಯನ್ನು ತಿರಿಸಿಕೊಳ್ಳುತ್ತಿರುತ್ತಾಳೆ. ಒಂದು ದಿನ ಇವರಿಬ್ಬರು ದನದ ಕೊಟ್ಟಿಗೆಯಲ್ಲಿ ಮಲಗಿದ್ದಾಗ ಪರಪ್ಪಗೌಡನ ಕೈಗೆ ಸಿಕ್ಕಾಗ ಚನ್ನವ್ವ ಗೌಡತಿ ತಿರುಗಿ ಬಿದ್ದು ಸಿದ್ರಾಮನನ್ನು ಬಲಿಪಶು ಮಾಡುತ್ತಾಳೆ. ಈ ಕಥೆಯ ವರ್ಣನೆಯನ್ನು ತುಂಬಾ ರೋಮಾಂಚನವಾಗಿ ಚಿತ್ರಿಸಿದ್ದಾರೆ ಲೇಖಕರು.

ಮುರಿಗೆವ್ವನ ಗಂಡ ಲಗಮಣ್ಣ ಬಹಳ ಮುಗ್ಧ. ಈತನಿಗೆ ಹೋರಗಿನ ಯಾವುದೇ ಹೆಚ್ಚಿನ ಜ್ಞಾನವಿರುವುದಿಲ್ಲ. ಈ ಲಗಮಣ್ಣ ಪರಪ್ಪಗೌಡನ ಬಳಿ ಚಾಕರಿ ಆಳಾಗಿ ಚಿಕ್ಕಂದಿನಿಂದ ದುಡಿಯುತ್ತಾ ಬಂದಿರುತ್ತಾನೆ. ಪರಪ್ಪಗೌಡನೆ ಮುಂದುನಿಂತು ಲಗಮಣ್ಣನ ಮದುವೆಯನ್ನು ಮಾಡಿರುತ್ತಾನೆ. ಮದುವೆಯಾದ ನಂತರ ಲಗಮಣ್ಣ ತನ್ನ ಹೆಂಡತಿಯ ಜೊತೆ ಸಂಸಾರ ಮಾಡಬೇಕೆಂಬ ಜ್ಞಾನವು ಅವನಿಗೆ ಇರುವುದಿಲ್ಲ. ಆತ ಪರಪ್ಪಗೌಡನ ಮನೆಯಲ್ಲಿಯೇ ಊಟ ಮಾಡಿ ಅಲ್ಲಿಯೇ ಮಲಗುತ್ತಿರುತ್ತಾನೆ. ಆದರೆ ಮದುವೆಯಾದ ನಂತರ ತನ್ನ ಹೆಂಡತಿ ಮುರಗೆವ್ವನ ನೆನಪಾದಾಗ ಊರ ಕಡೆ ಬಂದು ಮುರುಕು ಗುಡಿಸಲಿನಲ್ಲಿ ಒಂದು ದಿನ ಮುರಗೆವ್ವನ ಜೊತೆ ಕಾಲ ಕಳೆದು ಹೋಗುತ್ತಿರುತ್ತಾನೆ. ಆ ದಿನ ಮುರಗೆವ್ವನ ವತ್ತಾಯದಿಂದ ಅವಳ ದೇಹ ಸ್ಪರ್ಶದಿಂದ ಲಗಮಣ್ಣ ಅವಳ ಜೊತೆ ಕೂಡುತ್ತಾನೆ. ಇದು ಎಂಟು ಹತ್ತು ದಿನಕ್ಕೊಮ್ಮೆ ನಡೆಯುತ್ತಿರುತ್ತದೆ. ಉಳಿದ ದಿನವೆಲ್ಲ ಪರಪ್ಪಗೌಡನ ದನದ ಕೊಟ್ಟಿಗೆಯಲ್ಲಿಯೇ ಈತನ ವಾಸವಾಗಿರುತ್ತದೆ.

ಕಾಲ ಕಳೆದಂತೆ ಮುರಿಗೆವ್ವ ಗರ್ಭವತಿಯಾಗಿ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಆವಾಗ ಲಗಮಣ್ಣನ ಸಂತೋಷಕ್ಕೆ ಪಾರವೇ ಇಲ್ಲದಂತಾಗುತ್ತದೆ. ಲಗಮಣ್ಣ ಪರಪ್ಪಗೌಡನಿಗೆ ನನ್ನ ಮಗನನ್ನು ಚೆನ್ನಾಗಿ ಶಾಲೆ ಕಲಿಸುತ್ತೇನೆ ಎಂದು ಹೇಳಿದಾಗ ಪರಪ್ಪಗೌಡನಿಗೆ ಸಿಟ್ಟು ಬಂದು ಬೈಯುತ್ತಾನೆ. ಶಾಲೆ ಕಲಿಸುವುದು ನಿಮ್ಮಂತವರ ಕೆಲಸವಲ್ಲ. ಅದು ಏನಿದ್ದರು ನಮ್ಮಂಥ ಶ್ರೀಮಂತರ ಕೆಲಸ ಮಾತ್ರ. ನೀವು ನಿಮ್ಮ ಮಕ್ಕಳು ನಮ್ಮ ಹತ್ತಿರ ಜೀತ ಮಾಡಿ ಬದುಕಬೇಕು ಎನ್ನುತ್ತಾನೆ ಪರಪ್ಪಗೌಡರು.

ಇದರಿಂದ ಸುಮ್ಮನಾದ ಲಗಮಣ್ಣ ಮುಂದೆಂದೂ ತನ್ನ ಮಗನಿಗೆ ಶಾಲೆಯನ್ನು ಕಲಿಸುವ ನೆನಪು ಮಾಡುವುದೇ ಇಲ್ಲ.

ಮಗು ಹುಟ್ಟಿದ ನಂತರ ಕೇರಿಯ ಜನರೆಲ್ಲ ಸೇರಿ ಮಗುವಿಗೆ ಸಿದ್ರಾಮ ಎಂದು ನಾಮಕರಣ ಮಾಡುತ್ತಾರೆ. ಸಿದ್ರಾಮ ಬೆಳೆದು ದೊಡ್ಡವನಾಗುತ್ತಾನೆ. ತಂದೆ – ತಾಯಿಗೆ ಕೆಲಸದಲ್ಲಿ ಸಹಾಯ ಮಡುತ್ತಿರುತ್ತಾನೆ. ಸಿದ್ರಾಮ ಚೆನ್ನಾಗಿ ಬೆಳೆದು ಮುದ್ದು–ಮುದ್ದಾಗಿ ಕಾಣುತ್ತಾನೆ.

ಇತ್ತ ಪರಪ್ಪಗೌಡನಿಗೂ ಒಂದು ಗಂಡು ಮಗು ಇರುತ್ತದೆ. ಅವನೇ 'ಶಿವಣ್ಣಗೌಡ'. ಈ ಶಿವಣ್ಣಗೌಡ ಶಾಲೆಗೆ ಹೋಗುತ್ತಿರುತ್ತಾನೆ. ಶಾಲೆಯಲ್ಲಿ ಹಸಿದಡ್ಡ. ಇತ್ತ ಮೂರು ಸಲ ಮುಲ್ಕಿ ಪರೀಕ್ಷೆಯಲ್ಲಿ ನಪಾಸಾಗಿರುತ್ತಾನೆ. ಕೊನೆಗೆ ಮುಖ್ಯ ಗುರುಗಳ ಸಹಾಯದಿಂದ ಮುಲ್ಕಿ ಪರೀಕ್ಷೆಯಲ್ಲಿ ಪಾಸಾಗಿ ಏನಾಪೂರಕ್ಕೆ ಶಾಲೆಗೆ ಕಳಿಸಬೇಕೆಂದ ಪರಪ್ಪಗೌಡ ಶಿವಣಗೌಡನನ್ನು ತಯಾರು ಮಾಡುತ್ತಾನೆ. ಆವಾಗ ಶಿವಣಗೌಡನನ್ನು ಶಾಲೆಗೆ ಬಿಟ್ಟು ಬರಲು ಲಗಮಣ್ಣನನ್ನು ಕಳುಹಿಸುತ್ತಾನೆ. ಲಗಮಣ್ಣ ಶಿವಣಗೌಡನನ್ನು ಹೆಗಲ ಮೇಲೆ ಕೂಡ್ರಿಸಿಕೊಂಡು ಬರಿಗಾಲಿನಲ್ಲಿ ನಡೆಯುವ ಸಂದರ್ಭದಲ್ಲಿ ವಿಷದ ಮುಳ್ಳೊಂದು ಲಗಮಣ್ಣನ ಕಾಲಿಗೆ ಚುಚ್ಚಿ ಅಲ್ಲಿಯ ಮುರಿಯುತ್ತದೆ. ಇದನ್ನು ಲೆಕ್ಕಿಸದೇ ಲಗಮಣ್ಣ ಮುನ್ನಡೆಯುತ್ತಾನೆ. ಲಗಮಣ್ಣ ಮನೆಗೆ ಬಂದಾಗ ಕಾಲಲ್ಲಿದ್ದ ಮುಳ್ಳಿನ ವಿಷ ಮೈ ಎಲ್ಲ ಏರಿ ಸುಸ್ತಾಗುತ್ತಾನೆ. ಕೊನೆಗೆ ಲಗಮಣ್ಣನನ್ನು ಊರಲ್ಲಿಯ ತನ್ನ ಗುಡಿಸಲಿಗೆ ಕಳುಹಿಸುತ್ತಾರೆ. ನಂತರ ಲಗಮಣ್ಣ ಎಷ್ಟೇ ಉಪಚಾರ ಮಾಡಿದರು ಬದುಕುವದಿಲ್ಲ. ತನ್ನ ಹೆಂಡತಿ ಮುರಿಗೆವ್ವನ ತೊಡೆಯ ಮೇಲೆ ಪ್ರಾಣ ಬಿಡುತ್ತಾನೆ.

ಈ ಘಟನೆಯಿಂದ ಮುರಿಗೆವ್ವ ಮತ್ತು ಮಗ ಸಿದ್ರಾಮ ದಿಗಿಲು ಬಡಿದವರಂತೆ ಆಗುತ್ತಾರೆ. ಮಗನ ಮುಖ ನೋಡಿ ಈ ನೋವನ್ನು ಮರೆಯುತ್ತಾಳೆ ಮುರಿಗವ್ವ. ತಾಯಿ ಮತ ತಮ್ಮ ಜೀವನವನ್ನು ನಡೆಸುವುದು ದುಸ್ತರವಾಗುತ್ತದೆ. ಆವಾಗ ಮಗ ಸಿದ್ರಾಮ ಪರಪ್ಪಗೌಡನ ಮನೆಯಲ್ಲಿ ತಂದೆಯ ಕೆಲಸಕ್ಕೆ ಸೇರಿಕೊಳ್ಳುತ್ತಾನೆ. ಸಿದ್ರಾಮ ಕೂಡಾ ಚೆನ್ನಾಗಿ ಹೇಳಿದ ಎಲ್ಲಾ ಕೆಲಸವನ್ನು ಮಾಡುತ್ತಾ ಪರಪ್ಪಗೌಡನ ಮನೆಯಲ್ಲಿ ಜೀತಕ್ಕೆ ಸೇರುತ್ತಾನೆ.

ಇತ್ತ ಪರಪ್ಪಗೌಡ ತನ್ನ ಮಗ ಹರೆಯಕೆ ಬಂದನೆಂದು ಶಿವಣಗೌಡನಿಗೆ ಮದುವೆ ಮಾಡಿ ಬಿಡುತ್ತಾನೆ. ಶಿವಣಗೌಡ ತುಂಬಾ ವ್ಯಸನಿಯಾಗಿರುತ್ತಾನೆ. ಆತ ಹೆಚ್ಚಾಗಿ ಮನೆಯಲ್ಲಿ ಇರುತ್ತಿರಲಿಲ್ಲ. ಹೊರಗಡೆನೆ ತಿರುಗುತ್ತಿರುತ್ತಾನೆ. ನಂತರ ಶಿವಣಗೌಡನ ಹೆಂಡತಿ ಚನ್ನವ್ವಗೌಡತಿ ಪರಪ್ಪಗೌಡನ ಮನೆಗೆ ಸೊಸೆಯಾಗಿ ನಡೆಯಲು ಬರುತ್ತಾಳೆ. ಚನ್ನವ್ವಗೌಡತಿ ಮೊದಮೊದಲು ಮನೆಯ ಎಲ್ಲಾ ವಾತಾವರಣವನ್ನು ತಿಳಿದುಕೊಳ್ಳುತ್ತಾಳೆ. ಚನ್ನವ್ವಗೌಡತಿಗೆ ಆಸೆ ಹೆಚ್ಚಾಗಿರುತ್ತದೆ. ಅವಳ ಆಸೆಯನ್ನು

ಗಂಡ ಶಿವಣಗೌಡ ತೀರಿಸುತ್ತಿರಲಿಲ್ಲ. ಆದರಿಂದ ಚನ್ನವ್ವ ತನ್ನ ಎಲ್ಲ ನೋವನ್ನು ನುಂಗಿಕೊಂಡು ಸಂಸಾರ ನಡೆಸುತ್ತಿರುತ್ತಾಳೆ. "ಆದರೆ ಚನ್ನವ್ವನ ಆಸೆಯ ಕಟ್ಟೆ ಒಡೆಯುತ್ತದೆ. ಅವಳ ಮನಸ್ಸು ಹತೋಟಿಯನ್ನು ಕಳೆದುಕೊಳ್ಳುತ್ತದೆ. ಎಷ್ಟೇ ಪ್ರಯತ್ನ ಪಟ್ಟರು ಅವಳ ಮನಸ್ಸು ನಿಯಂತ್ರಣ ಆಗುವುದಿಲ್ಲ. ಆವಾಗ ನನ್ನ ಬಯಕೆಯನ್ನು ತೀರಿಸುವವನು ಸಿದ್ರಾಮ ಒಬ್ಬನೇ ಎಂದು ತಿಳಿದು ಜೀತದ ಆಳಾಗಿದ್ದ ಸಿದ್ರಾಮನ ಮೇಲೆ ಚನ್ನವ್ವ ಮನಸ್ಸು ಮಾಡಿ ಬಿಡುತ್ತಾಳೆ"[೭].

ಸಿದ್ರಾಮ ಮೈ ಕೈ ತುಂಬಿಕೊಂಡು ಚನ್ನಾಗಿ ಸದೃಢವಾಗಿರುತ್ತಾನೆ. ಸಿದ್ರಾಮ ಒಬ್ಬ ಪೈಲವಾನ ನಂತೆ ಕಾಣುತ್ತಿರುತ್ತಾನೆ. ಚನ್ನವ್ವಗೌಡತಿಗೆ ಸಿದ್ರಾಮನ ಮೈಕಟ್ಟು ತನ್ನ ಮನಸ್ಸಿನಲ್ಲಿ ತುಂಬಿಕೊಂಡಿರುತ್ತದೆ. ಚನ್ನವ್ವಗೌಡತಿ ಒಂದು ದಿನ ದನದ ಕೊಟ್ಟಿಗೆಯಲ್ಲಿ ಸಿದ್ರಾಮನನ್ನು ತಬ್ಬಿಕೊಳ್ಳುತ್ತಾಳೆ. ಸಿದ್ರಾಮ ಎಷ್ಟೇ ಹೇಳಿದರು ಕೇಳುವುದಿಲ್ಲ ಚನ್ನವ್ವ. ಸಿದ್ರಾಮ ಇದು ಸರಿಯಲ್ಲ ಎಂದು ಹೇಳಿದರು ಕೇಳುವ ಸ್ಥಿತಿಯಲ್ಲಿರಲಿಲ್ಲ ಚನ್ನವ್ವಗೌಡತಿ. ಕೊನೆಗೆ ಚನ್ನವ್ವ ಸಿದ್ರಾಮನನ್ನು ತನ್ನ ಬಲೆಗೆ ಬಿಳಿಸಿಕೊಳ್ಳುತ್ತಾಳೆ. ಸಿದ್ರಾಮನಿಗೂ ಮನಸ್ಸು ತಡೆದುಕೊಳ್ಳಲಾಗದೇ ಚನ್ನವ್ವನ ಬಲೆಗೆ ಬಿದ್ದು ಬಿಡುತ್ತಾನೆ. ಅವರಿಬ್ಬರ ಸರಸ ಸಲ್ಲಾಪಗಳು ಅನೇಕ ದಿನಗಳ ಕಾಲ ನಡೆಯುತ್ತದೆ.

ಒಂದು ದಿನ ಸಿದ್ರಾಮ ಮತ್ತು ಚನ್ನವ್ವಗೌಡತಿ ಇಬ್ಬರು ದನದ ಕೊಟ್ಟಿಗೆಯಲ್ಲಿ ಸೇರಿಕೊಂಡಿರುವಾಗ ಪರಪ್ಪಗೌಡನ ಕೈಗೆ ಸಿಕ್ಕಿಕೊಳ್ಳುತ್ತಾರೆ. ಆವಾಗ ಪರಪ್ಪಗೌಡ ಅವರಿಬ್ಬರನ್ನು ಹಿಡಿದು ಕೇಳಿದಾಗ ಚನ್ನವ್ವಗೌಡತಿ ತಿರುಗಿ ಬೀಳುತ್ತಾಳೆ. ನಾನು ಎಷ್ಟೇ ಬಲವಂತವಾಗಿ ಹೇಳಿದೆ. ಇದು ಸರಿಯಲ್ಲ ಎಂದು ಹೇಳಿದರು ಸಹ ಸಿದ್ರಾಮ ನನ್ನನ್ನು ಬಿಡಲಿಲ್ಲ ಎಂದು ಮಾವನ ಮುಂದೆ ತಿರುಗಿ ಬೀಳುತ್ತಾಳೆ ಚನ್ನವ್ವಗೌಡತಿ. ಪರಪ್ಪಗೌಡನು ರೊಚ್ಚಿಗೆದ್ದು ಸಿದ್ರಾಮನನ್ನು ಬಡಿಯುತ್ತಾನೆ. ಸಿದ್ರಾಮ ಏನೇ ಹೇಳಿದರೂ ಪರಪ್ಪಗೌಡನು ಕೇಳುವುದಿಲ್ಲ.

ಇಲ್ಲಿ ನಮಗೆ ಮತ್ತೊಂದು ವಿಷಯ ತಿಳಿದು ಬರುತ್ತದೆ. ಏನೆಂದರೆ ಹೆಣ್ಣು ಮನಸ್ಸು ಮಾಡಿದರೆ ಏನು ಬೇಕಾದರು ಮಾಡಬಹುದು ಎನಿಸುತ್ತದೆ. ಅದಕ್ಕಾಗಿಯೇ 'ಹೆಣ್ಣಿನ ನೆಲೆ ತಿಳಿದಿಲ್ಲ' ಎನ್ನುವರು ದೊಡ್ಡವರು. ಇದರಲ್ಲಿ ತಪ್ಪು ಎಲ್ಲ ಹೆಣ್ಣಿನ ಕಡೆನೆ ಇದ್ದರು ಆ ಹೆಣ್ಣು ಗಂಡಸನನ್ನು ಸಂಕಷ್ಟಕ್ಕೆ ಸಿಲುಕಿಸಿ ತಾ ಪಾರಾಗುತ್ತಾಳೆ. ಅದಕ್ಕೆ 'ಹೆಣ್ಣು ಮಾಯೆ' ಎಂದಿರುವರು. ಈ ಕಥೆಯಲ್ಲಿಯು ಲೇಖಕರು ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ.

ಪರಪ್ಪಗೌಡನಿಗೆ ಆ ಸಿದ್ರಾಮ ಮತ್ತು ಚನ್ನವ್ವಗೌಡನ ಮಿಲನದ ದೃಷ್ಯ ಕಣ್ಮುಂದೆ ಓಡಾಡುತ್ತಿರುತ್ತದೆ. ಪರಪ್ಪಗೌಡನ ಸಿಟ್ಟು ನೆತ್ತಿಗೆರುತ್ತದೆ. ಪರಪ್ಪಗೌಡನು ಹೇಗಾದರು ಮಾಡಿ ಸಿದ್ರಾಮನನ್ನು ಸಾಯಿಸಬೇಕೆಂದು ತೀರ್ಮಾನಿಸುತ್ತಾನೆ. ಪರಪ್ಪಗೌಡನು ಸಿದ್ರಾಮನ ಕೊಲೆಗೆ ಎಲ್ಲ ಸಿದ್ದತೆಗಳನ್ನು ಮಾಡಿಕೊಳ್ಳುತ್ತಾನೆ. ಪರಪ್ಪಗೌಡನ ಮೋಸದಿಂದ ಸಿದ್ರಾಮನನ್ನು ತನ್ನ ಗಾನದ ಮನೆಗೆ ಕರೆಸುತ್ತಾನೆ.

೭. ಕಲ್ಲೇಶ್ ಕುಂಬಾರ್‌ರು : ಸಂಭವಾಮಿ ಯುಗೇ ಯುಗೇ : ಕಥಾಸಂಕಲನ : ಪುಟ ಸಂಖ್ಯೆ : ೧೭

ಪರಪ್ಪಗೌಡನ ಗಾನ ಸುರು ಇರುತ್ತದೆ. ರಾತ್ರಿ ಸಮಯದಲ್ಲಿ ಪರಪ್ಪಗೌಡ ಸಿದ್ರಾಮನನ್ನು ಗಾನದ ಒಲೆಯಲ್ಲಿ ಒಗೆದು ಬಿಡುತ್ತಾನೆ. ಸಿದ್ರಾಮ ತುಂಬಾ ಚೀರಾಡುತ್ತಾನೆ. ತನ್ನ ತಾಯಿಯನ್ನು ನೆನೆಸುತ್ತಾನೆ. ಆದರೆ ಆ ಸಮಯದಲ್ಲಿ ಸಿದ್ರಾಮನನ್ನು ಕಾಪಾಡಲು ಯಾರೂ ಬರುವುದಿಲ್ಲ. ಕೊನೆಗೆ ಸಿದ್ರಾಮನ ಪ್ರಾಣ ಪಕ್ಷಿ ಹಾರಿ ಹೋಗುತ್ತದೆ.

ಇತ್ತ ಊರ ಒಳಗೆ ಸಿದ್ರಾಮ ಕಾಲು ಜಾರಿ ಗಾನದ ಒಲೆಯಲ್ಲಿ ಬಿದ್ದನೆಂದು ಸುದ್ದಿ ಏಳುತ್ತದೆ. ಈ ಸುದ್ದಿಯನ್ನು ಕೇಳಿದ ಸಿದ್ರಾಮನ ತಾಯಿ ಮುರಿಗೆವ್ವ ದುಃಖದ ಕಟ್ಟೆ ಒಡೆಯುತ್ತದೆ. ಮುರಗೆವ್ವ ಗಂಡನನ್ನು ಮತ್ತು ಮಗನನ್ನು ಕಳೆದುಕೊಂಡು ಅನಾಥಳಾಗುತ್ತಾಳೆ. ಆದರೆ ಮುರಗೆವ್ವನ ದುಃಖಕ್ಕೆ ಕೊನೆಯೇ ಇಲ್ಲದಂತಾಗುತ್ತದೆ. ಹರೆಯಕ್ಕೆ ಬಂದ ಮಗನನ್ನು ಕಳೆದುಕೊಂಡ ಮುರಿಗೆವ್ವನ ರೋಧನೆ ಮುಗಿಲಿಗೆ ಮುಟ್ಟುತ್ತದೆ. ಮುರಿಗೆವ್ವನನ್ನು ನೋಡಿ ಎಲ್ಲರೂ ಮರುಗುತ್ತಾರೆ.

ಲೇಖಕರು ಈ ಸನ್ನಿವೇಶವನ್ನು ಎಂಥವರ ಮನವು ಕರಗುವ ರೀತಿಯಲ್ಲಿ ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಮಗನನ್ನು ಕಳೆದುಕೊಂಡ ತಾಯಿಯ ರೋಧನೆ ಯಾವ ರೀತಿಯಾಗಿರುತ್ತದೆ ಎಂಬುದನ್ನು ಲೇಖಕರು ತಿಳಿಸಲೆತ್ನಿಸಿದ್ದಾರೆ. ಈ ವಿಷಯದಲ್ಲಿ ಲೇಖಕರನ್ನು ಮೆಚ್ಚಲೇಬೇಕು.

ಇದರ ಜೊತೆಗೆ ಲೇಖಕ **ಕಲ್ಲೇಶ್ ಕುಂಬಾರ್**ರು ಈ 'ಕಿಚ್ಚು' ಎಂಬ ಕಥೆಯಲ್ಲಿ ಒಬ್ಬ ಪವಾಡ ಪುರುಷನ ಬಗ್ಗೆ ಹೇಳಿದ್ದಾರೆ. ಆ ಪವಾಡ ಪುರುಷನ ನಡುವಳಿಕೆ, ಹಾವಭಾವ, ಆತನ ಚಲನ–ವಲನ, ಆತ ಮಾಡತಕ್ಕಂತ ಕಾರ್ಯ. ಆತನ ನುಡಿಗಳು, ಆತ ಮಾಡಿದ ಕೆಲಸ, ಆತನ ಕೊನೆಯಗಾಲದಲ್ಲಿ ಆತ ಅನುಭವಿಸಿದ ವೇದನೆ ಈ ಎಲ್ಲದರ ಬಗ್ಗೆ ಲೇಖಕರು ಮಾಹಿತಿಯನ್ನು ನೀಡಿದ್ದಾರೆ. ಆ ಪವಾಡ ಪುರುಷನೇ 'ಮಾಂತಪ್ಪ ಸ್ವಾಮಿ'.

ಮುರಿಗೆವ್ವ ಮದುವೆಯಾಗಿ ಗಂಡನ ಮನೆಗೆ ನಡೆಯಲು ಬಂದಾಗ ಅದೇ ಸಂದರ್ಭದಲ್ಲಿ ಆ ಊರಿಗೆ ಒಬ್ಬ ವ್ಯಕ್ತಿ ಬಂದು ನೆಲೆಸಿದ್ದ. ಅವನೇ 'ಮಾಂತಪ್ಪಜ್ಜ'. ಈ ಮಾಂತಪ್ಪಜ್ಜ ಊರಿಗೆ ಬಂದ ಹೊಸದರಲ್ಲಿ ಯಾರಿಗೂ ಪರಿಚಯವಿಲ್ಲದೇ ಅದೇ ಹಾರೂಗೇರಿಯ ಕೆರೆಯ ಪಕ್ಕದಲ್ಲಿ ಒಂದು ಸಣ್ಣ ಗುಡಿಸಲನ್ನು ಹಾಕಿಕೊಂಡು ವಾಸವಾಗಿದ್ದ. ಮಾಂತಪ್ಪಜ್ಜ ಬೆಳಿಗ್ಗೆ ಎದ್ದು ಕೆರೆಯಲ್ಲಿ ಸ್ನಾನ ಮುಗಿಸಿಕೊಂಡು ಊರೊಳಗೆ ಹೊಕ್ಕು 'ಡುರ್... ಅಲಕ್ ನಿರಂಜನ್' ಎಂದು ಒದರುತ್ತಿದ್ದ. ಉದ್ದನೆಯ ಗಡ್ಡ, ಮೈ ಮೇಲೆ ಹರಕು ಬಟ್ಟೆ, ತೇಟ ಹುಚ್ಚರಂತೆ ಕಾಣುತ್ತಿದ್ದ. ಹಸಿವಾದಾಗ ಯಾರರ ಮನೆಗೆ ಹೋಗಿ ರೊಟ್ಟಿ ಕೇಳುತ್ತಿದ್ದ. ಅಲ್ಲಿಯೇ ಊಟ ಮಾಡಿ, ಬಾಯಿಗೆ ಬಂದಾಂಗ ಮಾತಾಡುತ್ತಾ ಗುಡಿಸಲಿಗೆ ಬರುತ್ತಿದ್ದ.

ಈ ಮಾಂತಪ್ಪಜ್ಜ ಒಬ್ಬ ದೇವಿ ಪುರುಷನಾಗಿದ್ದನೆನಿಸುತ್ತದೆ. ಏಕೆಂದರೆ ಆತ ಆಡಿದ ಮಾತುಗಳೆಲ್ಲ ನಿಜವಾಗುತ್ತಿದ್ದವು. ಇಲ್ಲಿ ಗಂಗೆ ಹರಿಯುತ್ತದೆ ಎಂದಿದ್ದ, ಕೆಲ ದಿನಗಳಲ್ಲಿ ಆ ಊರಿಗೆ ಕೇನಾಲ ನೀರು ಬಂತು. ಈ ಊರು ಮುಂಬಯಿ ಆಗುತ್ತದೆ ಎಂದಿದ್ದ ಅದರಂತೆ ಶಹರ ಆಯಿತು. ಒಂದು ದಿನ ಊರೊಳಗೆ ತಿರುಗಾಡುತ್ತಿರುವಾಗ ಸಂಕ್ರಬಾಂವಿ ಕಡೆ ಬರುವನ್ನು ಆ ಸಂಕ್ರಬಾಂವಿ ನೀರು ಕುಡಿಯಲಿಕ್ಕೆ ಯೋಗ್ಯವಾಗಿರಲಿಲ್ಲ ಎಂದ, ಆ ನೀರು ಕಹಿಯಾಗಿದ್ದವು. ಈ ಮಾಂತಪ್ಪಜ್ಜ ಆ ಸಂಕ್ರಬಾಂವಿಯ ಕಟ್ಟೆಯ ಮೇಲೆ ನಿಂತು 'ಉಚ್ಚೆ' ಹೋದ. ಮಾಂತಪ್ಪ ಸಂಕ್ರಬಾಂವಿಯೊಳಗೆ ಉಚ್ಚೆ ಹೋದ ಕೆಲ ದಿನಗಳಲ್ಲಿ ಸಂಕ್ರಬಾಂವಿ ನೀರು ಕುಡಿಯಲಿಕ್ಕೆ ಯೋಗ್ಯವಾದವು. ಆ ನೀರು ಸಹಿಯಾದವು. ಹೀಗೆ ಮಾಂತಪ್ಪಜ್ಜ ಪವಾಡ ಪುರುಷನಾಗಿದ್ದನು.

ನಂತರ ಮಾಂತಪ್ಪಜ್ಜ ಕೆಲ ವರ್ಷಗಳ ನಂತರ ಮೈಯಲ್ಲಿ ಉಷಾರ ತಪ್ಪಿ ಹಾಸಿಗೆ ಹಿಡಿದ. ಮತ್ತು ಮಾಂತಪ್ಪಜ್ಜನಿಗೆ 'ಬೇತಾಳ ಹುಣ್ಣು' ಆಯಿತು. ಆ ಹುಣ್ಣು ಹಣ್ಣಾಗಿ ಒಡೆದು ಸೋರತೊಡಗಿತು. ಊರಿನ ಪ್ರಮುಖರು ಪರಪ್ಪಗೌಡನ ದವಾಖಾನೆಗೆ ಕರೆದೊಯ್ಯಲು ಪ್ರಯತ್ನಿಸಿದರಾದರು ಮಾಂತಪ್ಪಜ್ಜ ದವಾಖಾನೆಗೆ ಹೋಗಲಿಲ್ಲ. ಕೊನೆಗೆ ಅದೇ ನೋವಿನಿಂದ ಒಂದು ದಿನ ಐಕ್ಯ ಹೊಂದಿದ. ಮಾಂತಪ್ಪಜ್ಜ ತೀರಿಕೊಂಡ ನಂತರ ಕೆಲ ದಿನಗಳ ನಂತರ ಪರಪ್ಪಗೌಡನ ಕನಸ್ಸಿನಲ್ಲಿ ಬಂದು ನನ್ನ ಗುಡಿಸಲ್ಲಿನ ಸ್ಥಳದಲ್ಲಿ ಒಂದು ಮಠವನ್ನು ಕಟ್ಟಿಸಬೇಕು ಎಂದನು. ಅದರಂತೆ ಪರಪ್ಪಗೌಡ ಮತ್ತು ಊರಿನ ಪ್ರಮುಖರು ಸೇರಿ ಮಠವನ್ನು ನಿರ್ಮಿಸಿದ್ದರು.

ಮಠ ಕಟ್ಟಿದ ನಂತರ ಇದ್ದಕ್ಕಿದ್ದಂತೆ 'ಶಿವರುದ್ರಸ್ವಾಮಿ' ಎಂಬ ಸಾದು ಒಬ್ಬ ಮಠದೊಳಗೆ ಮೆಟ್ಟು ಹಾಕಿದ. ಮಠದೊಳಗೆ ಠಿಕಾಣಿ ಹುಡಿದ ನಂತರ ಇತ ಹಲವರ ಗುಂಪನ್ನು ಕಟ್ಟಿಕೊಂಡು ಮಠದಲ್ಲಿ ಗಾಂಜಾ ಸೇದುವುದು, ಮಾಂಸ ತಿನ್ನುವುದು, ಮಠಕ್ಕೆ ಬರುವ ಹೆಣ್ಣು ಮಕ್ಕಳನ್ನು ಕಾಮದ ದೃಷ್ಟಿಯಿಂದ ನೋಡುವುದು. ಈ ರೀತಿಯ ಚಟುವಟಿಕೆಗಳನ್ನು ಪ್ರಾರಂಭಿಸಿದನು. ಹೀಗೆ ಮಠ ಕುಡುಕರ, ಗಾಂಜಾ ಸೇದುವವರ, ಕಾಮಾಂಧರರ ಅಡ್ಡೆಯಾಗಿ ಬಿಟ್ಟಿತು.

ಹೀಗೆ ಈ ಕಥೆಯಲ್ಲಿ ಲೇಖಕರು ಕಥೆಯ ಸಾರಾಂಶವನ್ನು ಮನ ಮುಟ್ಟುವಂತೆ ರಚಿಸಿದ್ದಾರೆ. ಜೊತೆಗೆ ಕಥೆಯನ್ನು ಓದುತ್ತಾ ಹೋದಂತೆ ಕಥೆಯ ತಿರುಳನ್ನು ಸ್ವಲ್ಪ ಹಿಂದೆ ಮುಂದೆ ಮಾಡಿದಂತೆ ಅನಿಸಿದರು ಓದುತ್ತಾ ಹೋದಂತೆ ಕಥೆಯ ಸಾರಾಂಶ ಸಂಪೂರ್ಣ ತಿಳಿಯುತ್ತದೆ. "ಮಂಜುನಾಥ ಲತಾರವರು ಹೇಳುವ ಪ್ರಕಾರ ಕಲ್ಲೇಶ್ ಕುಂಬಾರ್‌ರ ಕಥೆಗಳು 'ಉರಿಯುವ ಗುಣ'ಗಳನ್ನು ಹೊಂದಿರುತ್ತವೆ. ಈ ಕಥೆಯಲ್ಲಿ ಸಂಪೂರ್ಣ ಗ್ರಾಮೀಣ ಭಾಷೆಯನ್ನೇ ಬಳಸಿದ್ದಾರೆ. ಈ ಕಥೆಯಿಂದ ಹೆಣ್ಣಿನ ರೋಧನೆ, ಬಡವ-ಶ್ರೀಮಂತ ಎಂಬ ಬೇಧಭಾವ, ಅದರಿಂದ ಆಗುವ ಪರಿಣಾಮ ಮತ್ತು ಹೆಣ್ಣಿನ ಬಯಕೆ, ಅದರಿಂದಾಗುವ ಅನಾಹುತ, ಜೊತೆಗೆ ಸ್ವಾಮಿಜಿಯ ಕಥೆ ಮತ್ತು ಕಪಟ, ಕಾಮುಕ ಸ್ವಾಮಿಯ ಕಥೆಯನ್ನು ಎಲ್ಲರಿಗೂ ತಿಳಿಯುವ ರೀತಿಯಲ್ಲಿ

ಈ ಕಥೆಯಲ್ಲಿ ಚಿತ್ರಿಸಿದ್ದಾರೆ”[೮]. ಒಟ್ಟಿನಲ್ಲಿ ಈ ಕಥೆಯು ಒಂದು ಕರುಣಾ ಜನಕವಾದ ಕಥೆಯನ್ನು ತಿಳಿಸುವುದರ ಜೊತೆಗೆ ಕಪಟ ಸಾದುವಿನ ಬಗ್ಗೆಯು ತಿಳಿಸಿಕೊಟ್ಟಿದ್ದಾರೆ. ಲೇಖಕರು ಈ ಕಥೆಯನ್ನು ಓದುಗರ ಮನಮುಟ್ಟುವಂತೆ ರಚಿಸುವುದರ ಜೊತೆಗೆ ಅದು ಕಣ್ಮುಂದೆ ನಡೆದಂತೆ ಈ ಕಥೆಯಲ್ಲಿ ಬಿಂಬಿಸಿದ್ದಾರೆ. ಈ ಕಥೆಯು ಓದುಗರ ಮನವನ್ನು ಕಲಕುತ್ತದೆ. ಲೇಖಕರ ಕಥೆಯ ಬರವಣಿಗೆಯು ಚೆನ್ನಾಗಿ ಮೂಡಿ ಬಂದಿದೆ.

೩.೫ ಭವಕ್ಕೆ ಬೀಜವಾದುದು :

ಲೇಖಕ **ಕಲ್ಲೇಶ್ ಕುಂಬಾರ್**ರು ಈ 'ಭವಕ್ಕೆ ಬೀಜವಾದುದು' ಎಂಬ ಕಥೆಯಲ್ಲಿ ಅನೈತಿಕ ಸಂಬಂಧದಿಂದ ಇಳಿಯ ವಯಸ್ಸಿನಲ್ಲಿ ಜನಿಸುವ ಮಗುವನ್ನು ಕುರಿತು ಈ ಕಥೆಯನ್ನು ಹೆಣೆದಿದ್ದಾರೆ. ಈ ಕಥೆಯಲ್ಲಿ ಚನ್ನಪ್ಪ ಸಾಹುಕರ ಗಂಡನನ್ನು ಕಳೆದುಕೊಂಡ ವಿಧವೆಯಾದ ಪಾರವ್ವನಿಗೆ ಆಶ್ರಯ ಕೊಟ್ಟವನಂತೆ ಮಾಡಿ ಅವಳ ಜೊತೆ ಅನೈತಿಕ ಸಂಬಂಧವನ್ನಿಟ್ಟುಕೊಂಡು ಅವಳಿಗೆ ಒಂದು ಮಗುವಾಗುವುದಕ್ಕೆ ಕಾರಣನಾಗುತ್ತಾನೆ. ಇದೇ ಈ ಕಥೆಯಲ್ಲಿ ಮುಖ್ಯವಾಗಿದ್ದರೂ ಇದರಿಂದ ಸಮಾಜದಲ್ಲಿ ಯಾವ ರೀತಿ ಪರಿಣಾಮವಾಗುತ್ತದೆ ಎಂಬುವುದನ್ನು ಲೇಖಕರು ತುಂಬಾ ಸೊಗಸಾಗಿ ವಿವರಿಸಿದ್ದಾರೆ.

ದುಡಿದುಕೊಂಡು ತಿನ್ನಲಿಕ್ಕೆ ಎಂದು ತುಕ್ಕಪ್ಪ ಮತ್ತು ಪಾರವ್ವ ಎಂಬ ದಂಪತಿಗಳು ಬಗಲಲ್ಲಿ ಒಂದು ಕೂಸನ್ನು ಎತ್ತಿಕೊಂಡು ಹಾರೂಗೇರಿಗೆ ಬರುತ್ತಾರೆ. ಹಾರೂಗೇರಿಯಲ್ಲಿ ಹಣಮಂತ ದೇವರ ಗುಡಿಯಲ್ಲಿ ಪೌಳಿಯಲ್ಲಿ ನೆಲೆಸುತ್ತಾರೆ. ಆಗಿನ್ನು ಅವರ ಕೂಸು ಸಂಗವ್ವನಿಗೆ ಒಂದುವರೆ ವರ್ಷ. ಅಲ್ಲದೇ ತುಕ್ಕಪ್ಪನಿಗೆ ಟಿ.ಬಿ. ಎಂಬ ರೋಗ ದೇಹದಲ್ಲಿ ಹೊಕ್ಕಿತ್ತು. ಈ ತುಕ್ಕಪ್ಪನಿಗೆ ಸೆರೆ ಕುಡಿಯುವುದು, ಬಿಡಿ ಸೇದುವುದು ಇಂತಹ ಎಲ್ಲ ಚಟಗಳಿರುತ್ತವೆ. ಇದೇ ವೇಳೆಗೆ ತುಕ್ಕಪ್ಪಾ ಟಿ.ಬಿ. ರೋಗ ಗುಣವಾಗದೆ ಅದೇ ರೋಗದಿಂದ ಮರಣ ಹೊಂದುತ್ತಾನೆ. ತುಕ್ಕಪ್ಪ ಮರಣ ಹೊಂದಿದ ನಂತರ ಪಾರವ್ವ ಮತ್ತು ಮಗಳು ಸಂಗವ್ವ ಅನಾಥರಾಗುತ್ತಾರೆ. ಇವರ ರೋಧನೆ ಮುಗಿಲು ಮುಟ್ಟುತ್ತದೆ.

ಇದೇ ಸಂದರ್ಭದಲ್ಲಿ ಚನ್ನಪ್ಪ ಸಾಹುಕಾರ ಪಾರವ್ವನಿಗೆ ಆಸರೆಯಾಗುತ್ತಾನೆ. ಚನ್ನಪ್ಪ ಸಾಹುಕಾರ ತನ್ನ ಸ್ವಂತ ಮನೆಯಲ್ಲಿ ಇವರನ್ನು ಕರೆದುಕೊಂಡು ಹೋಗಿ ಆಶ್ರಯ ನೀಡುತ್ತಾನೆ. ಕ್ರಮೇಣ ಕಾಲ ಕಳೆದಂತೆ ಪಾರವ್ವನ ಮಗಳು ಸಂಗವ್ವ ಬೆಳೆಯುತ್ತಾ ದೊಡ್ಡವಳಾದಳು. ಸಂಗವ್ವ ಚನ್ನಪ್ಪ ಸಾಹುಕಾರನಿಗೆ ಚನ್ನಪ್ಪ ಕಾಕಾ ಎಂದು ಕರೆಯುತ್ತಿರುತ್ತಾಳೆ. ಪಾರವ್ವನಿಗೆ ಮಗಳು ಬೆಳೆದು ದೊಡ್ಡವಳಾದನಿಂದ ಅವಳ ಮದುವೆ ಚಿಂತೆ ಪ್ರಾರಂಭವಾಗುತ್ತದೆ.

---

೮. ಮಂಜುನಾಥ ಲತಾ : ಉರಿಯ ನಾಲಿಗೆಯ ಮೇಲೆ : ಬೆನ್ನುಡಿ :

ಚನ್ನಪ್ಪ ಸಾಹುಕಾರ ಅತ್ತಿತ್ತ ವರಗಳನ್ನು ಹುಡುಕಾಡಿ ಕೊನೆಗೆ ಒಂದು ದಿನ ಬಸಪ್ಪ ಎಂಬ ಹುಡುಗನ ಸಂಗಡ ಸಂಗವ್ವನ ಮದುವೆ ಮಾಡಿಸುತ್ತಾನೆ. ಬಸವ್ವನ ಮದುವೆ ಮುಗಿದ ನಂತರ ಪಾರವ್ವ ಸಂಗವ್ವನನ್ನು ತೆಕ್ಕು ಬಿದ್ದು ಅಳುತ್ತಾಳೆ. ಸಂತೋಷದಿಂದ ಗಂಡನ ಮನೆಗೆ ಕಳುಹಿಸಿಕೊಡುತ್ತಾಳೆ. ಸಂಗವ್ವ ಗಂಡನ ಮನೆಯಲ್ಲಿ ತುಂಬಾ ಸಂತೋಷದಿಂದ ಕಾಲ ಕಳೆಯುತ್ತಾಳೆ. ಸಂಗವ್ವ ಗಂಡನಿಗೆ ತಕ್ಕಂತೆ ಗಂಡನ ಮಾತನ್ನು ಕೇಳುತ್ತಾ ಗಂಡನ ಪ್ರೀತಿಗೆ ಪಾತ್ರಳಾಗುತ್ತಾಳೆ. ಹೀಗೆ ಸಂಗವ್ವ ಒಳ್ಳೆಯ ರೀತಿಯಿಂದ ಕಾಲ ಕಳೆಯುವ ಸಂದರ್ಭದಲ್ಲಿ ಒಂದು ವಿಷಯ ಸಂಗವ್ವನ ಕಿವಿಗೆ ಬೀಳುತ್ತದೆ. ಹಾರೂಗೇರಿಯ ತಾರವ್ವ ಎಂಬ ಸಂಗವ್ವನ ಗೆಳತಿ. ನಿಮ್ಮವ್ವ ಹಿಂಗ ಮಾಡಬಾರದಿತ್ತು. ಅವಳು ಇಂಥ ವಯಸ್ಸಿನ್ಯಾಗ ಇಂತಹ ಕೆಲಸ ಮಾಡಬಾರಿದಿತ್ತ ಎನ್ನುತ್ತಾಳೆ.

ಸಂಗವ್ವನ ತಾಯಿ ಪಾರವ್ವ ಇತ್ತ ಮಾಡಬಾರದ ಕೆಲಸ ಮಾಡಿದ್ದಳು. ಅದೇನೆಂದರೆ ಚನ್ನಪ್ಪ ಸಾಹುಕಾರನ ಜೊತೆ ಸಲುಗೆ ಬೆಳೆದು ಆತನ ಜೊತೆ ಕೂಡಿಕೊಂಡಳು. ಆವಾಗ ಚನ್ನಪ್ಪ ಸಾಹುಕಾರನು ಸಹ ಅದನ್ನೇ ಕಾಯುತ್ತಿದ್ದ. ಏಕೆಂದರೆ ಚನ್ನಪ್ಪ ಸಾಹುಕಾರನ ಹೆಂಡತಿಗೆ ಮಕ್ಕಳೆ ಆಗಿರುವುದಿಲ್ಲ. ಊರ ಜನರೆಲ್ಲ ಚನ್ನಪ್ಪ ಸಾಹುಕಾರನ ಹತ್ತಿರ ಗಂಡಸತನವೇ ಇಲ್ಲ ಎನ್ನುತ್ತಿದ್ದರು. ಆದ್ದರಿಂದ ಇದೇ ಸಮಯ ಸದುಪಯೋಗ ಪಡೆಸಿಕೊಂಡು ಪಾರವ್ವನ ಜೊತೆಗೆ ಕೂಡಿಕೊಂಡ. ಪಾರವ್ವನ ಮನೆಯಲ್ಲಿಯ ಮಲಗಲಿಕ್ಕೆ ಪ್ರಾರಂಭಿಸಿದ. ಅವಳನ್ನು ಕರೆದುಕೊಂಡು ಊರುರು ತಿರುಗ ಹತ್ತಿದ. ಪಾರವ್ವನನ್ನು ಹೆಂಡತಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಾನೆ.

ಈ ಸುದ್ದಿ ಊರ ಜನರಿಗೆಲ್ಲ ತಿಳಿದು ಕೊನೆಗೆ ಪಾರವ್ವನ ಮಗಳು ಸಂಗವ್ವನ ಕಿವಿಗೂ ಕೂಡಾ ಬೀಳುತ್ತದೆ. ಸಂಗವ್ವ ಈ ಎಲ್ಲಾ ವಿಷಯವನ್ನು ಕೇಳಿ ದಿಗಿಲು ಬಡಿದಳು. ನನ್ನ ತಾಯಿ ಇಂತಹ ಮುಪ್ಪಿನ ವಯಸ್ಸಿನಲ್ಲಿ ಹೀಗೆಕೆ ಮಾಡಿದಳು ಎಂಬ ಚಿಂತೆ ಅವಳನ್ನು ಕಾಡತೋಡಗುತ್ತದೆ.

ಒಂದು ದಿನ ಸಂಗವ್ವ ತವರಿಗೆ ಬಂದಾಗ ತವರಿನಲ್ಲಿ ಜನರ ನಿಂದನೆಯ ಮಾತನ್ನು ಕೆಳಲಾಗದೆ ತನ್ನ ತಾಯಿ ಪಾರವ್ವನನ್ನು ಕೇಳಿಯೇ ಬಿಡುತ್ತಾಳೆ. ನೀನು ಹೀಗೆ ಮಾಡಿರುವುದು ಸರಿ ಏನು. ಜನರ ಮುಂದ ತಲೆ ಎತ್ತಿ ತಿರಗಲಾರದಂಗ ಮಾಡಿ ಬಿಟ್ಟದ್ದಿ ಎಂದಳು. ಸಂಗವ್ವನ ಮಾತನ್ನು ಕೇಳಿದ ಪಾರವ್ವನಿಗೆ ಧ್ವನಿಯೇ ನಿಂತು ಹೋಯಿತು. ಪಾರವ್ವ ಅವಳಿಗೆ ಏನು ಉತ್ತರ ಕೊಡದಂತಾದಳು. ಆದರೂ ಸಹ ಧೈರ್ಯ ಮಾಡಿ ಹೇಳಿಯೇ ಬಿಡುತ್ತಾಳೆ. ಏನಂತ ಮಾತನಾಡತಿಲೇ ಸಂಗಿ ನೀನು ಬೆಳೆದು ದೊಡ್ಡವಳಾಗಿ ಮದುವೆಯಾಗಿ ಗಂಡನ ಮನೆ ಸೇರಬೇಕಾದರೆ ಕಾರಣ ಯಾರು ಗೊತ್ತಾ?.... ಅವರೇ ಚನ್ನಪ್ಪ ಸಾಹುಕಾರ. ನಾವು ಇಲ್ಲಿ ತನಕಾ ಹಿಂಗ ಇರಲಿಕ್ಕೆ ಕಾರಣ ಚನ್ನಪ್ಪ ಸಾಹುಕಾರ.

ನೀನು ಮಂದಿ ಮಾತನ್ನು ಕೇಳಿ ಬಾಯಿಗೆ ಬಂದಹಾಗೆ ಮಾತಾಡಬೇಡ. ನಾನು ಮಂದಿನ ನೋಡಿ ಜಲಮಾ ಮಾಡಾಂಗಿಲ್ಲ. ನನಗೆ ಹೆಂಗ ತಿಳಿತ್ತೈತೋ ಹಂಗ ಜಲಮಾ ಮಾಡಾಕಿ ತಿಳಿತ್ತನ ಎಂದಳು ಪಾರವ್ವ. ಹೆಚ್ಚಿನ ಉಸಾಬರಿ ಮಾಡಿದನ್ನ ಬಂದ ಮಾಡಿ ನಾಕ ದಿನಾ ಇದ್ದ ಹೋಗ. ಅದನ ಬಿಟ್ಟ ಅವರ ಹಂಗ ಅಂದರು ಇವರ ಹಿಂಗ ಅಂದರು ಅನಕೋತ್ತ ಕೂಡಬ್ಯಾಡ ತಿಳಿತ್ತಿಲ್ಲೋ ಎಂದಳು ಪಾರವ್ವ. ಅವಳ ಮಾತಿಗೆ ತಿರುಗಿ ಮಾತನಾಡದೆ ಸಂಗವ್ವ ಸುಮ್ಮನೆ ಇದ್ದಳು. ಸಂಗವ್ವ ಅದನೇನು ಲೆಕ್ಕಿಸದೇ ಮತ್ತೇ ತನ್ನ ಗಂಡನ ಮನೆಗೆ ನಡೆದಳು. ಆದರೆ ಸಂಗವ್ವ ಮನಸ್ಸಿನಲ್ಲಿ ಏನೋ ಒಂದು ದುಗುಡು ಕಾಣುತ್ತಿತ್ತು.

ಹೀಗೆ ಕೆಲ ದಿನಗಳ ನಂತರ ಪಾರವ್ವ ಬಸುರೆಯಾದಳು. ಪಾರವ್ವ ಬಸುರೆಯಾದ ಸುದ್ದು ಊರ ತುಂಬೆಲ್ಲ ಹಬ್ಬಿತ್ತು. ಆವಾಗ ಚನ್ನಪ್ಪ ಸಾಹುಕಾರ ಕೂಷಿಯಿಂದ ಎದೆ ಉಬ್ಬಿಸಿ ತಿರಗಲು ಪ್ರಾರಂಭಿಸಿದನು. ಆದರೆ ಊರ ಜನರೆಲ್ಲರು ಇದೊಂದು ಅನೈತಿಕ ಸಂಬಂಧ ಎಂದು ಮಾತನಾಡಿದರು. ಊರಿನ ಜನರ ಯಾವ ಮಾತಿಗೂ ಪಾರವ್ವ ಮತ್ತು ಚನ್ನಪ್ಪ ಸಾಹುಕಾರ ತಲೆ ಕೆಡಿಸಿಕೊಳ್ಳಲಿಲ್ಲ. ಚನ್ನಪ್ಪ ಸಾಹುಕಾರ ಪಾರವ್ವನನ್ನು ಚೆನ್ನಾಗಿಯೇ ನೋಡಿಕೊಂಡ. ದಿನ ತುಂಬಿದಂತೆ ಪಾರವ್ವನ ಆರೈಕೆಗೆ ಯಾರಾದರು ಬೇಕಾಯಿತು. ಆವಾಗ ಅನಿವಾರ್ಯವಾಗಿ ಪಾರವ್ವ ಸಂಗವ್ವನನ್ನು ಕರೆಸಿಕೊಂಡಳು.

ಮಗಳು ಸಂಗವ್ವ ಪಾರವ್ವನನ್ನು ಕೇಳಿದಳು. ಯವ್ವಾ ನೀನು ನನ್ನ ಬಾನೆತನ ಮಾಡಬೇಕಾದದ್ದು, ಆದರೆ ನಾನೇ ನಿನ್ನ ಬಾನೆತನ ಮಾಡುವಂಗಾತಲ್ಲ ಎಂದಳು. ಈ ಮಾತಿಗೆ ಪಾರವ್ವ ಸುಮ್ಮನಾದಳು. ಆದರೆ ತಾಯಿಯ ಕಳ್ಳು ಹೇಗೆ ಕಡಿಮೆಯಾದಿತ್ತು. ಅದರಂತೆ ತಾಯಿಯ ಮೇಲಿನ ಸಂಗವ್ವನ ಕಳ್ಳ ಹೇಗೆ ಕಡಿಮೆಯಾದಿತ್ತು. ಇದನ್ನೆಲ್ಲ ತಿಳಿದ ಸಂಗವ್ವ ತಾಯಿಯ ಬಾನೆತನ ಮಾಡಲು ಮುಂದಾದಳು.

ಒಂದು ದಿನ ಪಾರವ್ವನಿಗೆ ತುಂಬಾ ಬ್ಯಾನಿ ಶುರುವಾಯಿತು. ಆವಾಗ ಪಾರವ್ವನ ತೊಳಲಾಟವನ್ನು ಕಂಡು ಮಗಳಿಗೆ ಸಂಕಟವಾಯಿತು. ಪಾರವ್ವನ ಬ್ಯಾನಿಗೆ ಸಮಾಧಾನ ಹೇಳುತ್ತಾ ಕೊನೆಗೆ ಪಾರವ್ವ ಗಂಡು ಮಗುವಿಗೆ ಜನ್ಮ ನೀಡಿದಳು. ಆವಾಗ ಮಗುವಿನ ಚೀರಾಟದ ಧ್ವನಿಯನ್ನು ಕೇಳಿದ ಸಂಗವ್ವ ಮನೆಯಲ್ಲಿಯ ಕುಡಗೋಲದಿಂದ ಹೊಂಕಳು ಬಳ್ಳಿಯನ್ನು ಕತ್ತರಿಸಿದಳು. ನಂತರ ಸಂಗವ್ವ ತನ್ನ ತಾಯಿಗೆ ಹೇಳಿದಳು. ಯವ್ವ, ಪಾರವ್ವ ಇದು ಹಾದರಕ ಹುಟ್ಟಿದ ಕೂಸು. ಇದನನ್ನು ಎಲ್ಲರ ದೂರ ತಿಪ್ಪೆಯಲ್ಲಿ ಒಗೆಯುತ್ತೇನೆ ಎಂದಳು. ಈ ಮಾತನ್ನು ಕೇಳಿದ ಪಾರವ್ವ ರೊಚ್ಚಿಗೆದ್ದು, ಆ ಮಗುವನ್ನು ಕಸಿದುಕೊಂಡು ಏನ್ ಹಾದರ ಗಿತ್ತಿ ನಿನ್ನನ್ನು ಹುಟ್ಟಿದ ಕೂಡಲೆ ಹಿಂಗ ಮಾಡೆನಂದ್ರ ಹೆಂಗ ಹಾದರಗಿತ್ತಿ ಎಂದು ಬೈದಳು.

ಪಾರವ್ವ ಮಗಳಿಗೆ ಹೇಳಿದಳು. ನಿನ್ನ ನನ್ನ ಕೂಸನನ್ನು ಜ್ವಾಪಾನ ಮಾಡಬೇಡ. ನಾನ ನನ್ನ ಕೂಸನ್ನು ಸಾಕತೀನಿ. ನೀನು ನನ್ನ ಕೂಸನ್ನು ಹಿಡಿಯಬೇಡ ಎಂದಳು. ಆ ರಕ್ತದ ಮುದ್ದೆಯಾಗಿರುವ ಕೂಸನ್ನು ಪಾರವ್ವ ಸಂತೋಷದಿಂದ ಮುದ್ದಿಸಿದಳು ಆನಂದಿಸಿದಳು. ಪಾರವ್ವನ ಸಂತೋಷಕ್ಕೆ ಪಾರವ್ವ ಇರಲಿಲ್ಲ. ಕೂಸನ್ನು ಎತ್ತಿ ಮುದ್ದಾಡಿದಳು.

ಲೇಖಕ **ಕಲ್ಲೇಶ್ ಕುಂಬಾರ್**ರು ಈ ಕಥೆಯ ಮೂಲಕ ಜನರಿಗೆ ಒಂದು ಸಂದೇಶವನ್ನು ಕೊಡಲು ಹೋಗುತ್ತಾರೆ. ಅದೇನೆಂದರೆ ಮನುಷ್ಯ ಸಮಾಜದಲ್ಲಿ ಯಾವ ರೀತಿಯಾಗಿ ಇರಬೇಕು ಎಂಬುದನ್ನು ತಿಳಿಸಿದ್ದಾರೆ. ಅನೈತಿಕ ಸಂಬಂಧದಿಂದ ಎಂತಹ ಅನಾಹುತಗಳಾಗುತ್ತವೆ ಎಂಬುದನ್ನು ಇಲ್ಲಿ ತಿಳಿಸಿದ್ದಾರೆ. ನಾವು ನಮ್ಮತನವನ್ನು ಮರೆತರೆ ಅದರಿಂದ ಏನಾಗುತ್ತದೆ ಎಂಬುದನ್ನು ಈ ಕಥೆಯಿಂದ ತಿಳಿಯಬೇಕು. ಲೇಖಕರು ನೈತಿಕತೆಗೆ ಹೆಚ್ಚಿನ ಆಧ್ಯತೆ ನೀಡಿದ್ದಾರೆ.

ಈ ಕಥೆಯಿಂದ ಇನ್ನೊಂದು ಸಂಗತಿ ತಿಳಿದು ಬರುತ್ತದೆ. ಅದೇನೆಂದರೆ ಯಾವ ವಯಸ್ಸಿನಲ್ಲಿ ಏನನ್ನು ಮಾಡಬೇಕು ಅದನ್ನೇ ಮಾಡಬೇಕು. ವಯಸ್ಸಲ್ಲದ ಸಂದರ್ಭದಲ್ಲಿ ಏನಾದರು ಮಾಡಿದರೆ ಅದರಿಂದ ಸಮಾಜದ ಮೇಲೆ ಎಷ್ಟೊಂದು ಪರಿಣಾಮ ಬೀರುತ್ತದೆ ಎಂಬುದು ಸಹ ಇದರಿಂದ ತಿಳಿಯುತ್ತದೆ. ಅಂದರೆ ತಮ್ಮ ಮಕ್ಕಳ ಯಾವ ವಯಸ್ಸಿಗೆ ಬಂದಿದ್ದಾರೆ. ನಾವು ಅವರ ಮುಂದೆ ಹೇಗೆ ಇರಬೇಕು ಎಂಬುದನ್ನು ಲೇಖಕರು ಈ ಕಥೆಯಿಂದ ತಿಳಿಸಿದ್ದಾರೆ.

ಅದಲ್ಲದೇ ತಾಯಿಯ ಮಮತೆಯನ್ನು ಸಹ ಈ ಕಥೆಯಲ್ಲಿ ಲೇಖಕರು ಬಿಂಬಿಸಿದ್ದಾರೆ. ಹೇಗೆಂದರೆ ಜನಿಸಿದ ಮಗು ಹಾದರಕ್ಕೆ ಹುಟ್ಟಿದ್ದು, ಇದು ಅನೈತಿಕ ಸಂಬಂಧ ಎಂಬುದು ಗೊತ್ತಿದ್ದರೂ ಸಹ ತಾಯಿ ತನ್ನ ಮಗುವನ್ನು ಬಿಟ್ಟು ಕೊಡುವುದಿಲ್ಲ. ಇಡೀ ಸಮಾಜವೇ ನನಗೆ ಎದುರಾದರು ಸಹ ನಾನು ನನ್ನ ಮಗುವನ್ನು ಬಿಡುವುದಿಲ್ಲ ಎನ್ನುತ್ತಾಳೆ. ಇದರಿಂದ ತಾಯಿಯ ಮಮತೆ ಎಂತಹುದು ಎಂದು ಈ ಕಥೆಯಿಂದ ತಿಳಿಯುತ್ತದೆ.

ಈ ಕಥೆಯಲ್ಲಿ ಕಥೆಯ ಸಾರಾಂಶ ಸ್ವಲ್ಪ ಹಿಂದೆ ಮುಂದೆ ಇದ್ದ ಹಾಗೆ ಕಾಣಿದರು ಸ್ವಲ್ಪ ಗೊಂದಲಮಯವಾಗಿ ಕಾಣಿದರು ಸಹ ಕಥೆಯ ಸಾರಾಂಶ ಓದುಗರಿಗೆ ತಿಳಿಯುತ್ತದೆ. ಮತ್ತು ಈ ಕಥೆಯಲ್ಲಿ ಭಾಷೆಯ ಶೈಲಿ ತುಂಬಾ ಮಾರ್ಮಿಕವಾಗಿದೆ. ಗ್ರಾಮೀಣ ಭಾಷೆಯನ್ನು ಬಳಸುವ ಮೂಲಕ ಕಥೆಗೆ ಒಂದು ಮೆರಗನ್ನು ನೀಡಿದ್ದಾರೆ ಲೇಖಕರು. ಒಟ್ಟಾರೆಯಾಗಿ ಹೇಳುವುದಾದರೆ ಕಥೆಯು ಚೆನ್ನಾಗಿ ಮಾರ್ಮಿಕವಾಗಿ ಮೂಡಿಬಂದಿದೆ. ಈ ಕಥೆಯು ಗ್ರಾಮೀಣ ಪ್ರದೇಶದ ಬಡತನದ ಬದುಕನ್ನು ಕಲಿಸಿ ಕೊಡುತ್ತದೆ. ಅದಲ್ಲದೇ ಗ್ರಾಮೀಣ ಜನರ ಒಂದು ಭಾವನೆಗಳು ಯಾವ ರೀತಿಯಾಗಿರುತ್ತದೆ ಎಂಬುದನ್ನು ತಿಳಿಸಿಕೊಡುತ್ತದೆ. ಆದ್ದರಿಂದ ಈ ಕಥೆಯು ಒಂದು ನೈತಿಕತೆಯನ್ನು ತಿಳಿಸಿ ಕೊಡುವಂತಹ ಕಥೆಯಾಗಿದೆ ಎಂದು ಇಲ್ಲಿ ತಿಳಿದು ಬರುತ್ತದೆ.

ಪಾರವ್ವ ಈ ಕಥೆಯಲ್ಲಿ ಒಂದು ಋಣಾತ್ಮಕ ಪಾತ್ರ ಮಾಡಿದಂತೆ ಕಾಣುತ್ತದೆ. ಅಂದರೆ ಅವಳು ಏನನ್ನು ಮಾಡಬಾರದಿತ್ತೋ ಅದನ್ನು ಮಾಡಿಯೇ ಬಿಡುತ್ತಾಳೆ. ಇದರಿಂದ ತಾನು ಊರ ಜನರಿಗೆ ಮುಖ ತೋರಿಸದಂತೆ ಆಗುತ್ತದೆ. ಆದರೂ ಸಹ ಅವಳು ಅದನನ್ನು ಲೆಕ್ಕಿಸುವುದಿಲ್ಲ. ಪಾರವ್ವ ಜನರ ಬಗ್ಗೆ ಭಯ ಅವಳಿಗೆ ಇರುವುದೇ ಇಲ್ಲ. ಅವಳು ಮಾಡಿದ್ದು ತಪ್ಪು ಎಂದು ಅವಳಿಗೆ ಅನಿಸುವುದೇ ಇಲ್ಲ. ಈ ಪಾರವ್ವನಂತ ಹೆಂಗಸರು ಸಮಾಜದಲ್ಲಿ ಇದ್ದರೆ ನೈತಿಕತೆಗೆ ಬೆಲೆಯೇ ಇಲ್ಲದಂತಾಗುತ್ತದೆ. ನೈತಿಕತೆ ಎಂಬುದು ಇಂತವರಿಂದ ಓಡಿಹೋಗುತ್ತದೆ. ಇಂತವರು ಸಮಾಜಕ್ಕೆ ಕಂಟಕರು ಎಂಬುದನ್ನು ಲೇಖಕರು ತಿಳಿಸಿದ್ದಾರೆ. ಅವಳು ಮಾಡಿದ ಕೆಲಸ ಅವಳ ಮಗಳಿಗೂ ಸಹ ಹಿಡಿಸುವುದಿಲ್ಲ. ಆದರೂ ಸಹ ಈ ಪಾರವ್ವ ತನ್ನದೇ ಸರಿ ಎಂದು ನಡೆದಳು. ಇದರಿಂದ ಸಮಾಜದಲ್ಲಿ ಕೆಟ್ಟ ಸಂದೇಶ ಹೋಗುತ್ತದೆ.

ಈ ಕಥೆಯು ಒಂದು ಸಾಮಾಜಿಕ ಕಥೆಯಂತೆ ಕಾಣುತ್ತದೆ. ಅಂದರೆ ಇಲ್ಲಿ ಸಮಾಜ ಸುತ್ತಲಿನ ಪರಿಸರ ಬಂದು ಬಳಗ, ಸ್ನೇಹಿತರು ಎಲ್ಲವೂ ಈ ಕಥೆಯಲ್ಲಿ ಬರುತ್ತಾರೆ. ಆದ್ದರಿಂದ ನಮ್ಮ ನಡುವಳಿಕೆ ಈ ಸಮಾಜವನ್ನಾದರೂ ನೋಡಿಯಾದರು ನಮ್ಮ ನಡುವಳಿಕೆ ಒಳ್ಳೆಯದಾಗಿರಬೇಕು ಎಂಬುದನ್ನು ಈ ಕಥೆಯ ಮೂಲಕ ತಿಳಿಸಿಕೊಡುತ್ತದೆ. ನಮ್ಮ ನೈತಿಕತೆಯನ್ನುವರು ಅದು ಇನ್ನೊಬ್ಬರಿಗೆ ಮಾದರಿಯಾಗಿರಬೇಕು. ನಮ್ಮನ್ನು ನೋಡಿ ಸಮಾಜದಲ್ಲಿ ಜನ ಒಳ್ಳೆಯ ಮಾತನಾಡಬೇಕು. ಅದನ್ನು ಬಿಟ್ಟು ನಾವು ನಮ್ಮ ಸಮಾಜಕ್ಕೂ, ನಮ್ಮ ಸಂಬಂಧಕ್ಕೂ, ನಮ್ಮ ಸ್ನೇಹಿತರಿಗೂ ಹೇದರದೆ ನಾವು ಅನೈತಿಕವಾಗಿ ಕಾರ್ಯ ನಡೆಸಿದರೆ ಸಮಾಜದಲ್ಲಿ ನಮಗೆ ಬೆಲೆ ಇಲ್ಲದಂತಾಗುತ್ತದೆ. ಆದ್ದರಿಂದ ನಾವು ಬಂದ ಸಂದರ್ಭದಲ್ಲಿಯು ನಮ್ಮ ನೈತಿಕತೆಯನ್ನು ಬಿಡಬಾರದು ಎಂಬುದನ್ನು ಈ ಕಥೆಯು ತಿಳಿಸಿಕೊಡುತ್ತದೆ.

ಲೇಖಕರು ಇಲ್ಲಿ ಯಾವ ಸಮಯದಲ್ಲಿ ಏನು ನಡೆಯಬೇಕು ಅದು ಆ ಸಮಯದಲ್ಲಿ ನಡೆದರೆ ಮಾತ್ರ ಅದು ಸಮಾಜಕ್ಕೆ ಸರಿ ಎನಿಸುತ್ತದೆ. ಅದನ್ನು ಬಿಟ್ಟು ನಡೆಯಬಾರದ ಸಮಯದಲ್ಲಿ ಅನೈತಿಕವಾಗಿ ನಡೆದರೆ ಅದು ಸಮಾಜಕ್ಕೆ ಒಂದು ಕಂಟಕವಿದ್ದಂತೆ ಎನಿಸುತ್ತದೆ. ಆದ್ದರಿಂದ ಲೇಖಕರು ಇಲ್ಲಿ ನಮ್ಮ ನಡುವಳಿಕೆ ಯಾವ ರೀತಿಯಾಗಿರಬೇಕು ಎಂಬುದನ್ನು ತಿಳಿಸಿದ್ದಾರೆ. ಸಾಮಾನ್ಯವಾಗಿ ಮಗಳ ಬಾನಂತನವನ್ನು ತಾಯಿ ಮಾಡುವುದು ರೂಢಿ ಹಾಗೂ ಅದೊಂದು ನಿಯಮ. ಅದನ್ನು ಬಿಟ್ಟು ತಾಯಿಯ ಬಾನಂತನವನ್ನು ಮಗಳು ಮಾಡುವುದೆಂದರೆ ಅದೊಂದು ಅನೈತಿಕ ಎಂದು ತಿಳಿಯುತ್ತದೆ. ಆದ್ದರಿಂದ ಮಗಳಿಗಾದರು ಹೆದರಿ ತಾಯಿ ಅಂತಹ ಅನೈತಿಕವಾದ ಕೆಲಸವನ್ನು ಮಾಡಬಾರದಿತ್ತು ಎಂಬುದನ್ನು ಲೇಖಕರು ಈ ಕಥೆಯ ಮೂಲಕ ತಿಳಿಸಿ ಹೇಳಿದ್ದಾರೆ.

ಈ ಒಂದು ಕಥೆಯು ಹೆಣ್ಣಿನ ಬದುಕಿನಲ್ಲಿ ನಡೆಯುವ ಒಂದು ಕಥೆಯಾಗಿದೆ. ಹೆಣ್ಣು ಹೇಗಿರಬೇಕು. ಯಾವ ರೀತಿಯಾಗಿರಬೇಕು ಎಂಬುದನ್ನು ತಿಳಿಸುತ್ತದೆ. ಆಕಸ್ಮಾತ ಹೆಣ್ಣು ಸ್ವಲ್ಪ ಕಾಲು ಜಾರಿದರೆ ಅದರಿಮದ ಎಂತಹ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ ಎಂಬುದು ಈ ಕಥೆಯ ಮೂಲಕ ತಿಳಿಸಿಕೊಡುಲಾಗಿದೆ. ಹೆಣ್ಣಿಗೆ ಅನೇಕ ಆಸೆಗಳಿರುತ್ತವೆ. ಆದರೆ ಅಲ್ಲಿ ದುರಾಷೆಗಳಿಗೆ ಆಸ್ಪದ ಕೊಡಬಾರದು. ಯಾಕೆಂದರೆ ನಮ್ಮ ನಾಡಲ್ಲಿ ಹೆಣ್ಣಿಗೆ ಪೂಜ್ಯ ಸ್ಥಾನ ನೀಡಿದ್ದೇವೆ. ಆದ್ದರಿಂದ ಹೆಣ್ಣು ಕೂಡಾ ಯಾವಾಗಲು ಇತಿ–ಮಿತಿಯನ್ನು ಮೀರಬಾರದು ಎಂಬುದನ್ನು ಈ ಕಥೆಯು ತಿಳಿಸುತ್ತದೆ.

ಈ ಕಥೆಯಲ್ಲಿ ಸ್ವಲ್ಪ ಗೊಂದಲಗಳು ಕಂಡು ಬಂದರೂ ಕೂಡಾ ಲೇಖಕರು ಅವುಗಳನ್ನು ಹೊರಗಡೆ ಬರದಂತೆ ನೋಡಿಕೊಂಡಿದ್ದಾರೆ. ಕಥೆಯು ಓದುಗನಿಗೆ ಸರಳವಾಗಿ ತಿಳಿಯುವ ರೀತಿಯಲ್ಲಿದೆ. ಈ ಕಥೆಯಲ್ಲಿ ಭಾಷೆಯು ಸಹ ಸರಳವಾದ ರೀತಿಯಲ್ಲಿ ಮೂಡಿ ಬಂದಿದೆ. ಈ ಕಥೆಯು ಕೂಡಾ ಒಂದು ಗ್ರಾಮೀಣ ಭಾಗದಲ್ಲಿ ನಡೆದಂತೆ ಒಂದು ಕಥೆಯಾಗಿದೆ. ಇಲ್ಲಿ ಹೆಣ್ಣು ಹೇಗಿರಬೇಕು ಎಂಬುದನ್ನು ತಿಳಿಸಿದ್ದಾರೆ. ಹೆಣ್ಣು, ಕಾಯ, ವಾಚಾ, ಮನಸ್ಸು ಶುದ್ಧವಾಗಿರಬೇಕು ಎಂಬುದು ತಿಳಿಯುತ್ತದೆ. ಒಂದು ಕ್ಷಣ ತಪ್ಪು ದಾರಿ ತುಳಿದರೆ ಅದರಿಂದ ತುಂಬಾ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಅದಲ್ಲದೇ ಸಮಾಜದಲ್ಲಿ ಕೆಟ್ಟ ಹೆಸರನ್ನು ತರಿಸಿಕೊಳ್ಳಬೇಕಾಗುತ್ತದೆ. ಹೀಗೆ ಈ ಕಥೆಯಲ್ಲಿ ಅನೇಕ ರೀತಿಯ ಮಾಹಿತಿಯನ್ನು ಸಮಾಜಕ್ಕೆ ತಿಳಿಸುವ ಪ್ರಯತ್ನ ಮಾಡಿದ್ದಾರೆ.

೩.೬ ರಿಣ ತಪ್ಪಿದಲ್ಲಿ :

ಲೇಖಕ **ಕಲ್ಲೇಶ್ ಕುಂಬಾರ್**ರು 'ರಿಣ ತಪ್ಪಿದಲ್ಲಿ' ಎಂಬ ಕಥೆಯು ಸಧ್ಯದ ಪರಿಸ್ಥಿತಿಗೆ ಹೇಳಿ ಮಾಡಿಸಿದಂತಿದೆ. ಅಂದರೆ ಈ ಕಥೆಯಲ್ಲಿ ಇಬ್ಬರು ಸಹೋದರರಿರುತ್ತಾರೆ. ಅದರಲ್ಲಿ ಒಬ್ಬ ಮಲ್ಲಪ್ಪ ಹೊಲಮನೆ ಗೆಲಸ ಮಡುತ್ತಿರುತ್ತಾನೆ. ಇನ್ನೊಬ್ಬ ಮಗ ಶಿವರಾಜ ಕಾಲೇಜು ಮುಗಿಸಿ ಬೆಂಗಳೂರಿನಲ್ಲಿ ಕಾಸಗಿ ಕಂಪನಿಯಲ್ಲಿ ನೌಕರಿ ಮಾಡುತ್ತಿರುತ್ತಾನೆ. ಈ ಇಬ್ಬರಲ್ಲಿ ಒಬ್ಬ ಅಂದರೆ ಮಲ್ಲಪ್ಪಾ ತಂದೆ–ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾ ಹಾಗೂ ಮನೆಯಲ್ಲಿ ಹೆಂಡತಿಯ ಜೊತೆಯಲ್ಲಿ ಕೂಡಾ ಚೆನ್ನಾಗಿ ಇರುತ್ತಾನೆ. ಆದರೆ ಒಂದು ದಿನ ಶಿವರಾಜ ರಜೆ ತೆಗೆದುಕೊಂಡು ಊರಿಗೆ ಬಂದಾಗ ಆತನ ತಂದೆ ತಾಯಿ (ನಿಂಗಪ್ಪ – ಬಸವ್ವ) ಇಬ್ಬರೂ ಸೇರಿ ಮಗನೇ ನೀನು ನಿನ್ನ ಸೋದರಮಾವನ ಮಗಳನ್ನು ಮದುವೆಯಾಗು ಎನ್ನುತ್ತಾರೆ. ಅವರ ಮಾತಿಗೆ ಗೌರವ ಕೊಡದೆ ಆ ಮದುವೆಯ ವಿಷಯವನ್ನು ದಿಕ್ಕರಿಸಿ ಮತ್ತೆ ಬೆಂಗಳೂರಿಗೆ ಹೋಗುತ್ತಾನೆ. ಇತ್ತ ಇದೆ ಚಿಂತೆಯಲ್ಲಿ ತಂದೆ ನಿಂಗಪ್ಪ ಮರಣ ಹೊಂದುತ್ತಾನೆ. ಆದರೆ ಶಿವರಾಜ ತಂದೆಯ ಅಂತಿಮದರ್ಶನಕ್ಕೂ ಬರದೇ ಬೆಂಗಳೂರಿನಲ್ಲಿ ತನಗೆ ಇಷ್ಟವಾದ ಹುಡುಗಿಯನ್ನು ರಜಿಸ್ಟಾರರಾಗಿ ಬಿಟ್ಟಿರುತ್ತಾನೆ. ಇದನ್ನೆಲ್ಲ ಕೇಳಿದ ತಾಯಿ ದುಃಖಿಸುತ್ತಾಳೆ. ಹೀಗೆ ಮನಕಲಕುವ ರೀತಿಯಲ್ಲಿ ಲೇಖಕರು ಈ ಕಥೆಯನ್ನು ಹೆಣೆದಿದ್ದಾರೆ.

ನಿಂಗಪ್ಪ ಮತ್ತು ಬಸವ್ವ ಎಂಬ ದಂಪತಿಗೆ ಇಬ್ಬರು ಗಂಡು ಮಕ್ಕಳಿರುತ್ತಾರೆ. ಒಬ್ಬ ಮಲ್ಲಪ್ಪ ಇನ್ನೊಬ್ಬ ಶಿವರಾಜ. ಮಲ್ಲಪ್ಪಾ ಹಿರಿಯ ಮಗನಾಗಿರುತ್ತಾನೆ. ಮಲ್ಲಪ್ಪ ತಮ್ಮನನ್ನು ಶಾಲೆ ಕಲಿಸಬೇಕೆಂದು ತಂದೆ ನಿಂಗಪ್ಪ ಮತ್ತು ಮಗ ಮಲ್ಲಪ್ಪಾ ಇಬ್ಬರು ಹೊಲದಲ್ಲಿ ದುಡಿದು ಬಂದ ಬೆಳೆಯಿಂದ ಲಾಭವನ್ನೆಲ್ಲ ಶಿವರಾಜನ ಶಾಲೆಗೆ ಹಾಕುತ್ತಾರೆ. ಚನ್ನಪ್ಪ ಕೆಳಿದಷ್ಟು ಹಣವನ್ನೆಲ್ಲ ನೀಡುತ್ತಾನೆ. ಏಕೆಂದರೆ ಚನ್ನಪ್ಪನ ಮಗಳು ಸುಮುತ್ರಾಳನ್ನು ಶಿವರಾಜನಿಗೆ ಕೊಟ್ಟು ಮದುವೆ ಮಾಡಿಕೊಡಬೇಕೆಂಬುದು ಎಲ್ಲರ ಆಸೆ ಆಗಿರುತ್ತದೆ.

“ಹೀಗೆ ಶಿವರಾಜ ಶಾಲೆ – ಕಾಲೇಜನ್ನು ಮುಗಿಸಿ ಕೊನೆಗೆ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ನೌಕರಿಗೆ ಸೇರಿಕೊಳ್ಳುತ್ತಾನೆ. ಕೈ ತುಂಬಾ ಸಂಬಳ ಬರುತ್ತಿರುತ್ತದೆ. ಇತ್ತ ಶಿವರಾಜನ ತಂದೆ–ತಾಯಿಯರು ಈ ವರ್ಷ ಶಿವರಾಜನ ಮದುವೆ ಮಾಡುವ ವಿಚಾರದಲ್ಲಿರುತ್ತಾರೆ. ಆಗಲೇ ಮಲ್ಲಪ್ಪನ ಮದುವೆಯಾಗಿ ಮನೆಯಲ್ಲಿ ಸುಖದಿಂದ ಇರುತ್ತಾರೆ. ಇನ್ನು ಮುಂದೆ ಶಿವರಾಜನ ಮದುವೆ ಒಂದಾದರೆ ಮುಗಿಯಿತು ಎನ್ನುತ್ತಿರುತ್ತಾರೆ ಮನೆಯವರೆಲ್ಲರು. ಅದಕ್ಕಾಗಿ ಈ ಸಲ ಜಾತ್ರೆಗೆ ರಜೆಯ ಮೇಲೆ ಬಂದರೆ ಅವನ ಮದುವೆಯ ವಿಷಯವನ್ನು ಕೇಳಿಯೇ ಬಿಡಬೇಕು ಎಂದಿರುತ್ತಾರೆ ಮನೆಯವರೆಲ್ಲರು”[೯].

ಶಿವರಾಜ ದೇವರ ಕೊಂಡ ಅಜ್ಜನ ಜಾತ್ರೆಗೆ ರಜೆಯ ಮೇಲೆ ಊರಿಗೆ ಬರುತ್ತಾನೆ. ಅವಾಗ ಮನೆಯಲ್ಲಿ ಅವನಿಗೆ ಎಲ್ಲರು ಚೆನ್ನಾಗಿ ಆರೈಕೆ ಮಾಡುತ್ತಾರೆ. ಶಿವರಾಜ ತನ್ನ ಸ್ನೇಹಿತರ ಜೊತೆಗೆ ಹೋಗುತ್ತಾನೆಂದು ತಿಳಿದು ಮದುವೆಯ ವಿಷಯ ತೆಗೆಯುತ್ತಾರೆ. ನಿಂಗಪ್ಪ ಮತ್ತು ಬಸವ್ವ ಕೂಡಿ ಶಿವರಾಜನ ಮುಂದೆ ಮದುವೆ ವಿಷಯ ಪ್ರಸ್ತಾಪ ಮಾಡುತ್ತಾರೆ. ಶಿವರಾಜ ನೀನು ನನ್ನ ಸೋದರ ಮಾವ ಚೆನ್ನಪ್ಪನ ಮಗಳು ಸುಮಿತ್ರಾಳನ್ನು ಮದುವೆ ಮಾಡಿಕೊಂಡು ಬಿಡು. ಬರುವ ತುಳಸಿಯ ಲಗ್ನದಲ್ಲಿ ನಿಮ್ಮಿಬ್ಬರ ಮದುವೆ ಮಾಡಿ ಬಿಡುತ್ತೇವೆ ಎನ್ನುತ್ತಾರೆ. ಈ ಮಾತನ್ನು ಕೇಳಿದ ಶಿವರಾಜ ಸಿಟ್ಟಿಗೆದ್ದು ಯಾರನ್ನು ಕೇಳಿ ಈ ಮದುವೆಗೆ ಒಪ್ಪಿಕೊಂಡಿದ್ದಿರಿ. ನಾನು ಅವಳನ್ನು ಮದುವೆ ಆಗುವುದಿಲ್ಲ ಎಂದು ಕಡ್ಡಿಮುರಿದಂತೆ ಹೇಳಿ ಶಿವರಾಜ ಮಾತನಾಡುತ್ತಾನೆ.

ಶಿವರಾಜನ ಮಾತನ್ನು ಕೇಳಿದ ನಿಂಗಪ್ಪನಿಗೆ ದಿಗಿಲು ಬಡಿದಂತೆ ಆಗುತ್ತದೆ. ನಿಂಗಪ್ಪ ಬಸವ್ವನನ್ನು ಕರೆದುಕೊಂಡು ಇನ್ನು ಮುಂದೆ ಅವನ ಮುಖ ಬೇಡ ಎಂದು ಅಲ್ಲಿಂದ ಹೊರನಡೆದರು. ಇದೇ ಕೊನೆ ಅವರಿಬ್ಬರ ನಡುವೆ ನಡೆದ ಮಾತುಕತೆ. ನಂತರ ಅಂದೇ ರಾತ್ರಿ ಶಿವರಾಜ ಬೆಂಗಳೂರಿಗೆ ಹೊರಟು ಬಿಡುತ್ತಾನೆ.

ಇತ್ತ ನಿಂಗಪ್ಪ ತನ್ನ ಬೀಗನಿಗೆ ಕೊಟ್ಟ ಮಾತನ್ನು ಅಂದರೆ ಚೆನ್ನಪ್ಪನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವದಾಗಲಿಲ್ಲ ಎಂದು ನಿಂಗಪ್ಪ ಅದೇ ಚಿಂತೆಯಲ್ಲಿ ಹಾಸಿಗೆಯನ್ನು ಹಿಡಿಯುತ್ತಾನೆ. ನಿಂಗಪ್ಪ ದಿನದಿಂದ ದಿನಕ್ಕೆ ಸೊರಗ ತೊಡಗಿದ. ಇದರಿಂದ ಕೆಲ ದಿನಗಳ ನಂತರ ನಿಂಗಪ್ಪ

೯. ಡಾ. ಗುರುಪಾದಪ್ಪ ಮರೇಗುದ್ದಿ : ಸಂ. ಪ್ರಕಟಿತ ಪಠ್ಯಪುಸ್ತಕ : ರಾ. ಚ. ವಿ. ವಿ. ಬೆಳಗಾವಿ. : ಪುಟ ಸಂಖ್ಯೆ : ೧೦

ಹಾಸಿಗೆಯಲ್ಲಿಯೇ ತೀರಿಕೊಳ್ಳುತ್ತಾನೆ. ನಿಂಗಪ್ಪ ತೀರಿಕೊಂಡ ಸುದ್ದಿಯನ್ನು ಶಿವರಾಜನಿಗೆ ಆತನ ಸ್ನೇಹಿತರು ಮುಟ್ಟಿಸುತ್ತಾರೆ. ಆದರೆ ಶಿವರಾಜ ತಂದೆಯ ಅಂತಿಮ ದರ್ಶನಕ್ಕೆ ಬರುವುದೇ ಇಲ್ಲ. ಇತ್ತ ತಂದೆ ತೀರಿಕೊಂಡರೆ ಅತ್ತ ಶಿವರಾಜ ಬೆಂಗಳೂರಿನಲ್ಲಿ ತನ್ನ ಗೆಳತಿಯ ಜೊತೆ ವಿವಾಹವಾಗುತ್ತಿರುತ್ತಾನೆ.

ನಿಂಗಪ್ಪ ತೀರಿಕೊಂಡ ಎಂಟು ದಿನಗಳ ನಂತರ ಶಿವರಾಜ ಊರಿಗೆ ಬರುತ್ತಾನೆ. ತನ್ನ ತಾಯಿಯನ್ನು ಮಾತನಾಡಿಸುತ್ತಾನೆ. ತಾಯಿ ಗಂಡನನ್ನು ಕಳೆದುಕೊಂಡ ದುಃಖದಲ್ಲಿದ್ದನ್ನು ಲೆಕ್ಕಿಸದೆ ಶಿವರಾಜ ಅಮ್ಮ ನಾನು ಎಂಟು ದಿನದ ಹಿಂದೆ ಒಂದು ಹುಡುಗಿಯನ್ನು ರಜಿಸ್ಟಾರ ಮದುವೆ ಮಾಡಿಕೊಂಡಿದ್ದೇನೆ. ಅದರ ಸಲುವಾಗಿ ತಂದೆ ತೀರಕೊಂಡಾಗ ಬರುವದಾಗಲಿಲ್ಲ ಎಂದನು. ಇದನ್ನು ಕೇಳಿ ತಾಯಿಗೆ ಹೊಟ್ಟೆಯಲ್ಲಿ ಕಾರ ಕಲಿಸಿದಂತಾಯಿತು. ಎಲ್ಲರೂ ಶಿವರಾಜನನ್ನು ಬೈಯ್ಯುತ್ತಾರೆ. ಆದರು ಶಿವರಾಜ ಇದನ್ನೆಲ್ಲ ಲೆಕ್ಕಿಸದೆ ಮತ್ತೆ ಬೆಂಗಳೂರಿಗೆ ಹೋರಟು ಬಿಡುತ್ತಾನೆ. ಇತ್ತ ತಾಯಿ ಬಸವ್ವನಿಗೆ ತುಂಬಾ ನೋವಾಯಿತು. ತಾಯಿ ನನಗೆ ಮಲ್ಲಪ್ಪಾ ಒಬ್ಬನೇ ಮಗನೆಂದು ತಿಳಿದು ಎಲ್ಲ ನೋವನ್ನು ನುಂಗಿಕೊಂಡು ಜೀವನ ನಡೆಸಿದಳು.

ಕೆಲ ದಿನಗಳಲ್ಲಿ ತಾಯಿಯ ಶಾಪವ್ರೋ ಏನೋ ಬೆಂಗಳೂರಿನಲ್ಲಿ ಇದ್ದ ಶಿವರಾಜನ ನೌಕರಿಯು ಹೋಗುತ್ತದೆ. ಕೆಲ ದಿನಗಳ ನಂತರ ಅವನ ಹೆಂಡತಿಯು ನೌಕರಿಯು ಹೋಗುತ್ತದೆ. ಇದರಿಂದ ಶಿವರಾಜ ಕಂಗಾಲಾಗುತ್ತಾನೆ. ಮಾಡಿದ ಸಾಲವನ್ನು ಹೇಗೆ ತಿರಿಸಬೇಕು ಎಂಬ ಚಿಂತೆಯಲ್ಲಿ ಮುಳುಗುತ್ತಾನೆ. ಒಂದು ದಿನ ನಿಮ್ಮದು ಹೊಲ ಇದೆ ಅಂತಾ ಹೇಳಿದ್ದಿರಿ. ಹೋಗಿ ನಿನಗೆ ಬರಬೇಕಾದ ಪಾಲವನ್ನು ಕೇಳಿ. ಅವರಿಂದ ಬಂದ ಹೊಲವನ್ನು ಮಾರಿ ಅದರಿಂದ ಬಂದ ಹಣದಿಂದ ನಮ್ಮ ಸಾಲ ತಿರಿಸಬಹುದು ಎಂಬ ವಿಚಾರವನ್ನು ಹೆಂಡತಿ ಶಿವರಾಜನಿಗೆ ಕಿವಿಗೆ ತುಂಬುತ್ತಾಳೆ.

ಶಿವರಾಜನಿಗೆ ಹೆಂಡತಿ ಹೇಳಿದ ಮಾತು ಸರಿಯಾಗಿ ಅನಿಸುತ್ತದೆ. ಅದರಂತೆ ಶಿವರಾಜ ಊರ ಹಿರಿಯರಾದ ಭೀಮನಗೌಡನಿಗೆ ಫೋನು ಮಾಡುತ್ತಾನೆ. ಭೀಮನಗೌಡನಿಗೆ ಎಲ್ಲಾ ವಿಷಯವನ್ನು ತಿಳಿಸುತ್ತಾನೆ. ಅದಕ್ಕೆ ಭೀಮನಗೌಡ ಆಯಿತಪ್ಪ ನಿಮ್ಮ ಅವ್ವ ಒಪ್ಪಿದರೆ ನಿನ್ನ ಪಾಲ ತೆಗೆದುಕೊಂಡು ಹೋಗುವಂತೆ ಭಾ ಎಂದು ಶಿವರಾಜನಿಗೆ ಭೀಮನಗೌಡರು ಹೇಳುತ್ತಾರೆ. ಈ ಮಾತನ್ನು ಭೀಮನಗೌಡರು ಮನೆಯಲ್ಲಿ ಚಾಕ್ರಿ ಆಳು ಸತ್ಯಪ್ಪ ಕೇಳಿಸಿಕೊಳ್ಳುತ್ತಾನೆ. ಸತ್ಯಪ್ಪ ಬಂದು ಈ ವಿಷಯವನ್ನೆಲ್ಲ ಬಸವ್ವನ ಮುಂದೆ ಹೇಳಿ ಬಿಡುತ್ತಾನೆ.

ಬಸವ್ವ ಸತ್ಯಪ್ಪನ ಮಾತನ್ನು ಕೇಳಿ ಚಿಂತೆಗೀಡಾಗುತ್ತಾಳೆ. ಇನ್ನು ಮುಂದೆ ನನ್ನ ಹೊಲ ನನ್ನ ಕೈ ಬಿಟ್ಟು ಹೋಗುತ್ತದೆ ಎಂಬ ಭಯ ಅವಳಿಗೆ ಬರುತ್ತದೆ. ಅದೇ ಗುಂಗಿನಲ್ಲಿ ರಾತ್ರಿ ಮಲಗಿಕೊಂಡಾಗ ಕನಸ್ಸಿನಲ್ಲಿ 'ಯವ್ವ ನಿಂತ್ಕೋಳವ್ವ ನನ್ನ ಬಿಟ್ಟು ಹೋಗಬ್ಯಾಡವ್ವಾ' ಎಂದು ಬಡ ಬಡಿಸುವಳು.

ಇವಳು ಬಡ ಬಡಿಸುವುದನ್ನು ಕಂಡ ಮಲ್ಲಪ್ಪ ಮತ್ತು ಅವನ ಹೆಂಡತಿ ಸಿದ್ದವ್ವ ಎದ್ದು ಬಂದು ವಿಚಾರಿಸಿಸುತ್ತಾರೆ. ಯಾಕವ್ವ ಈ ರೀತಿ ಕನಸ್ಸಿನಲ್ಲಿ ಬಡಬಡಿಸುತ್ತಿದ್ದಿ ಎಂದು ಮಲ್ಲಪ್ಪ ಕೇಳಿದಾಗ ಅದಕ್ಕೆ ಬಸವ್ವ ಇಗ ನಾನೆಲ್ಲಿ ಇದ್ದಿನಿ ಎಂದು ಅತ್ತಿತ್ತ ನೋಡಿದಳು. ಬಸವ್ವನ ಚಿತ್ತ ಏನೆನೋ ವಿಚಾರ ಮಾಡುತ್ತಿತ್ತು. ಆವಾಗ ಸೊಸೆ ಸಿದ್ದವ್ವ ಅತ್ತೆ ಸ್ವಲ್ಪ ಚಾ ಮಾಡಿ ತರುತ್ತೇನೆ ಎಂದು ಚಾ ತರಲಿಕ್ಕೆ ಒಳಗಡೆ ಹೋದಳು.

ನಂತರ ಬಸವ್ವ ಚಾ ಕುಡಿದ ನಂತರ ಹುಶಾರಾಗಿ ಬಸವ್ವ ಇದ್ದ ವಿಷಯವನ್ನೆಲ್ಲ ಮಗ ಮಲ್ಲಪ್ಪನ ಮುಂದೆ ತಿಳಿಸಿದಳು. ಮಲ್ಲಪ್ಪನು ನಮ್ಮ ಹೊಲದಲ್ಲಿ ಭಾಗ ಮಾಡಿ ಅರ್ಧ ಭಾಗ ಶಿವರಾಜನಿಗೆ ಹೊಯಿತ್ತೆಂದರೆ ಅದನ್ನು ಆತ ಮಾರಿಕೊಂಡು ಹೋಗುತ್ತಾನೆ. ಅದಕ್ಕಾಗಿ ಆ ಭೂಮಿಯನ್ನು ತಾಯಿ ನನ್ನ ಬಿಟ್ಟು ಹೋಗಬೇಡಾ ಅಂದೆ ಎಂದಳು ಬಸವ್ವ.

ಮಲ್ಲಪ್ಪ ನೀನೆಕ್ಕೆ ಹೆದರುತ್ತಿಯಾ ಸುಮ್ಮನಿರು ಎಂದನು. ಆವಾಗ ಬಸವ್ವ ಮಲ್ಲಪ್ಪ ನೀನೊಬ್ಬನೇ ನನಗೆ ಮಗ ಅವನು ನನ್ನ ಮಗನಲ್ಲ. ಹೀಗೆ ಭೀಮನಗೌಡನ ಮುಂದೆಯು ಹೇಳುತ್ತೇನೆ. ಅವನಿಗೆ ನಮ್ಮ ಆಸ್ತಿಯಲ್ಲಿ ಸ್ವಲ್ಪವೂ ಕೊಡುವುದಿಲ್ಲ. ನನ್ನ ಗಂಡ ಎಂದು ತೀರಿ ಹೋದನೋ ಅಲ್ಲಿಗೆ ಅವನ 'ರಿಣ' ತಪ್ಪಿತು ಎಂದಳು ಬಸವ್ವ.

ಈ ರೀತಿಯಾಗಿ "ಲೇಖಕ **ಕಲ್ಲೇಶ್ ಕುಂಬಾರ್**ರು ಈ 'ರಿಣ ತಪ್ಪಿದಲ್ಲಿ' ಎಂಬ ಕಥೆಯನ್ನು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಡಾ॥ ಪ್ರಹ್ಲಾದ ಅಗಸನಕಟ್ಟೆಯವರು ಹೇಳುವಂತೆ ಸಂಬಂಧಗಳನ್ನು, ರುಣಗಳನ್ನು ಹೇಗೆ ಧಿಕ್ಕರಿಸುತ್ತಾರೆ ಎಂಬುದನ್ನು ಇಲ್ಲಿ ತಿಳಿಸಿದ್ದಾರೆ. ಈ ಕಥೆಯು ಸದ್ಯದ ಪರಿಸ್ಥಿತಿಯಲ್ಲಿ ತುಂಬಾ ಅವಶ್ಯಕ ಎನಿಸುತ್ತದೆ. ಕಾರಣ ಈಗಿನ ಯುವಕರು ಶಾಲೆ ಕಲಿಯುತ್ತಿದ್ದಂತೆ ಶಹರಕ್ಕೆ ಹೋಗಿ ಅಲ್ಲಿ ಶಿಕ್ಷಣ ಕಲಿಯುವುದನ್ನು ಬಿಟ್ಟು ಬೇರೆ ಚಟುವಟಿಕೆಯಲ್ಲಿ ತೊಡಗುತ್ತಾರೆ"[೧೦]. ಕೊನೆಗೆ ಅಲ್ಲಿಯ ತಮ್ಮ ಗೆಳತಿಯ ಜೊತೆಗೆ ಮದುವೆಯಾಗುತ್ತಾರೆ. ಇತ್ತ ಎಷ್ಟೊಂದು ಆಶೆ ಇಟ್ಟುಕೊಂಡಿರುವ ತಂದೆ-ತಾಯಿಗಳಿಗೆ ನಿರಾಶೆಯಾಗುತ್ತದೆ.

ಲೇಖಕರು ಈಗಿನ ಯುವಕರು ಈ ಕಥೆಯಿಂದ ಒಂದು ಒಳ್ಳೆಯ ಪಾಠ ಕಲಿಯಲೆಂದು ಯೋಚಿಸಿಯೇ ಈ ಕಥೆಯನ್ನು ರಚಿಸಿರಬಹುದು. ಮತ್ತು ಈ ಕಥೆಯು 'ರಾಣಿ ಚೆನ್ನಮ್ಮಾ ವಿಶ್ವವಿದ್ಯಾಲಯ ಬೆಳಗಾವಿ' ತಮ್ಮ ಬಿ.ಎ. ವಿದ್ಯಾರ್ಥಿಗಳಿಗೆ ಪ್ರಥಮ ಸೇಮಿಸ್ಟರ್‌ನಲ್ಲಿ ಈ ಕಥೆಯನ್ನು ಅಳವಡಿಸಿದ್ದಾರೆ. ಆದ್ದರಿಂದ ಈ ಕಥೆಯು ಎಲ್ಲ ಯುವಕರಿಗೂ ಒಂದು ಒಳ್ಳೆಯ ಸಂದೇಶವನ್ನು ನೀಡುತ್ತದೆ. ಅಷ್ಟೇ ಅಲ್ಲದೇ ಈಗಿನ ಯುವಕರು ತಮ್ಮ ತಂದೆ-ತಾಯಿಯರನ್ನು ಯಾವ ರೀತಿಯಾಗಿ ನೋಡಿಕೊಳ್ಳುಬೇಕು

೧೦. **ಡಾ॥ ಪ್ರಹ್ಲಾದ ಅಗಸನಕಟ್ಟೆ** : **ಉರಿಯ ನಾಲಿಗೆಯ ಕಥೆಗಳು** : **(ಮುನ್ನುಡಿಯಿಂದ) ಪುಟ ಸಂಖ್ಯೆ** : ೧೪

ಹಾಗೂ ಅವರನ್ನು ಯಾವ ರೀತಿಯಾಗಿ ಗೌರವಿಸಬೇಕು ಎಂಬುದನ್ನು ಈ ಕಥೆಯು ಹೇಳುತ್ತದೆ. ಈ ಕಥೆಯನ್ನು ಎಲ್ಲರ ಮನಸ್ಸಿಗೂ ಹಿಡಿಸುವಂತೆ ತುಂಬಾ ರೋಮಾಂಚನಕಾರಿಯಾಗಿ ಲೇಖಕರು ವರ್ಣಿಸಿದ್ದಾರೆ.

ಈ 'ರಿಣ ತಪ್ಪಿದಲ್ಲಿ' ಎಂಬ ಕಥೆಯುಲ್ಲಿ ಯುವಕರು ತಿಳಿದುಕೊಳ್ಳುವುದು ಬಹಳವಿದೆ ಎಂದಿದ್ದಾರೆ. ಯಾಕೆಂದರೆ ಇತ್ತಿತ್ತಲಾಗಿ ಯುವಕರು ಶಿಕ್ಷಣಕ್ಕೆಂದು ಪಟ್ಟಣಗಳಿಗೆ ಹೋಗಿ ಅಲ್ಲಿ ಶಿಕ್ಷಣನ್ನಷ್ಟೇ ಪಡೆಯದೆ ಇನ್ನೂಳಿದ ಬೇರೆ ಚಟುವಟಿಕೆಯಲ್ಲಿ ಪಾಲ್ಗೊಂಡು ಅಲ್ಲಿ ಹಾಳಾಗುವ ಯುವಕರೆ ಹೆಚ್ಚಾಗುತ್ತಿದ್ದಾರೆ. ಅದಕ್ಕಾಗಿ ಅಂತವರಿಗಾಗಿ ಈ ಕಥೆಯು ಒಂದು ಹೇಳಿ ಮಾಡಿಸಿದಂತೆ ಕಂಡು ಬರುತ್ತದೆ. ಇಲ್ಲಿ ಲೇಖಕರು ಯುವಕರಿಗೆ ಒಂದು ಸಂದೇಶವನ್ನು ನೀಡುತ್ತಿದ್ದಾರೆ ಎಂದು ಅನಿಸುತ್ತದೆ. ಈ ಕಥೆಯಿಂದ ಅಂದರೆ ಯುವಕರು ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಸಹ ಈ ಕಥೆ ಓದುಗರಿಗೆ ತಿಳಿಸುತ್ತದೆ.

ಈ ಕಥೆಯಿಂದ ಇನ್ನೊಂದು ತಿಳಿದು ಬರುವುದೇನೆಂದರೆ ನಮ್ಮ ತಂದೆ-ತಾಯಿಗಳು ನಮ್ಮ ಶಿಕ್ಷಣಕ್ಕೆ ಅಂದರೆ ನಮ್ಮನ್ನು ಶಾಲೆ ಕಲಿಸಲಿಕ್ಕೆ ಅವರು ಎಷ್ಟೊಂದು ತೊಂದರೆ ತೆಗೆದುಕೊಂಡಿದ್ದಾರೆ ಎಂಬುದನ್ನು ನಾವು ಮರೆತಿರುತ್ತೇವೆ. ಜೊತೆಗೆ ನಮ್ಮ ಸಹೋದರರು ಹೇಗೆ ಎಂಬುದನ್ನು ನಾವು ಮರೆತು ಬಿಟ್ಟಿರುತ್ತೇವೆ. ಅಂತವರಿಗೆ ಈ ಕಥೆ ಒಂದು ಒಳ್ಳೆಯ ಪಾಠ ತಿಳಿಸುತ್ತದೆ. ಅಂದರೆ ನಮ್ಮ ತಂದೆ-ತಾಯಿಯರ ಮಾತನ್ನು ಎಂದಿಗೂ ಮರೆಯಬಾರದು ಎಂಬುದನ್ನು ಈ ಕಥೆಯಲ್ಲಿ ತಿಳಿಸಿ ಕೊಡುತ್ತದೆ. ಆಕಸ್ಮಾತ ನಾವು ತಂದೆ ತಾಯಿಂಯುನ್ನು ಎಲ್ಲರನ್ನು ಕಡೆಗನಿಸಿದರೆ ಅದರಿಂದ ಎಂತಾ ಅನಾಹುತವಾಗುತ್ತದೆ ಎಂಬುದನ್ನು ಸಹ ಈ ಕಥೆಯಲ್ಲಿ ತಿಳಿಸಲಾಗಿದೆ.

ಈಗಿನ ಕಾಲದಲ್ಲಿ ಹೆಚ್ಚಿನ ಪ್ರಮಾನದಲ್ಲಿ ಯುವಕರು-ಯುವತಿಯರು ಎಲ್ಲರು 'ಪ್ರೇಮ ವಿವಾಹ' ಹೆಚ್ಚಿನ ಪ್ರಮಾಣದಲ್ಲಿ ಮಾರು ಹೋಗುತ್ತಿದ್ದಾರೆ. ಅದಕ್ಕೆ ಅಂತವರಿಗೂ ಸಹ ಈ ಒಂದು ಕಥೆ ಬುದ್ಧಿವಾದವನ್ನು ತಿಳಿಸುವಂತೆ ಇದೆ. ಯಾಕೆಂದರೆ ಈಗಿನ ಯುವಕರು ತಂದೆ-ತಾಯಿಯುನ್ನು ನೋಡಿದ ಹುಡುಗಿಯನ್ನಾಗಲಿ ಅಥವಾ ಹುಡುಗನನ್ನಾಗಲಿ ಒಪ್ಪಿಕೊಳ್ಳುವುದಿಲ್ಲ. ಯಾಕೆಂದರೆ ಅವರಿಗೆ 'ಲವ್' ಮಾಡಿ ಮದುವೆ ಮಾಡಿಕೊಳ್ಳುವುದು ಒಂದು ಫ್ಯಾಷನ್ ಆಗಿದೆ. ಅದಕ್ಕಾಗಿ ಅದರಿಂದ ಮುಂದೆ ತಮ್ಮ ಜೀವನದಲ್ಲಿ ಏನೆಲ್ಲ ಕಷ್ಟಗಳನ್ನು ಅನುಭವಿಸುತ್ತಾರೆ

ಎಂಬುದನ್ನು ಸಹ ಈ ಕಥೆಯು ತಿಳಿಸುತ್ತದೆ. ಆದ್ದರಿಂದ ಈ ಕಥೆಯು ತಂದೆ-ತಾಯಿಯರ ಮಾತನ್ನು ಮಿರಬಾರದು ಅವರ ಮಾತನ್ನು ಮೀರಿ ಬೇರೆ ಕಡೆ ಮದುವೆ ಮಾಡಿಕೊಂಡರೆ ಎಂತಹ ಅನಾಹುತವಾಗುತ್ತದೆ ಎಂಬುದನ್ನು ಸಹ ಲೇಖಕರು ಬಹಳ ಸುಂದರವಾಗಿ ಈ ಕಥೆಯಲ್ಲಿ ವಿವರಿಸಿದ್ದಾರೆ.

ಈ ಕಥೆ ಕೇವಲ ಯುವಕರಿಗಷ್ಟೇ ಇದೆ ಎಂದರೆ ತಪ್ಪು. ಇದು ಯುವತಿಯರಿಗೂ ಸಹ ಈ ಕಥೆ ಅನ್ವಯಿಸುತ್ತದೆ. ಯಾಕೆಂದರೆ ಯುವತಿಯರು ಸಹ ತಂದೆ-ತಾಯಿಯರ ಮಾತನ್ನು ಮೀರುತ್ತಿದ್ದಾರೆ. ಅವರು ಸಹ ತಂದೆ-ತಾಯಿ ತೋರಿಸಿದ ಹುಡುಗನನ್ನು ಮದುವೆಯಾಗದೇ ಅವರಿಗೆ ಇಷ್ಟವಾದ ಹುಡುಗನನ್ನು ಎಲ್ಲೋ ಬೇರೆ ಕಡೆ ಮದುವೆಯಾಗಿ ತಂದೆ-ತಾಯಿಯರನ್ನು ಮರೆಯುತ್ತಿದ್ದಾರೆ. ಆದ್ದರಿಂದ ಈ ಕಥೆಯು ಕೇವಲ ಹುಡುಗರಿಗೆ ಅಷ್ಟೇ ಅನ್ವಯಿಸದೇ ಹುಡುಗಿಯರಿಗೂ ಸಹ ಈ ಕಥೆ ಅನ್ವಯಿಸುತ್ತದೆ. ಒಟ್ಟಿನಲ್ಲಿ ಈ ಕಥೆಯಿಂದ ಲೇಖಕ ಎಲ್ಲ ಯುವಕ-ಯುವತಿಯರಿಗೆ ಒಂದು ಒಳ್ಳೆಯ ಸಂದೇಶವನ್ನು ನೀಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈ ಕಥೆ ಈಗಿನ ಕಾಲಕ್ಕೆ ಹೇಳಿ ಮಾಡಿಸಿದಂತಾಗಿದೆ.

“‘ರಿಣ ತಪ್ಪಿದಲ್ಲಿ’ ಎಂಬ ಕಥೆಯು ಆಧುನಿಕ ಶಿಕ್ಷಣ ಪಡೆದ ಶಿವರಾಜ ತನ್ನನ್ನು ಓದಿಸಲು ಕನಸು ಕಂಡ, ಹಗಲಿರುಳು ಬೆವರು ಸುರಿಸಿದ ತನ್ನ ಬಡಪಾಯಿ ತಂದೆ-ತಾಯಿಯರನ್ನು ಹಾಗೂ ತನ್ನ ಮೂಲ ಪಾರಂಪರಿಕ ಸಂಬಂಧವನ್ನು ‘ರುಣ’ಗಳನ್ನು ಹೇಗೆ ದಿಕ್ಕರಿಸುತ್ತಾನೆ ಎಂಬುದನ್ನು ಈ ಕಥೆ ಹೇಳುತ್ತದೆ”[೧೧].

ಲೇಖಕರು ಈ ಕಥೆಯಲ್ಲಿ ಹೆಚ್ಚಾಗಿ ಗೊಂದಲವನ್ನು ಮಾಡದೆ ಸರಳವಾಗಿ ನೇರವಾಗಿ ಈ ಕಥೆಯನ್ನು ಹೆಣೆದಿದ್ದಾರೆ. ಇಲ್ಲಿ ಮತ್ತೊಂದು ವಿಷಯವನ್ನು ಸಹ ತಿಳಿಸಿದ್ದಾರೆ. ಅದೇನೆಂದರೆ ಶಿಕ್ಷಣ ಪಡೆದವರಿಗೂ ಮತ್ತು ಶಿಕ್ಷಣ ಪಡೆಯದೇ ಇರುವವರಿಗೂ ಇರುವಂತ ಒಂದು ವ್ಯತ್ಯಾಸವನ್ನು ಸಹ ಇಲ್ಲಿ ತಿಳಿಸಿದ್ದಾರೆ. ಹೇಗೆಂದರೆ ಶಿಕ್ಷಣ ಪಡೆದಂತ ಶಿವರಾಜ ಇಲ್ಲಿ ತಂದೆ-ತಾಯಿಯರನ್ನು ದಿಕ್ಕಿರಿಸಿದ. ತಂದೆ-ತಾಯಿಯರ ಮಾತನ್ನು ಕೇಳಲಿಲ್ಲ. ಅವರಿಗೆ ವಿರೋಧವಾಗಿ ನಡೆದುಕೊಂಡನು. ಆದರೆ ಶಿಕ್ಷಣವನ್ನು ಪಡೆಯದೇ ಮನೆಯಲ್ಲಿಯೇ ಇದ್ದ ಇನ್ನೊಬ್ಬ ಮಗ ಮಲ್ಲಪ್ಪ ತಂದೆ-ತಾಯಿಯರನ್ನು ನೋಡಿಕೊಳ್ಳುತ್ತಾ ಅವರ ಮಾತನ್ನು ಕೇಳಿಕೊಳ್ಳುತ್ತಾ ಅವರು ಹೇಳಿದಂತೆ ಅವರ ಮಾತನ್ನು ಮೀರದೆ ತಂದೆ-ತಾಯಿ ಪ್ರೀತಿಗೆ ಪಾತ್ರನಾಗಿದ್ದ. ಇಲ್ಲಿ ನಮಗೆ ಶಿಕ್ಷಣ ಪಡೆಯದೇ ಇದ್ದ ಮಲ್ಲಪ್ಪ ಒಳ್ಳೆಯವನೆನಿಸುತ್ತದೆ. ಈ ರೀತಿಯಾಗಿಯು ಸಹ ಲೇಖಕರು ಒಂದು ವಿಷಯವನ್ನು ಈ ಕಥೆಯಿಂದ ತಿಳಿಸಿದ್ದಾರೆ.

---

೧೧. ಡಾ. ಗುರುಪಾದಪ್ಪ ಮರೇಗುದ್ದಿ : ಸಂ. ಪ್ರಕಟಿತ ಪತ್ರಪುಸ್ತಕ : ರಾ. ಚ. ವಿ. ವಿ. ಬೆಳಗಾವಿ : ಪುಟ ಸಂಖ್ಯೆ : ೧೪

ಈ ಕಥೆಯಲ್ಲಿ ಹೆಚ್ಚಾಗಿ ಹಳ್ಳಿಯ ಭಾಷೆಯನ್ನು ಬಳಸಿದ್ದಾರೆ. ಮತ್ತು ಹಳ್ಳಿಯ ಜಾತ್ರೆಗಳನ್ನು ತೋರಿಸಿದ್ದಾರೆ. ಅಲ್ಲದೇ ಗ್ರಾಮೀಣ ಪ್ರದೇಶದ ಬದುಕನ್ನು ಇಲ್ಲಿ ಚಿತ್ರಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಘಟನೆಗಳು ಇಲ್ಲಿ ಎದ್ದು ಕಾಣುತ್ತವೆ. ಈ ಕಥೆಯಿಂದ ಹಳ್ಳಿಗೂ ಮತ್ತು ಪಟ್ಟಣಕ್ಕೂ ಇರುವಂತಹ ವ್ಯತ್ಯಾಸವನ್ನು ಸಹ ತಿಳಿಸಿದ್ದಾರೆ. ಹಳ್ಳಿಯಲ್ಲಿರುವಂತವರು ತಂದೆ-ತಾಯಿಯರ ಮಾತನ್ನು ಕೇಳುತ್ತಾರೆ. ಆದರೆ ಪಟ್ಟಣದಲ್ಲಿ ಇರುವಂತವರು ತಂದೆ-ತಾಯಿಯ ಮಾತನ್ನು ಕೇಳದೆ ಅವರನ್ನು ತಿರಸ್ಕರಿಸುತ್ತಾರೆ. ಆದ್ದರಿಂದ ಈ ಕಥೆಯಲ್ಲಿ ಪಟ್ಟಣಗಿಂತಲೂ ಹಳ್ಳಿಯ ಮೇಲು ಎಂಬುದನ್ನು ತಿಳಿಸಿದ್ದಾರೆ.

ಲೇಖಕರು ಈ ಕಥೆಯಲ್ಲಿ ಎಲ್ಲಿಯೂ ಗೊಂದಲ ಮಾಡಿಲ್ಲ. ಬಹಳ ಸರಳವಾಗಿ, ನೇರವಾಗಿ ಈ ಕಥೆಯನ್ನು ರಚಿಸಿದ್ದಾರೆ. ಈ ಕಥೆಯನ್ನು ಯಾರು ಬೇಕಾದರು ಓದಿದರೆ ತಿಳಿಯುವ ರೀತಿಯಲ್ಲಿದೆ. ಆದ್ದರಿಂದ ಇಲ್ಲಿ ಸರಳತೆಯು ಎದ್ದು ಕಾಣುತ್ತದೆ. ಮತ್ತು ಈ ಕಥೆ ಒಳ್ಳೆಯ ಪಾಠವನ್ನು ಕಲಿಸಿಕೊಡುತ್ತದೆ. ಇಲ್ಲಿ ತಿಳಿದುಕೊಳ್ಳುವುದು ಬಹಳವಿದೆ. ಆದ್ದರಿಂದ ಇದು ಎಲ್ಲ ಯುವಕ-ಯುವತಿಯರಿಗೆ ಒಂದು ಒಳ್ಳೆಯ ಸಂದೇಶವನ್ನು ನೀಡುವಂತದ್ದಾಗಿದೆ. ಈ ಕಥೆಯನ್ನು ಕೇಳಿದರೆ ತಂದೆ-ತಾಯಿಯರ ಮಾತನ್ನು ಮೀರಬಾರದು. ಅವರು ಹೇಳಿದಂತೆ ಕೇಳಬೇಕು ಎಂದು ಅನಿಸುತ್ತದೆ. ಆದ್ದರಿಂದ ಈ ಕಥೆಯು ಒಂದು ಉತ್ತಮವಾದ ತಿರುಳನ್ನು ಹೊಂದಿದೆ.

೩.೭ ಹಂದಿ :

ಲೇಖಕ **ಕಲ್ಲೇಶ್ ಕುಂಬಾರ್**ರು ಬರೆದಿರುವ ಈ 'ಹಂದಿ' ಎಂಬ ಕಥೆಯು ಒಂದು ಊರಿನ ವಿಚಿತ್ರ ಕಥೆಯನ್ನು ಹೇಳುತ್ತದೆ. ಊರ ಸ್ವಚ್ಚವಾಗಿರಲೆಂದು ಹಂದಿಗಳನ್ನು ತರಸಿ ಅವುಗಳನ್ನು ಸಾಕಲಿಕ್ಕೆ ಒಬ್ಬ ವ್ಯಕ್ತಿಯನ್ನು ನೇಮಿಸುತ್ತಾರೆ. ಆದರೆ ಅದೇ ಹಂದಿಗಳು ಊರ ಜನರಿಗೆ ಮಾರಕವಾಗುತ್ತವೆ ಮತ್ತು ಹಂದಿಯ ಮಾಲಿಕನ ಸಾವಿಗೆ ಕಾರಣವಾಗುತ್ತವೆ. ಆದ್ದರಿಂದ ಹಂದಿಗಳೆ ಈ ಕಥೆಯ ಮುಖ್ಯ ಪಾತ್ರದಾರಿಗಳಾಗಿವೆ.

ಇದರ ಜೊತೆಗೆ ಊರಗೌಡ ಮಾಡುವ ಕೆಲಸವನ್ನು ಲೇಖಕರು ತುಂಬಾ ಸೊಗಸಾಗಿ ಚಿತ್ರಿಸಿದ್ದಾರೆ. ಆತ ಒಬ್ಬ ಧಲಿತ ಮಹಿಳೆಯ ಜೊತೆಗೆ ಅನೈತಿಕವಾಗಿ ಸಂಬಂಧ ಇಟ್ಟುಕೊಂಡು ಅವಳು ಹೇಳಿದಂತೆ ಆತ ಕೇಳುತ್ತಿರುತ್ತಾನೆ ಮತ್ತು ಆ ಗೌಡ ತನ್ನ ಹೆಂಡತಿ ಮಕ್ಕಳನ್ನು ಸಹ ಲೆಕ್ಕಿಸದೆ ಆ ಧಲಿತ ಮಹಿಳೆಯ ಸಂಗಡ ವಾಸವಾಗಿರುತ್ತಾನೆ. ಆ ಊರಿಗೆ ಹಂದಿಗಳು ಬರಲಿಕ್ಕೆ ಆ ಮಹಿಳೆಯೇ ಕಾರಣವಾಗುತ್ತಾಳೆ. ಹಂದಿಗಳು ಅವಳಿಗೆ ತಿರುಗಿ ಬಿಳುತ್ತವೆ. ಹೀಗೆ ಈ ಕಥೆಯ ತಿರುಳು ತುಂಬಾ ರೋಮಾಂಚನಕಾರಿಯಾಗಿ ಲೇಖಕರು ವರ್ಣಿಸಿದ್ದಾರೆ ಎನ್ನಬಹುದು.

ಆ ಹಾರೂಗೇರಿ ಎಂಬ ಊರಿಗೆ ನೀರು ಕುಡಿಯಲು ನೀರು ಬಳಕೆ ಮಾಡಲು ಕೇವಲ ಒಂದೇ ಬಾವಿ ಇರುತ್ತದೆ. ಅದೇ 'ಸಂಕರಬಾವಿ'. ಆ ಊರಿನ ಜನರೆಲ್ಲ ಈ ಬಾವಿಯ ನೀರನ್ನೇ ಉಪಯೋಗ ಮಾಡುತ್ತಿರುತ್ತಾರೆ. ಆದರೆ ಒಂದು ದಿನ ಆ ಬಾವಿಯಲ್ಲಿ ಒಂದು ಹಂದಿ ಬಿದ್ದು ಸತ್ತಿರುತ್ತದೆ. ಅದರಿಂದ ಆ ಹಂದಿಯನ್ನು ನೋಡಿದ ಆ ಊರಿನ ಜನರೆಲ್ಲ ಅಲ್ಲಿಯ ಸೇರಿಕೊಳ್ಳುತ್ತಾರೆ. ಎಲ್ಲ ಜನರು ಮಾತನಾಡಿಕೊಳ್ಳುತ್ತಾರೆ. ಇದು ಕೊರ್ರ್ ನಿಂಗ್ಯಾನ ಕೆಲಸ ಎಂದು ಹೇಳುತ್ತಾರೆ. ಆವಾಗ ಊರ ಗೌಡ ಮಾಲಿಂಗಯ್ಯನು ಎಲ್ಲ ಜನರನ್ನು ಕರೆಯಿಸಿ ಈ ಬಾಂವಿಯನ್ನು ಮುಚ್ಚಿಬಿಡ್ರಿ. ಬೇರೆ ಕಡೆ ಮತ್ತೊಂದು ಬಾಂವಿಯನ್ನು ತೆಗೆಯೋಣ ಎಂದು ಹೇಳಿದ. ಅದರಂತೆ ಎಲ್ಲರು ಆ ಬಾಂವಿಯನ್ನು ಮುಚ್ಚಲು ಶುರುಮಾಡಿದರು.

ಆದರೆ ಊರಿನ ಜನ ಮತ್ತು ಗೌಡ ಎಷ್ಟು ಮೂಢರು ಎಂಬುದು ಇದರಿಂದ ತಿಳಿಯುತ್ತದೆ. ಯಾಕೆಂದರೆ ಊರಿನ ಜನರೆಲ್ಲ ಸೇರಿ ಆ ಸಂಕರಬಾವಿಯಲ್ಲಿ ಬಿದ್ದಿರುವ ಹಂದಿಯನ್ನು ಹೊರತೆಗೆದು ಆ ನೀರನ್ನು ಸ್ವಚ್ಚಗೊಳಿಸಿ ಮತ್ತೆ ಆ ಬಾವಿಯ ನೀರನ್ನು ಉಪಯೋಗ ಮಾಡುವದನ್ನು ಬಿಟ್ಟು ಬಾವಿಯನ್ನೇ ಮುಚ್ಚುವ ಕೆಲಸ ಮಾಡುತ್ತಾರೆ ಎಂದರೆ ಅವರು ಎಷ್ಟು ಮೂಢರು ಎಂಬುದು ಇದರಿಂದ ತಿಳಿಯುತ್ತದೆ.

ಈ ಊರಿಗೆ ಹಂದಿಗಳು ಹೇಗೆ ಬಂದವು ಎಂಬುದು ಒಂದು ದೊಡ್ಡ ಕಥೆ. ಆ ಕಥೆಯನ್ನು ಲೇಖಕರು ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ. ಅದೇನೆಂದರೆ ಆ ಊರಿಗೆ ಒಬ್ಬ ಗೌಡನೀರುತ್ತಾನೆ. ಅವನೇ ಮಾಲಿಂಗಯ್ಯ. ಈತ ಊರ ಪಂಚಕಿ ಮಾಡುತ್ತಾ ಊರಲ್ಲಿ ಗಂಭೀರವಾಗಿ ತಿರುಗಾಡುತ್ತಿರುತ್ತಾನೆ. ಅದರಂತೆ ಆ ಗೌಡನ ಮೈಕಟ್ಟು ಗಟ್ಟಿಮುಟ್ಟಾಗಿ ಇರುತ್ತದೆ. ಆ ಗೌಡ ಊರಿಗೆ ದೊಡ್ಡ ಸಾಹುಕಾರನಾಗಿರುತ್ತಾನೆ. ಆತನಿಗೆ ಸಾಕಷ್ಟು ಜಮೀನು ಇರುತ್ತದೆ. ಹೀಗೆ ಊರಗೌಡ ಮಾಲಿಂಗಯ್ಯ ಊರ ಹಿರಿತನ ಮಾಡುತ್ತ ಇದ್ದ.

ಈ ಮಾಲಿಂಗಯ್ಯ ಗೌಡನಿಗೆ ಮನೆಯಲ್ಲಿ ಸುಂದರವಾದ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ಆದರು 'ಮನೆಯ ಊಟ ರುಚಿ ಹತ್ತೋದಿಲ್ಲ' ಎಂಬಂತೆ ಆ ಗೌಡ ಮಾದರ ಲಚ್ಚಿಯ ಜೊತೆಗೆ ಅನೈತಿಕ ಸಂಬಂಧವನ್ನು ಇಟ್ಟುಕೊಳ್ಳುತ್ತಾನೆ. ಮಾದರ ಲಚ್ಚಿಯು ನೋಡಲಿಕ್ಕೆ ಸುಂದರ, ರೂಪವತಿಯು ಆಗಿರುತ್ತಾಳೆ. ಅವಳಿಗೂ ಸಹ ಗೌಡನ ಮೇಲೆ ಮಮತೆ ಬಂದು ಆತನ ಜೊತೆಗೆ ಇದ್ದು ಬಿಡುತ್ತಾಳೆ. ಗೌಡ ಮಾಲಿಂಗಯ್ಯ ಪ್ರತಿದಿನ ಲಚ್ಚಿಯ ಮನೆಯಲ್ಲಿಯೇ ಎದ್ದು ಬಿದ್ದು ಹೋಗುತ್ತಿರುತ್ತಾನೆ. ಈ ಲಚ್ಚಿಯ ಸಲುವಾಗಿ ಗೌಡ ತನ್ನ ಹೆಂಡತಿ ಮಕ್ಕಳನ್ನೇ ಮರೆತು ಬಿಟ್ಟಿರುತ್ತಾನೆ. ಲಚ್ಚಿಯ ಪಕ್ಕದಲ್ಲಿ ಮಲಗದಿದ್ದರೆ ಗೌಡನಿಗೆ ಜೀವ ಗಮಸುತ್ತಿರಲಿಲ್ಲ. ಅದಕ್ಕಾಗಿ ಪ್ರತಿ ದಿನ ರಾತ್ರಿ ಗೌಡ ಲಚ್ಚಿಯು ಮನೆಯಲ್ಲಿಯೇ ಮಲಗುತ್ತಿದ್ದ. ನಂತರ ಬೆಳಿಗ್ಗೆ ಎದ್ದು ತನ್ನ ಮನೆಗೆ ಹೋಗುತ್ತಿದ್ದ.

ಮಾದರ ಲಚ್ಚಿಯ ಮನೆಯು ಊರ ಹೊರಗಿರುವ ಹೊಲಗೇರಿಯ ಪಕ್ಕದಲ್ಲಿಯೇ ಅವಳ ಮನೆ ಇರುತ್ತದೆ. ಆದ್ದರಿಂದ ಲಚ್ಚಿಗೆ ಪ್ರತಿದಿನ ಹೇಲಿನ (ಸಂಡಾಸ) ವಾಸನೆ ಕುಡಿದು ಬೇಸರವಾಗಿರುತ್ತದೆ. ಗೌಡ ಮಾಲಿಂಗಯ್ಯನಿಗೂ ಸಹ ಲಚ್ಚಿಯ ಮನೆಗೆ ಹೋದಾಗ ಹೇಲಿನ ವಾಸನೆ ಕುಡಿದು ಬೇಸರವಾಗಿರುತ್ತದೆ. ಆದ್ದರಿಂದ ಲಚ್ಚಿ ಗೌಡನ ಮುಂದೆ ಹೀಗೆ ಹೇಳುತ್ತಾಳೆ. ದಿನಾ ಈ ವಾಸನೆ ಕುಡಿದು ಸಾಕಾಗೈತಿ ಅದಕ್ ಏನರ್‍ರ ಮಾಡ್ರಿ ಅಂತಾ ಗೌಡನಿಗೆ ಹೇಳುತ್ತಾಳೆ. ಆವಾಗ ಗೌಡ ಸಹ ಯೋಚಿಸುತ್ತಾನೆ. ಲಚ್ಚಿ ಏನರ್‍ರ ಇದಕ ಉಪಾಯ ಮಾಡ್ರಿ ಎಂದು ಹೇಳಿದು ಗೌಡನಿಗೆ ತಲೆಯಲ್ಲಿ ಕುಂತಬಿಡತೈತಿ. ಆವಾಗ ಆ ದಿನ ರಾತ್ರಿ ಲಚ್ಚಿಯ ಪಕ್ಕದಲ್ಲಿ ಮಲಗಿದ್ದಾಗ ಇಡೀ ರಾತ್ರಿ ಯೋಚನೆಯಲ್ಲಿಯೇ ಮಲಗುತ್ತಾನೆ. ಈ ಊರಾಗ ಹಂದಿಗಳನ್ನು ತರಿಸಿದ್ರೆ ಹೆಂಗ್, ಹೇಗೋ ಕೊರ್‍ರ್ ನಿಂಗ್ಯಾ ಕಾಲಿ ಅದಾನು. ಅವನಿಗೆ ಈ ಕೆಲಸ ಹಚ್ಚಿದ್ರ ಆಯ್ತು ಎಂದು ವಿಚಾರಿಸಿದ. ಮರುದಿನ ಕೊರ್‍ರ ನಿಂಗ್ಯಾನನ್ನು ಕರೆಯಿಸಿ ಊರಿಗೆ ಹಂದಿಯನ್ನು ತರಸಲಿಕ್ಕೆ ಹೇಳುತ್ತಾನೆ.

ಕೊರ್‍ರ್ ನಿಂಗಪ್ಪನಿಗೆ ಹೇಗೋ ಕೆಲಸವಿರುವದಿಲ್ಲ, ಕೆಲಸವಿಲ್ಲದೇ ತಿರುಗುತ್ತಿರುತ್ತಾನೆ. ಈ ಗೌಡನ ಮಾತನ್ನು ಕೇಳಿ ನಿಂಗಪ್ಪನಿಗೆ ಕೂಷಿಯಾಗುತ್ತದೆ. ಗೌಡನ ಆಜ್ಞೆಯಂತೆ ನಿಂಗಪ್ಪ ಹಂದಿಗಳನ್ನು ಟ್ರಕ್‌ದಲ್ಲಿ ತಂದು ಬಿಟ್ಟ. ಆವಾಗ ಊರ ಮಂದಿಯಲ್ಲಿ ಹಂದಿಗಳನ್ನು ನೋಡಲಿಕ್ಕೆ ಸೇರಿಬಿಟ್ಟರು. ಊರಿನ ಜನರೆಲ್ಲ ಯಾವುದೋ ಒಂದು ವಿಚಿತ್ರ ಪ್ರಾಣಿಗಳನ್ನು ನೋಡಿದಂತೆ ಆ ಹಂದಿಗಳನ್ನು ನೋಡಹತ್ತಿದ್ದರು. ಆವಾಗ ಟ್ರಕ್‌ದಿಂದ ಕೆಳಗೆ ಇಳಿಸಿದ ತಕ್ಷಣ ಹಂದಿಗಳು ಓಡಿ ಹೋಗಿ ಹೇಲನ್ನು ತಿನ್ನಲಿಕ್ಕೆ ಪ್ರಾರಂಭಿಸಿದವು. ಈ ಹಂದಿಗಳನ್ನು ನೋಡಿದ ಮಾದರ ಲಚ್ಚಿಗೆ ಎಲ್ಲಿಲ್ಲದ ಸಂತೋಷ. ಯಾಕೆಂದರೆ ಇನ್ಮುಂದೆ ವಾಸನೆ ಬರುವದು ಕಡಿಮೆಯಾಗುತ್ತದೆ ಎಂದು ತಿಳಿದು ಲಚ್ಚಿ ಖುಷಿಪಟ್ಟಳು.

ಗೌಡ ಮಾಲಿಂಗಯ್ಯನು ಸಹ ಖುಷಿಯಲ್ಲಿದ್ದ. ಯಾಕೆಂದರೆ ತನ್ನ ಪ್ರೇಯಸಿಗೆ ಅನುಕೂಲ ಮಾಡಿಕೊಟ್ಟಿರುವ ಖುಷಿ ಗೌಡನಿಗಿತ್ತು. ಹೀಗೆ ಗೌಡ ಮತ್ತು ಲಚ್ಚಿ ಇಬ್ಬರು ಹಂದಿಗಳನ್ನು ನೋಡಿ ಖುಷಿಪಟ್ಟರು.

ಇದನನ್ನು ನೋಡಿದಾಗ ಏನು ತಿಳಿದು ಬರುತ್ತದೆಯೆಂದರೆ ಹಳ್ಳಿಗಳಲ್ಲಿ ಗೌಡ್ಕಿ ಮಾಡುವಂತವರು ಹೇಗೆ ಇರತ್ತಾರೆ ಅನ್ನುವುದು ಇದರಿಂದ ತಿಳಿಯುವುದು. ಅಂದರೆ ಗೌಡನಿಗೆ ಬೆರೆಯವರ ಯಾವ ತೊಂದರೆಯು ಅವನಿಗೆ ಕೇಳಿಸುವುದಿಲ್ಲ. ಆದರೆ ತನ್ನ ಪ್ರೇಯಸಿಗೆ ಆಗತಕ್ಕಂತ ತೊಂದರೆಯನ್ನು ನೋಡಿ ಗೌಡ ಅದಕ್ಕೆ ಬೇಗನೆ ಪರಿಹಾರ ಹುಡುಕಿದ. ಅಂದರೆ ಇಂತಹ ಜನ ತಮಗೆ ಬೇಕಾದವರ ಕೆಲಸ ಮಾತ್ರ ಮಾಡುತ್ತಾರೆ. ಉಳಿದವರ ಕೆಲಸ ಇವರಿಗೆ ಕೆಳಿಸಿ ಬರುವುದೇ ಇಲ್ಲ. ಮತ್ತು ಊರಿನ ಜನರು ಸಹ ಇಂತ ಗೌಡನನ್ನು ತಿರಗಿ ಕೇಳುವ ಗೋಜಿಗೆ ಹೋಗುವುದಿಲ್ಲ. ಇದರಿಂದ ಉಳ್ಳವರು ಏನ ಬೇಕ್ಕಾದನ್ನು ಮಾಡಬಹುದು ಎಂಬುದು ತಿಳಿದು ಬರುತ್ತದೆ.

ಹಂದಿಗಳು ಊರಿಗೆ ಬಂದ ತಕ್ಷಣ ಊರನ್ನು ಸ್ವಚ್ಛ ಮಾಡತೊಡಗಿದವು. ಮತ್ತು ಎಲ್ಲ ಜನರಿಗೆ ಖುಷಿಯಾಯಿತು. ಇದರ ಜೊತೆಗೆ ಈ ಹಂದಿಯ ಮಾಲಿಕ ಕೊರ್ರ ನಿಂಗಪ್ಪನಿಗೂ ಕೈ ತುಂಬಾ ಹಣ ಬರಲಿಕ್ಕೆ ಹತ್ತಿತ್ತು. ಯಾಕೆಂದರೆ ಹಂದಿಯ ಮರಿಗಳು ದೊಡ್ಡವಾಗ ಅವುಗಳನ್ನು ಮಾರಿ ಬಂದ ಹಣದಿಂದ ನಿಂಗಪ್ಪನ ಕೈಯಲ್ಲಿ ಹಣ ಆಡತೊಡಗಿತು. ಇದಕ್ಕಿಂತಲೂ ಮೊದಲು ನಿಂಗಪ್ಪನಿಗೆ ಉಡಲಿಕ್ಕೆ ಸರಿಯಾದ ಬಟ್ಟೆಗಳು ಇರುತ್ತಿರಲಿಲ್ಲ. ತಿನ್ನಲಿಕ್ಕೆ ಸರಿಯಾಗಿ ಊಟ ಸಿಗುತ್ತಿರಲಿಲ್ಲ. ಈ ಊರಿಗೆ ಹಂದಿಗಳು ಬಂದ ನಂತರ ನಿಂಗಪ್ಪ ಟಿಫ್ ಟಾಪ್ ಆಗಿ ತಿರಗ ಹತ್ತಿದ. ತನ್ನ ಮನೆಯಲ್ಲಿದ್ದ ಹಳೆಯ ಕೋಟನ್ನು ತೊಳೆದು ಅದನ್ನು ಹಾಕಿಕೊಂಡು ತಿರಗ ಹತ್ತಿದ. ಇದರಿಂದ ನಿಂಗಪ್ಪನಿಗೂ ತುಂಬಾ ಖುಷಿಯಾಗಿತ್ತು.

ಊರಿನ ಜನರಿಗೆ ನಿಂಗಪ್ಪನನ್ನು ನೋಡಿ ಹೊಟ್ಟೆ ಕಿಚ್ಚು ಪಡಹತ್ತಿದ್ದರು. ಯಾಕೆಂದರೆ ನಿಂಗಪ್ಪ ಹೇಗೆ ಟಿಫ್ ಟಾಪ್ ಆಗಿ ತಿರಗ ಹತ್ತಿದ ನೋಡ ಅಂತಾ ಕೆಲವರಿಗೆ ಹೊಟ್ಟೆ ಕಿಚ್ಚು ಸುರುವಾಯಿತು. ಕೆಲವರು ನಿಂಗ್ಯಾನ ದಿಮಾಕ್ ಹೆಚ್ಚಾತ್ತ ನೋಡರಿ ಅನ್ನ ಹತ್ತಿದರು. ಯಾಕೆಂದರೆ ಇಂತಹ ಮಂದಿ ಪ್ರತಿ ಊರಗಳಲ್ಲಿ ಇದ್ದೆ ಇರತಾರು. ಅವರಿಗೆ ಯಾರಾದರು ಒಬ್ಬ ಬಡವ ಹೊಸ ಅಂಗಿ ಹಾಕಿದರೆ ಅವರಿಗೆ ಸಹಿಸಲಿಕ್ಕೆ ಆಗುವುದಿಲ್ಲ. ಅಂತಹ ಜನ ಪ್ರತಿ ಊರಿನಲ್ಲಿಯು ಇರತಾರ. ಅದರಂತೆ ಈ ಊರಲ್ಲಿ ಹಿಂತಾ ಮಂದಿ ಇದ್ದರು. ಇಂತಹ ಜನಾ ಹೆಚ್ಚಾಗಿ ಹಳ್ಳಿಗಳಲ್ಲಿ ಕಂಡು ಬರುತ್ತಾರೆ. ಬಡವ – ಶ್ರೀಮಂತ ಎಂಬ ತಾರತಮ್ಯ ಇರುತ್ತದೆ. ಅದಕ್ಕಾಗಿ ಹಳ್ಳಿಗಳಲ್ಲಿ ಇಂತಹ ಜನ ಹೆಚ್ಚಾಗಿ ಕಾಣುತ್ತಾರೆ.

ಹಂದಿಗಳು ಊರಿಗೆ ಬಂದಾಗಿನಿಂದ ಹೊಲಸು ಹಿಡಿದ ಊರಿನ್ನು ಸ್ವಚ್ಛ ಆಯಿತು. ಆದರೆ ಅವುಗಳಿಂದ ಮತ್ತೊಂದು ಸಮಸ್ಯೆ ಹುಟ್ಟಿಕೊಂಡಿತು. ಅದೇನೆಂದರೆ ಒಂದು ದಿನ ಮಾದರ ಲಚ್ಚಿ ಹೇಲಾಕಂತ ಹೋಗಿದ್ದಳು. ಲಚ್ಚಿ ಕಂಟಿಯ ಮರಿಗೆ ಹೇಲಾಕ ಕುಂತಿದ್ದಳು. ಆವಾಗ ಹಿಂದಿನಿಂದ ಒಂದು ಹಂದಿ ಬಂದು ಲಚ್ಚಿಯ ಕುಂಡಿಯನ್ನು ಹಿಡಿದು ಬಿಟ್ಟಿತು. ಲಚ್ಚಿ ರಗತಾ ಸೋರಸಕೊಂತ ಸತ್ತನೋ ಎಪ್ಪಾ! ಅನಕ್ಕೊಂತ ಓಡೋಡಿ ತನ್ನ ಮನೆ ಸೇರಿದಳು. ಆವಾಗ ಲಚ್ಚಿಗೆ ತುಂಬಾನೆ ತ್ರಾಸವಾಯಿತು. ಈ ಘಟನೆಯನ್ನು ಕಂಡು ಗೌಡ ಮಾಲಿಂಗಯ್ಯನಿಗೆ ತುಂಬಾ ಸಿಟ್ಟು ಬಂತು. ಸಿಟ್ಟಿನಲ್ಲಿ ಕೊರ್ರ್ ನಿಂಗ್ಯಾನ ಬಾಯಿಗೆ ಬಂದಾಂಗ ಬೈದು ಅದಲ್ಲದೇ ಕೊರ್ರ್ ನಿಂಗ್ಯಾನನ್ನು ಕರೆಸಿ ಬೊಸಡಿ ಮಗನಾ ಹಂದಿ ನೋಡಕೋತ್ತಿರ ಅಂದ್ರ ಅವುಗಳನ್ನು ಮಂದಿಗೆ ಕಡಿಯುವಂತ ಮಾಡಿದಿಯೇನ ಮಗನಾ ಅಂತಾ ಬೈದನು. ನಿಂಗಪ್ಪನಿಗೆ ಇದರಿಂದ ಆಯತರಿ ಧಣಿ ಇನ್ನ ಮುಂದ ಹಿಂಗ್ ಆಗದಂಗ ನೋಡಕೊಳ್ಳತ್ತಿನ್ರಿ ಎಂದನು ನಿಂಗಪ್ಪ.

ಈ ಘಟನೆ ನಡೆದ ಕೆಲ ದಿನಗಳಲಿ ಮತ್ತೊಂದು ಘಟನೆ ನಡೆಯಿತು. ಒಂದು ದಿನ ನಿಂಗಪ್ಪ ನಸುಕಿನಲ್ಲಿ ಎದ್ದು ಚರಗಿ ತಗೊಂಡು ಹೊರಟದ್ದ. ಅವನು ಹಣಮದೇವರ ಗುಡಿಯ

ಮುಂದಿಂದ ಹಾದು ನಡೆಯುತ್ತಿದ್ದ. ಆ ಸಂದರ್ಭದಲ್ಲಿ ಹಣಮದೇವರ ಗುಡಿಯ ಒಳಗಡೆ ಕೆಲವೊಂದು ಹಂದಿಗಳು ಹೋಗಿದ್ದವು. ಅದನ್ನು ನೋಡಿದ ನಿಂಗಪ್ಪ ಯಾರಿಗ್ಯೂ ಗೊತ್ತಾಗದ ರೀತಿಯಲ್ಲಿ ಆ ಹಂದಿಗಳನ್ನು ಹೊಡೆದನು. ನಿಂಗಪ್ಪನಿಗೆ ಚಿಂತೆ ಶುರುವಾಯಿತು. ಈ ಗುಡಿಯೊಳಗೆ ಹೋಗಿರುವ ಹಂದಿಗಳನ್ನು ಯಾರಾದರು ನೋಡಿದರೆ ನನ್ನ ಕಟ್ಟಿ ಬಡಿತಾರೋ ಅಂತಾ ಚಿಂತೆ ಮಾಡತೊಡಗಿದ. ಆದರೆ ಹಣಮದೇವರ ಗುಡಿಯಲ್ಲಿ ಹಂದಿಗಳು ಹೊಡೆದ್ದನ್ನು ಯಾರು ನೋಡಿರುವುದಿಲ್ಲ. ಅವಾಗಿನಿಂದ ನಿಂಗಪ್ಪ ಅಂಜುತ್ತಲೇ ತಿರುಗ ಹತ್ತಿದ.

ಮತ್ತೊಂದು ದಿನ ಬಂದ ಹಂದಿ ಊರಿಗೆ ಕುಡಿಯುವ ನೀರಿನ ಬಾಂವಿ ಸಂಕರ ಬಾಂವಿಯೊಳಗೆ ಒಂದು ಹಂದಿ ಬಿದ್ದು ಸತ್ತಿತ್ತು. ಆವಾಗ ಊರ ಜನ ನೀರಿಗೆಂದು ಬಾಂವಿಗೆ ಬಂದಾಗ ಅಲ್ಲಿ ಬಾಂವಿಯಲ್ಲಿ ಹಂದಿ ಬಿದ್ದಿರುವುದು ಗೊತ್ತಾಯಿತು. ಕೆಲವೇ ಕ್ಷಣಗಳಲ್ಲಿ ಈ ಸುದ್ದಿ ಊರ ತುಂಬೆಲ್ಲ ಹರಡಿತು. ಈ ಸುದ್ದಿ ನಿಂಗಪ್ಪನಿಗು ತಿಳಿಯುತು. ನಿಂಗಪ್ಪ ಇನ್ನಮುಂದೆ ಊರ ಮಂದಿ ಎಲ್ಲರು ಸೇರಿ ನನ್ನ ಬಿಡೋದಿಲ್ಲ ಎಂದು ತಿಳಿದು ನಿಂಗಪ್ಪ ಒಂದು ಗಿಡಕ್ಕೆ ನೇಣು ಹಾಕಿಕೊಳ್ಳುತ್ತಾನೆ. ಇತ್ತ ಬಾಂವಿಯ ಹತ್ತಿರ ನಿಂತಿದ್ದ ಜನರೆಲ್ಲರು ನಿಂಗ್ಯಾ ಎಲ್ಲಿ ಅದಾನು ನೋಡ್ರಿ ಮಗಾ ಅಂತಿರುತ್ತಾರೆ. ಆವಾಗ ನಿಂಗಪ್ಪ ನೇಣು ಹಾಕಿಕೊಂಡಿರುವುದು ಎಲ್ಲರಿಗು ತಿಳಿಯುತ್ತದೆ. ಆದರೆ ಯಾರು ಸಹ ನಿಂಗಪ್ಪನ ಹೆಣದ ಕಡೆ ಹೋಗುವುದಿಲ್ಲ. ಎಲ್ಲರು ಹಂದಿ ಬಿದ್ದಿರುವ ಬಾಂವಿಯ ಕಡೆಗೆ ಹೋಗುತ್ತಾರೆ.

ಇದರಿಂದ ನಮಗೆ ಬಡವನ ಪ್ರಾಣಕ್ಕೆ ಬೆಲೆಯೇ ಇಲ್ಲವೇನು ಅನಿಸುತ್ತದೆ. ಯಾಕೆಂದರೆ ನಿಂಗಪ್ಪ ಊರ ಜನರಿಗೆ ಅಂಜಿ ನೇಣು ಹಾಕಿಕೊಳ್ಳುತ್ತಾನೆ. ಆದರೆ ಊರಿನ ಜನ ನಿಂಗಪ್ಪನ ಕಡೆ ಯಾರು ನೋಡುವುದೇ ಇಲ್ಲ. ಇದರಿಂದ ತಿಳಿಯುತ್ತದೆ ಹಳ್ಳಿಗಳಲ್ಲಿ ಬಡವರು ಬದುಕುವುದು ಎಷ್ಟು ಕಷ್ಟ ಎಂಬುದು. ಯಾಕೆಂದರೆ ಹಳ್ಳಿಗಳಲ್ಲಿ ಶ್ರೀಮಂತರಿಗೆ ಇದ್ದಷ್ಟು ಬೆಲೆ ಬಡವರಿಗೆ ಇರುವುದಿಲ್ಲ.

ಬಾವಿಯಲ್ಲಿ ಹಂದಿಯೇನು ಬಿತ್ತು. ನಂತರ ಆ ಹಂದಿಯನ್ನು ತೆಗೆದು ನೀರನ್ನು ಶುದ್ಧಿಕರಿಸಿ ಮತ್ತೇ ಆ ನೀರನ್ನು ಉಪಯೋಗಿಸಬಹುದಿತ್ತು. ಆದರೆ ಊರಿನ ಗೌಡ ಆ ಬಾವಿಯನ್ನು ಮುಚ್ಚುವಂತೆ ಮಾಡುತ್ತಾನೆ. ನಂತರ ಕುಡಿಯಲಿಕ್ಕೆ ಪಕ್ಕದ ಊರಿನ ಬಾವಿಯ ನೀರನ್ನು ತರಿಸುತ್ತಾರೆ. ಇದೆಂತಹ ಮೂರ್ಖತನ ಎಂದು ಅನಿಸುತ್ತದೆ. ಕೇವಲ ಒಂದು ಹಂದಿ ಬಿದ್ದಿದ್ದರಿಂದ ಬಾಂವಿಯನ್ನೇ ಮುಚ್ಚಿಸಿ ಬೇರೆ ಕಡೆ ಮತ್ತೊಂದು ಬಾಂವಿಯನ್ನು ತೆಗೆಯುವುದು ಎಂತಾ ಮೂರ್ಖತನ ಅನಿಸುತ್ತದೆ. ಏನೇ ಆಗಲಿ ಈ ಊರಿನ ಜನರೆಲ್ಲ ಬಾವಿ ಕಡೆ ಬಂದು ಬಾವಿಯನ್ನು ಮುಚ್ಚಲಿಕ್ಕೆ ಶುರು ಮಾಡಿದರು ಹೊರತ್ತು ಅತ್ತ ನೇಣು ಹಾಕಿಕೊಂಡ ನಿಂಗಪ್ಪನ ಕಡೆ ಯಾರು ಸಹ ತಿರುಗಿ ನೋಡಲಿಲ್ಲ. ಇದೆಂತಹ ವಿಚಿತ್ರವೆನಿಸುತ್ತದೆ.

“ಈ ಹಂದಿ ಎನ್ನುವ ಕಥೆ ಕೊಂಚ ನಾಟಕೀಯ ಗುಣವನ್ನು ಹೊಂದಿರುವಂತದು. ಈ ಕಥೆಯಲ್ಲಿ ಲೇಖಕರು ಊರಿನ ಗೌಡ ಏನೆ ಮಾಡಿದರು ನಡೆಯುತ್ತದೆ ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. ಯಾಕೆಂದರೆ ಊರಿನ ಗೌಡನನ್ನು ತಿರುಗಿ ಕೇಳುವವರು ಯಾರು ಇರುವುದಿಲ್ಲ. ಗೌಡನನ್ನು ಎದುರಾಕಿಕೊಳ್ಳುವ ಸಾಹಸಕ್ಕೆ ಯಾರು ಹೋಗುವುದು ಮತ್ತು ಹಳ್ಳಿಗಳಲ್ಲಿ ಗೌಡ ಏನೇನು ಮಾಡತಾನೋ ಅದೇ ಕೊನೆ ಎಂಬಂತೆ ನಡೆಯುತ್ತದೆ. ಕಥೆಗಾರನು ಸಹ ಈ ಕಥೆಯಲ್ಲಿ ಗೌಡರ ದರ್ಬಾರದ ಬಗ್ಗೆ ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ”[೧೨]. ಈ ‘ಹಂದಿ’ ಎನ್ನುವ ಕಥೆ ಕೊಂಚ ನಾಟಕಿಯ ಗುಣವನ್ನು ಆಹ್ವಾನಿಸಿಕೊಂಡಿರುವಂತದು.

ಈ ಕಥೆಯಲ್ಲಿ ಲೇಖಕರು ಹೆಚ್ಚಾಗಿ ಅಶ್ಲೀಲ ಮಾತುಗಳನ್ನು ಬಳಸಿಕೊಂಡಿದ್ದಾರೆ ಅನಿಸುತ್ತದೆ. ಲೇಖಕರು ಈ ಕಥೆಯಲ್ಲಿ ಮಾತಿಗೆ ಮಿತಿಯನ್ನು ಇಟ್ಟಿಲ್ಲ ಎನಿಸುತ್ತದೆ. ಆದರೂ ಸಹ ಈ ಕಥೆಯು ಸಂದರ್ಭಕ್ಕೆ ತಕ್ಕಂತೆ ಹೊಂದಾಣಿಕೆಯಿಂದ ಕೂಡಿಕೊಂಡಿದೆ ಅನಿಸುತ್ತದೆ. ಅದಲ್ಲದೇ ಈ ಕಥೆಯಲ್ಲಿ ಬಳಿಸಿರುವ ಎಲ್ಲಾ ಮಾತುಗಳು ಪಕ್ಕಾ ಗ್ರಾಮೀಣ ಶೈಲಿಯನ್ನೆ ಹೋಲುತ್ತವೆ. ಈ ಕಥೆಯಲ್ಲಿ ಅಶ್ಲೀಲ ಮಾತುಗಳು ಹೆಚ್ಚಾಗಿ ಕಂಡು ಬಂದರು ಸಹ ಆ ಮಾತುಗಳು ಸಂದರ್ಭಕ್ಕೆ ತಕ್ಕಂತೆ ಹೊಂದಿಕೆಯಾಗುವಂತೆ ಜೋಡಿಸಿ ಬರೆದಿದ್ದಾರೆ ಅನಿಸುತ್ತದೆ. ಒಟ್ಟಿನಲ್ಲಿ ಈ ಕಥೆಯನ್ನು ಸೊಗಸಾಗಿ ರೋಮಾಂಚನವಾಗಿ ಚಿತ್ರಿಸಿದ್ದಾರೆ.

ಲೇಖಕರು ಈ ಕಥೆಯಲ್ಲಿ ಬಡವ–ಶ್ರೀಮಂತರ ನಡುವೆ ಇರುವಂತ ತಾರತಮ್ಯದ ಬಗ್ಗೆ ಕೂಡಾ ಹೇಳಿದ್ದಾರೆ. ಜೊತೆಗೆ ಶ್ರೀಮಂತರು ಏನನ್ನು ಮಾಡಬಹುದು ಎಂಬಂತೆ ಈ ಕಥೆಯಲ್ಲಿ ತಿಳಿಸಿದ್ದಾರೆ. ಅದಲ್ಲದೇ ಒಬ್ಬ ಧಲಿತ ಮಹಿಳೆ ಇಲ್ಲಿ ಅಸಾಹಾಯಕಳಂತೆ ಕಂಡು ಬರುತ್ತಾಳೆ. ಅವಳು ಗೌಡನನ್ನು ಹೇಳಿದಂತೆ ಕೇಳಬೇಕಾಗುತ್ತದೆ ಎಂಬುದನ್ನು ತಿಳಿಸಿದ್ದಾರೆ. ಆಕಸ್ಮಾತಾಗಿ ಬಡವರು ಗೌಡನ ಮಾತನ್ನು ಮೀರಿದರೆ ಅದರಿಂದ ಏನಾಗುತ್ತದೆ ಎಂಬುದು ಬಸವರಿಗೆ ತಿಳಿದಿರುತ್ತದೆ. ಆದ್ದರಿಂದ ಬಡ ಜನರು ಹಳ್ಳಿಗಳಲ್ಲಿ ಯಾರು ಸಹ ಗೌಡನ ಮಾತನ್ನು ಮೀರುವಂತಿರುವುದಿಲ್ಲ. ಇದರ ಬಗ್ಗೆಯು ಲೇಖಕರು ಈ ಕಥೆಯಲ್ಲಿ ತಿಳಿಸಿದ್ದಾರೆ.

ಹೆಣ್ಣು ಮನಸ್ಸು ಮಾಡಿದರೆ ಏನಬೇಕಾದನ್ನು ಮಾಡಬಹುದು ಎಂಬುದನ್ನು ಸಹ ಲೇಖಕರು ಈ ಕಥೆಯಲ್ಲಿ ತಿಳಿಸಿಕೊಟ್ಟಿದ್ದಾರೆ. ಯಾಕೆಂದರೆ ಲಚ್ಚಿ ಎಂಬ ಹೆಣ್ಣು ಗೌಡನನ್ನೇ ತನ್ನ ಮಾತನ್ನು ಕೇಳುವಂತೆ ಮಾಡಿಕೊಂಡಿರುತ್ತಾಳೆ. ಲಚ್ಚಿ ಏನನ್ನು ಹೇಳಿದರು ಚಾಚು ತಪ್ಪದೇ ಗೌಡನು ಮಾಡುತ್ತಿದ್ದ. ಆ ಊರಿಗೆ ಹಂದಿಗಳು ಬಂದಿರುವುದೇ ಲಚ್ಚಿಯ ಸಲುವಾಗಿ. ಹೀಗಾಗಿ ಗೌಡ ಎಷ್ಟೇ ದೊಡ್ಡವನಾಗಿದ್ದರು ಲಚ್ಚಿಯ ಮಾತನ್ನು ಮೀರುವಂತಿರಲಿಲ್ಲ. ಇದರ ಬಗ್ಗೆಯು ಲೇಖಕರು ಈ ಕಥೆಯಲ್ಲಿ ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ. ಒಟ್ಟಿನಲ್ಲಿ ಈ ಕಥೆಯು ಓದುಗರಿಗೆ ಮನಮುಟ್ಟುವ ರೀತಿಯಲ್ಲಿ ಲೇಖಕರು ಬರೆದಿದ್ದಾರೆ. ಇದರಲ್ಲಿ ಯಾವುದು ಸಹ ಅತಿಯಾಗಿರದೇ ಎಲ್ಲವು ಸಂದರ್ಭಕ್ಕೆ ತಕ್ಕಂತೆ ಕಂಡುಬರುತ್ತದೆ. ಈ ಕಥೆಯು ಗ್ರಾಮೀಣ ಪ್ರದೇಶ ಬದುಕನ್ನು ಕಣ್ಮುಂದೆ ಕೆತ್ತಿದಂತೆ ಲೇಖಕರು ಈ

೧೨. ಡಾ॥ ಪ್ರಹ್ಲಾದ ಅಗಸನಕಟ್ಟೆ : ಉರಿಯ ನಾಲಿಗೆಯ ಕಥೆಗಳು : (ಮುನ್ನುಡಿಯಿಂದ) ಪುಟ ಸಂಖ್ಯೆ : ೧೫

ಕಥೆಯಲ್ಲಿ ಚಿತ್ರಿಸಿದ್ದಾರೆ. ಈ ಕಥೆ ಗ್ರಾಮೀಣ ಜನರಿಗೆ ಮಾತ್ರ ಎಂದೆನಿಸದರೂ ಅದು ಎಲ್ಲರೂ ತಿಳಿದುಕೊಳ್ಳುವಂತಾದ್ದಾಗಿದೆ. ಒಟ್ಟಿನಲ್ಲಿ ಈ ಕಥೆಯಲ್ಲಿ ಹಳ್ಳಿಯ ಬದುಕನ್ನೇ ಓದುಗರ ಮುಂದೆ ತಂದಿದ್ದಾರೆ.

೩.೮ ಕರ್ಪೂರದ ಗಿರಿಯ ಉರಿ :

ಈ 'ಕರ್ಪೂರದ ಗಿರಿಯ ಉರಿ' ಎಂಬ ಕಥೆಯಲ್ಲಿ ಲೇಖಕ **ಕಲ್ಲೇಶ್ ಕುಂಬಾರ್**ರು ಒಂದು ಕರುಣಾಜನಕ ಕಥೆಯನ್ನು ಹೆಣೆದಿದ್ದಾರೆ. ಈ ಕಥೆಯಲ್ಲಿ ಒಬ್ಬ ವೃದ್ಧನ ಜೀವನದಲ್ಲಿ ನಡೆಯುವ ಅನೇಕ ಘಟನೆಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಈ ಕಥೆಯು ಅನೇಕ ವಿಚಿತ್ರ ಘಟನೆಗಳಿಗೆ ಸಾಕ್ಷಿಯಾಗಿದೆ ಎನ್ನಬಹುದು. ಒಬ್ಬ ವೃದ್ಧ ಅನುಭವಿಸಿದ ವೇದನೆಯನ್ನು ಇಲ್ಲಿ ಲೇಖಕರು ಚಿತ್ರಿಸಿದ್ದಾರೆ ಎಂದು ಹೇಳಬಹುದು. ಆ ಮುದುಕ ತನ್ನ ಜೀವನದಲ್ಲಿ ಅನೇಕ ನೋವುಗಳನ್ನು ಅನುಭವಿಸಿ ಮಗಳ ಒಂದು ಕೆಟ್ಟ ಚಟುವಟಿಕೆಯಿಂದ ಮನನೊಂದು ಕೊನೆಗೆ ತನ್ನ ಮೊಮ್ಮಗಳನ್ನು ಕರೆದುಕೊಂಡು ಮನೆ ಬಿಟ್ಟು ಹೋಗುತ್ತಾನೆ. ಹೀಗೆ ಈ ಕಥೆಯಲ್ಲಿ ಬಡತನದಲ್ಲಿ ಬಾಳುವ ಒಬ್ಬ ವೃದ್ಧನ ಕಥೆಯನ್ನು ಲೇಖಕರು ಮನ ಕಲುಕುವ ರೀತಿಯಲ್ಲಿ ವಿವರಿಸಿದ್ದಾರೆ.

ಲಕ್ಕಪ್ಪ ಎಂಬುವ ಒಬ್ಬ ಮುದುಕನ ಜೀವನದಲ್ಲಿ ನಡೆದ ಕಥೆ ಇದಾಗಿದೆ. ಲಕ್ಕಪ್ಪ ಎಂಬ ಒಬ್ಬ ವ್ಯಕ್ತಿ ತಿಪ್ಪವ್ವನನ್ನು ಮದುವೆಯಾಗುತ್ತಾನೆ. ನಂತರ ಈ ಲಕ್ಕಪ್ಪ ತನ್ನ ಸಂಸಾರವನ್ನು ನಡೆಸಲೆಂದು ಹಾರೂಗೇರಿಯಿಂದ ದುಡಿದು ತಿನ್ನಲು ಬೇರೆ ಊರುಗಳಿಗೆ ನಡೆಯುತ್ತಾನೆ. ಹೀಗೆ ದುಡಿಯುತ್ತಾ ಒಂದು ದಿನ ತನ್ನ ಅಜ್ಜಿಯ ಮನೆಗೆ ಬಂದು ಬಿಡುತ್ತಾನೆ. ಅಲ್ಲಿ ಚಂದ್ರವ್ವ ಮುದಿಕೆ ಲಕ್ಕಪ್ಪನನ್ನು ನೋಡಿ ತೆಕ್ಕಿಬಿದ್ದು ಅಳುತ್ತಾಳೆ. ನನ್ನ ಮೊಮ್ಮಗ ಎಲ್ಲೆಲ್ಲಿ ತಿರಗಾಕತ್ಯಾನಂತ ತಿಳಿದು ಚಂದ್ರವ್ವ ಅಲ್ಲಿಯ ತನ್ನ ಗುಡಿಸಿಲನಲ್ಲಿಯೇ ಅವನನ್ನು ಇಟ್ಟುಕೊಳ್ಳುತ್ತಾಳೆ. ಲಕ್ಕಪ್ಪನ ಸಂಸಾರ ಚಂದ್ರವ್ವ ಮುದುಕಿಯ ಗುಡಿಸಿಲಿನಲ್ಲಿಯೇ ಮುಂದುವರೆಯುತ್ತದೆ. ಆಗಲೇ ಲಕ್ಕಪ್ಪನಿಗೆ ಒಂದು ಗಂಡು ಮಗು ಇರುತ್ತದೆ. ಅವನೇ ರಾಮ್ಯಾ. ಹೀಗೆ ಚಂದ್ರವ್ವನ ಗುಡಿಸಿಲಿಗೆ ಬಂದ ಲಕ್ಕಪ್ಪನಿಗೆ ಒಂದು ಕೆಲಸ ಕುಡಿಸಲಿಕ್ಕೆ ಪ್ರಯತ್ನಿಸುತ್ತಾಳೆ. ಆವಾಗ ಚಂದ್ರವ್ವ ಲಕ್ಕಪ್ಪನನ್ನು ಕರೆದುಕೊಂಡು ರುದ್ರ ಗೌಡನ ಹತ್ತಿರ ಕರೆದೊಯ್ಯುತ್ತಾಳೆ. ಚಂದ್ರವ್ವ ರುದ್ರಗೌಡನ ಕಾಲಿಡಿದು ನನ್ನ ಮೊಮ್ಮಗನನ್ನು ಇಲ್ಲಿಯೇ ಚಾಕರಿ ಮಾಡಾಕ ಇಟಕೋರ್ರಿ ಧನಿ ಎಂದು ಕೇಳಿಕೊಳ್ಳುತ್ತಾಳೆ. ಆವಾಗ ಗೌಡ ಲಕ್ಕಪ್ಪನ ಮುಖ ನೋಡಿ ಒಪ್ಪಿಕೊಳ್ಳುತ್ತಾನೆ. ಲಕ್ಕಪ್ಪ ರುದ್ರಗೌಡನ ಕಾಲು ಬೀಳುತ್ತಾನೆ.

ಕೆಲ ದಿನಗಳ ನಂತರ ಲಕ್ಕಪ್ಪನ ಹೆಂಡತಿ ತಿಪ್ಪವ್ವ ಒಂದು ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ. ನಂತರ ಆ ಹೆಣ್ಣುಮಗಳನ್ನು ನೋಡಿದ ಚಂದ್ರವ್ವನಿಗೆ ತನ್ನ ಮಗಳ ನೆನಪಾಗುತ್ತದೆ. ಮುಂದೆ ಆ ಮಗುವಿಗೆ ಬಾಳವ್ವ ಎಂದು ಹೆಸರಿಡುತ್ತಾರೆ. ಇತ್ತ ರಾಮ್ಯಾ ಅದೇ ಊರಲ್ಲಿ ಶಾಲೆಗೆ

ಸೇರುತ್ತಾನೆ. ಹೀಗೆ ಲಕ್ಕಪ್ಪನ ಸಂಸಾರ ಮುಂದುವರೆಯುತ್ತದೆ. ಆದರೆ ರಾಮ್ಯಾನಿಗೆ ಶಾಲೆ ತಲೆಗೆ ಹತ್ತುವುದೇ ಇಲ್ಲ. ಹೀಗಾಗಿ ರಾಮ್ಯಾ ಶಾಲೆಯನ್ನು ಬಿಟ್ಟು ಮೈ ತುಂಬ ಚಟವನ್ನು ಬೆಳೆಸಿಕೊಳ್ಳುತ್ತಾನೆ. ಇದನ್ನು ನೋಡಿದ ಲಕ್ಕಪ್ಪಾ ಹಿಂಗಾದ್ರ ರಾಮ್ಯಾ ಹಾಳಾಗತಾನ ಬಾ ಅಂತಾ ರುದ್ರ ಗೌಡನ ಹತ್ತಿರ ಕರೆದುಕೊಂಡು ಹೋಗುತ್ತಾನೆ.

ಲಕ್ಕಪ್ಪ ರುದ್ರಗೌಡನ ಹತ್ತಿರ ಹೋಗಿ ಆತನ ಕಾಲಿಗೆ ಬಿಳ್ಳುತ್ತಾನೆ. ಧನಿ ಹೆಂಗರ ಮಾಡಿ ನಮ್ಮ ರಾಮ್ಯಾನ ಇಲ್ಲಿಯ ಚಾಕರಿ ಇಟಕೋರ್ರಿ ಎಂದು ಬೇಡಿಕೊಳ್ಳುತ್ತಾನೆ. ಅದಕ್ಕೆ ಗೌಡ ರಾಮ್ಯಾನ ಮುಖ ನೋಡಿ ಇಂವಾ ಕೆಲಸ ಮಾಡಾಂಗಿಲ್ಲ. ಚಟಾ ಮಾಡಾಕತ್ಯಾನು ಇವೆನ ಕೆಲಸ ಮಾಡತಾನು ಲಕ್ಯಾ ಬಿಟ್ಟ ಬಿಡ ಹೋಗಲಿ ಹಾಳಾಗಿ ಎಂದು ಬಿಡುವನು ಗೌಡ. ಅದಕ್ಕೆ ಇಲ್ರಿ ಯಪ್ಪಾ ಅಂವ ಕೆಲಸ ಮಾಡಲಿಕ್ಕೆ ನಾ ಹಚ್ಚತ್ತಿನ್ರಿ, ದಯವಿಟ್ಟು ರಾಮ್ಯಾನನ್ನು ಇಲ್ಲೇ ಚಾಕ್ರಿ ಇಟಕೋರ್ರಿ ಧನಿ ಎಂದಾಗ ರುದ್ರಗೌಡ ಲಕ್ಯಾ ಇವನ ಕಡೆ ನಿನ ಎಚ್ಚರ ವಹಿಸಬೇಕ ನೋಡ ಎಂದು ಹೇಳಿ ರಾಮ್ಯಾನನ್ನು ಚಾಕರಿ ಇಟ್ಟುಕೊಳ್ಳುತ್ತಾನೆ. ಆದರೆ ರಾಮ್ಯಾನಿಗೆ ಚಾಕರಿ ಇರುವುದು ಇಷ್ಟ ಇರುವುದಿಲ್ಲ. ಆದರೂ ಅಪ್ಪನ ಬೆದರಿಕೆಗೆ ಚಾಕರಿಗೆ ನಿಲ್ಲುತ್ತಾನೆ.

ಒಂದೆರಡು ತಿಂಗಳ ನಂತರ ರಾಮ್ಯಾ ರುದ್ರಗೌಡನ ಗಾನದ ಮನೆಯಲ್ಲಿಯ ಬೆಲ್ಲದ ಚಕ್‌ನ್ನು ತುಡಗ ಮಾಡಿ ಅಂಗಡಿಯಲ್ಲಿ ಮಾರಿ ಬಂದ ಹಣವನ್ನು ತಗೊಂಡ ಆ ಊರನ್ನೆ ಬಿಟ್ಟು ಓಡಿ ಹೋಗುತ್ತಾನೆ. ಆದರೆ ಈ ವಿಷಯ ತಿಳಿದ ರುದ್ರಗೌಡ ಲಕ್ಕಪ್ಪನನ್ನು ಕರೆಯಿಸಿ, ಹೊಲ್ಯಾ ಸುಳ್ಳಿಮಗಾ ನಿನ್ನ ಮಗ ಬೆಲ್ಲದ ಚಕ್ ತುಡುಗ ಮಾಡಿ ಓಡಿ ಹೋಗ್ಯಾನ ಅಂತಾ ಹೇಳಿ ಲಕ್ಕಪ್ಪನನ್ನು ಕಟ್ಟಿ ಹಾಕಿ ಬಡಿಯುತ್ತಾನೆ. ಅಲ್ಲದೇ ಲಕ್ಕಪ್ಪನ ಬಾಯಿಗೆ ರುದ್ರಗೌಡ ಚಪ್ಪಲಿಯಿಂದ ಹೇಲನ್ನು ಬಾಯಲ್ಲಿ ಹಾಕುತ್ತಾನೆ. ಈ ಎಲ್ಲ ನೋವನ್ನು ಲಕ್ಕಪ್ಪ ಅನುಭವಿಸುತ್ತಾನೆ. ರಾಮ್ಯಾ ತುಡುಗ ಮಾಡಿದ ಬೆಲ್ಲದ ಚಕ್‌ದ ಹಣವನ್ನು ಲಕ್ಕಪ್ಪನ ದುಡಿತದಲ್ಲಿ ಹಿಡಿದುಕೊಳ್ಳುತ್ತಾರೆ.

ಇಲ್ಲಿ ನಮಗೆ ತಿಳಿಯುವ ಒಂದು ಸಂಗತಿ ಎಂದರೆ ಊರಿನ ಗೌಡರು ಕೆಳಜಾತಿಯ ಜನರನ್ನು ಯಾವ ರೀತಿಯಾಗಿ ನೋಡಿಕೊಳ್ಳುತ್ತಿದ್ದರು ಎಂಬುದನ್ನು ಲೇಖಕರು ತಿಳಿಸಿಕೊಟ್ಟಿದ್ದಾರೆ. ಊರಿನ ಗೌಡ ಆ ಹೊಲೇರ ಲಕ್ಕಪ್ಪನ ಬಾಯಲ್ಲಿ ಹೇಲ ಹಾಕಿ ಬಡಿತ್ತಾರೆ ಅಂದರೆ ಅವರ ದೌರ್ಜನ್ಯ ಎಷ್ಟಿರಬೇಕು ಎಂಬುದು ತಿಳಿಯುತ್ತದೆ. ಅಂದರೆ ಈ ಕೆಳಗಿನ ಜಾತಿಯವರು ಏನರ್ ಸ್ವಲ್ಪ ತಪ್ಪನ್ನು ಮಾಡಿದರೆ ಮೇಲ್ವರ್ಗದ ಜನ ಶ್ರೀಮಂತರು ಯಾವ ರೀತಿಯಾದ ಶಿಕ್ಷೆಯನ್ನು ನೀಡುತ್ತಿದ್ದರು ಎನ್ನುವುದಕ್ಕೆ ಇದೊಂದು ಉದಾಹರಣೆ ನೀಡಿದ್ದಾರೆ ಲೇಖಕರು. ಇಲ್ಲಿ ಊರಿನ ಗೌಡ ಏನೇ ಶಿಕ್ಷೆ ಕೊಟ್ಟರುನು ಸಹ ಆ ಶಿಕ್ಷೆಯನ್ನು ಕೆಳವರ್ಗದವರು ಅನುಭವಿಸಬೇಕಾಗುತ್ತಿತ್ತು ಎಂಬುದನ್ನು ಲೇಖಕರು ಇಲ್ಲಿ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಬಡಜನರ ಬದುಕಿಗೆ ಇಲ್ಲಿ ಯಾರು ಕೇಳುವವರು ಇದ್ದಿದ್ದಿಲ್ಲ ಅನಿಸುತ್ತದೆ. ಮೇಲ್ವರ್ಗದ ಶ್ರೀಮಂತರು ಏನಬೇಕಾದರು ಮಾಡಿದರು ನಡೆಯುತ್ತದೆ ಎಂದು ತಿಳಿಯಬಹುದು.

ಈ ಕಥೆಯಲ್ಲಿ ದಲಿತರು ಯಾವ ರೀತಿಯಾಗಿ ಮೇಲ್ವರ್ಗದವರ ಶೋಷಣೆಗೆ ಒಳಗಾಗುತ್ತಿದ್ದರು ಎಂಬುದನ್ನು ಇಲ್ಲಿ ತಿಳಿಸಿದ್ದಾರೆ.

ಹೀಗೆ ಲಕ್ಕಪ್ಪನ ಸಂಸಾರ ಮುನ್ನಡೆಯುವ ಸಂದರ್ಭದಲ್ಲಿ ಅವನ ಅಜ್ಜಿ ಚಂದ್ರವ್ವ ತೀರಿಕೊಳ್ಳುತ್ತಾಳೆ. ಚಂದ್ರವ್ವ ತೀರಿಕೊಂಡ ನಂತರ ಲಕ್ಕಪ್ಪನಿಗೆ ದಿಕ್ಕು ಕಾಣದಂತಾಗುತ್ತದೆ. ನಂತರ ಕೆಲ ವರ್ಷಗಳ ನಂತರ ಲಕ್ಕಪ್ಪನ ಹೆಂಡತಿ ತಿಪ್ಪವ್ವ ಸಹ ತೀರಿಕೊಳ್ಳುತ್ತಾಳೆ. ತಿಪ್ಪವ್ವ ತೀರಿ ಕೊಂಡಾಗ ಲಕ್ಕಪ್ಪನಿಗೆ ಮುಗಿಲೇ ಕಳಚಿ ಬಿದ್ದಂತಾಗುತ್ತದೆ. ಲಕ್ಕಪ್ಪ ಜೋರಾಗಿ ಅಳುತ್ತಾನೆ. ಆವಾಗ ಪಕ್ಕದ ಮನೆಯವರು ಬಂದು ಲಕ್ಕಪ್ಪನಿಗೆ ಸಮಾಧಾನ ಹೇಳುತ್ತಾರೆ. ನಿನ್ನ ಮಗಳು ಬಾಳವ್ವನ ಮುಖ ನೋಡಿ ಧೈರ್ಯ ತಂದುಕೊಳ್ಳು ಎಂದು ಹೇಳುತ್ತಾರೆ. ಆವಾಗ ಮಗಳ ಮುಖ ನೋಡಿ ಎಲ್ಲ ದುಃಖವನ್ನು ನುಂಗಿಕೊಂಡು ಬದುಕುತ್ತಾನೆ. ಬಾಳವ್ವ ಸಹ ತನ್ನ ತಾಯಿಯ ನೆನಪಾಗಿ ಅಳುತ್ತಾಳೆ. ಇದರಿಂದ ಲಕ್ಕಪ್ಪನಿಗೆ ಹೊಟ್ಟೆಯಲ್ಲಿ ಖಾರ ಕಲಿಸಿದಂತೆ ಆಗುತ್ತದೆ. ಇದನ್ನೆಲ್ಲ ದುಃಖವನ್ನು ನುಂಗಿ ಲಕ್ಕಪ್ಪ ಬದುಕುತ್ತಾನೆ.

ಲಕ್ಕಪ್ಪನ ಗುಡಿಸಲಿನಲ್ಲಿ ಲಕ್ಕಪ್ಪ ಮತ್ತು ಮಗಳು ಬಾಳವ್ವ ಇಬ್ಬರೇ ಉಳಿಯುತ್ತಾರೆ. ಇತ್ತ ಲಕ್ಕಪ್ಪನ ಮಗಾ ರಾಮ್ಯಾ ಸಹ ಊರಬಿಟ್ಟು ಹೋದವನು ತಿರುಗಿ ಬಂದಿರಲಿಲ್ಲ. ಅಲ್ಲದೇ ತಾಯಿ ತೀರಿಕೊಂಡಾಗಲು ಸಹ ರಾಮ್ಯಾ ಬಂದಿರಲಿಲ್ಲ. ಇದನ್ನೆಲ್ಲ ನೆನಪಿಸಕೊಂಡು ಲಕ್ಕಪ್ಪ ದಿನವಿಡಿ ಅಳುತ್ತಿರುತ್ತಾನೆ. ಜೊತೆಗೆ ತನ್ನ ಮಗಳು ಬಾಳವ್ವನಿಗೆ ಧೈರ್ಯ ಹೇಳುತ್ತಾ ಸಂಸಾರ ನಡೆಸುತ್ತಾರೆ. ಇಂತಹ ಸಂದರ್ಭದಲ್ಲಿ ಕೆಲ ದಿನಗಳ ನಂತರ ರಾಮ್ಯಾ ಜೊತೆಯಲ್ಲಿ ಒಬ್ಬ ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾಗಿ ಜೊತೆಯಲ್ಲಿ ಕರೆದುಕೊಂಡು ಬರುತ್ತಾನೆ. ಆವಾಗ ರಾಮ್ಯಾ ಇವಳು ನನ್ ಹೆಂಡತಿ ಎಂದು ಹೇಳುತ್ತಾನೆ. ನಾನು ಬಾಂಬೆಯಲ್ಲಿದ್ದೇನೆ ಎಂದು ಹೇಳುತ್ತಾ ತಂಗಿಗೆ ಒಂದು ಹೊಸ ಬಟ್ಟೆಯನ್ನು ತಂದಿರುತ್ತಾನೆ. ಜೊತೆಗೆ ತಂದೆಎಗೂ ಒಂದು ಹೊಸ ಬಟ್ಟೆಯನ್ನು ತಂದಿರುತ್ತಾನೆ. ಆವಾಗ ರಾಮ್ಯಾ ತಂದೆಯನ್ನು ಕೇಳುತ್ತಾನೆ. ಅಪ್ಪಾ ನೀವು ಇಲ್ಲಿರುವುದು ಬೇಡ ನಡಿರಿ ನನ್ನ ಜೊತೆ ಬಾಂಬೆಗೆ ಹೋಗೋಣ ಎನ್ನುತ್ತಾನೆ. ಆವಾಗ ಲಕ್ಕಪ್ಪನಿಗೆ ಸಿಟ್ಟು ಬಂದು ರಾಮ್ಯಾ ಮಗನಾ ನಾ ಸತ್ತರ ಇಲ್ಲಿಯೇ ಸಾಯುತ್ತೇನೆ. ಹೊರತಾಗಿ ಈ ಹೊಲಗೇರಿ ಬಿಟ್ಟು ಬರುವುದಿಲ್ಲ ಎನ್ನುತ್ತಾನೆ ಲಕ್ಕಪ್ಪ. ಇದರಿಂದ ರೊಚ್ಚಿಗೆದ್ದ ರಾಮ್ಯಾ ತನ್ನ ಹೆಂಡತಿಯ ಕೈ ಹಿಡಿದು ಆ ಮನೆಯಿಂದ ಹೋರ ನಡೆಯುತ್ತಾನೆ. ಅದೇ ಕೊನೆ ಮುಂದೆ ರಾಮ್ಯಾನ ಮುಖವನ್ನು ನೋಡುವುದಿಲ್ಲ.

ಲಕ್ಕಪ್ಪ ಈ ಎಲ್ಲ ದುಃಖದಿಂದ ಕಾಲನ್ನು ಕಳೆಯುವ ಸಂದರ್ಭದಲ್ಲಿ ಯಾರೋ ಒಬ್ಬರು ಬಾಂಬೆಯಲ್ಲಿ ರಾಮ್ಯಾ ರೈಲಿಗೆ ತಲೆಕೊಟ್ಟು ಸತ್ತು ಹೋದ ಎಂದು ಹೇಳುತ್ತಾರೆ. ಈ ಸುದ್ದಿಯನ್ನು ಕೇಳಿದ ಲಕ್ಕಪ್ಪ ಆಕಾಶವೇ ಕಳಚಿ ಬಿದ್ದವರಂತೆ ಗರಬಡಿದು ಕುಂತುಕೊಳ್ಳುತ್ತಾನೆ. ಲಕ್ಕಪ್ಪನಿಗೆ ತನ್ನ ಮಗ ರಾಮ್ಯಾನ ನೆನಪಾಗಿ ದಿನವಿಡಿ ಅಳುತ್ತಾನೆ. ಆದರೆ ಬೆಳೆದು ನಿಂತ ಮಗಳನ್ನು ನೋಡಿ ಎಲ್ಲ ನೋವನ್ನು ಮರೆಯುತ್ತಾನೆ.

ಲಕ್ಕಪ್ಪ ಮಗಳು ದೊಡ್ಡವಳಾದಳೆಂದು ತಿಳಿದು ಮನದಲ್ಲಿ ಕೊರಗುತ್ತಾನೆ. ಮಗಳ ಮದುವೆ ಹ್ಯಾಂಗ ಮಾಡುದೋ ಅಂತಾ ಅದೇ ಚಿಂತೆಯಲ್ಲಿ ಇರುತ್ತಾನೆ. ಅಷ್ಟರಲ್ಲಿ ಒಬ್ಬರು ಪಕ್ಕದ ಊರು ಖೆಮಲಾಪೂರದಿಂದ ಒಂದು ಮನೆತನ ತರುತ್ತಾರೆ. ಲಕ್ಕಪ್ಪ ಸಂತೋಷ ಪಟ್ಟು ಅದೇ ಹುಡುಗನಿಗೆ ಬಾಳವ್ವನನ್ನು ಮದುವೆ ಮಾಡಿ ಕೊಡುತ್ತಾನೆ. ಲಕ್ಕಪ್ಪ ಬಾಳವ್ವನನ್ನು ಮದುವೆ ಮಾಡಿ ಕೊಟ್ಟ ತನ್ನ ಮೇಲಿದ್ದ ಒಂದು ಭಾರವು ಇಳಿದಂತೆ ಆಯಿತು ಎನ್ನುತ್ತಾನೆ. ಆದರೆ ಲಕ್ಕಪ್ಪ ಬಾಳವ್ವನನ್ನು ಮದುವೆ ಮಾಡಿ ಕೊಟ್ಟ ನಂತರ ಇತ್ತ ಲಕ್ಕಪ್ಪ ಒಬ್ಬಂಟಿಯಾಗುತ್ತಾನೆ. ಲಕ್ಕಪ್ಪ ಬಾಳವ್ವನನ್ನು ಸಂತೋಷದಿಂದ ಗಂಡನ ಮನೆಗೆ ಕಳುಹಿಸುತ್ತಾನೆ. ಆದರೆ ಲಕ್ಕಪ್ಪ ಹಿಂದೆ ನಡೆದ ಎಲ್ಲಾ ಘಟನೆಗಳನ್ನು ನೆನೆದು ದುಃಖಿಸುತ್ತಾನೆ. ಲಕ್ಕಪ್ಪನಿಗೆ ಬರುಬರುತ್ತಾ ವಯಸ್ಸು ಆಗತೊಡಗುತ್ತದೆ. ಲಕ್ಕಪ್ಪ ಒಬ್ಬಂಟಿಯಾಗಿ ಗುಡಿಸಿಲಿನಲ್ಲಿ ಕಾಲ ಕಳೆಯುತ್ತಾನೆ.

ಒಂದು ದಿನ ಮಗಳ ಕಡೆಯಿಂದ ಒಂದು ಸಂತೋಷದ ಸುದ್ದಿ ಬರುತ್ತದೆ. ಅದೇನೆಂದರೆ ಮಗಳು ಬಾಳವ್ವ ಬಸುರಿಯಾಗಿದ್ದಾಳೆ. ಈ ಸುದ್ದಿಯನ್ನು ಕೇಳಿದ ಲಕ್ಕಪ್ಪ ತುಂಬಾ ಸಂತೋಷ ಪಡುತ್ತಾನೆ. ಅಲ್ಲದೇ ಈ ಸುದ್ದಿಯನ್ನು ಊರ ತುಂಬೆಲ್ಲಾ ಹೇಳುತ್ತಾನೆ. ನನ್ನ ಮಗಳು ಬಸುರಿ ಆಗ್ಯಾಳು ಅಂತ ಎಲ್ಲ ಕಡೆಯು ತಿಳಿಸುತ್ತಾನೆ. ಕೆಲ ದಿನಗಳ ನಂತರ ಲಕ್ಕಪ್ಪ ಮಗಳನ್ನು ಬಾನಂತನಕ್ಕೆಂದು ತವರಿಗೆ ಕರೆಸುತ್ತಾನೆ. ಲಕ್ಕಪ್ಪ ತನ್ನ ಮನೆಯಲ್ಲಿ ಬಾಳವ್ವನಿಗೆ ತಿನಲಿಕ್ಕೆ ಏನ ಬೇಕೋ ಅದನ್ನೆಲ್ಲ ತಂದುಕೊಟ್ಟು ಬಾಳವ್ವನ ಬಯಕೆಯನ್ನು ತಿರಿಸುತ್ತಾನೆ. ಲಕ್ಕಪ್ಪ ಖುಷಿಪಡುತ್ತಾನೆ. ಒಂದು ದಿನ ಬಾಳವ್ವನಿಗೆ ಕಳಿ ಏಳ್ಳುತ್ತವೆ. ಆವಾಗ ಲಕ್ಕಪ್ಪಾ ಮಾದರ ತಂಗೆವ್ವನನ್ನು ಕರೆಯಿಸಿ ಬಾಳವ್ವನ ಹೇರಗೆ ಮಾಡಿಸುತ್ತಾನೆ. ಬಾಳವ್ವ ಹೆಣ್ಣು ಮಗಳಿಗೆ ಜನ್ಮ ನೀಡುತ್ತಾಳೆ. ಲಕ್ಕಪ್ಪನಿಗೆ ಇದನ್ನು ಕೇಳಿ ತುಂಬಾ ಖುಷಿಪಡುತ್ತಾನೆ. ಕೆಲ ದಿನಗಳ ನಂತರ ಕೂಸಿಗೆ 'ತಾಯವ್ವ' ಎಂದು ಹೆಸರಿಡುತ್ತಾರೆ.

ಲಕ್ಕಪ್ಪ ಮಗಳ ಬಾನಂತನವನ್ನು ಮುಗಿಸಿ ಮತ್ತೆ ಬಾಳವ್ವನನ್ನು ತನ್ನ ಗಂಡನ ಮನೆಗೆ ಕಳುಹಿಸುತ್ತಾನೆ. ಬಾಳವ್ವ ಗಂಡನ ಮನೆಯಲ್ಲಿ ಮಗಳ ಜೊತೆಯಲ್ಲಿ ಸುಖವಾಗಿರುತ್ತಾಳೆ. ಇತ್ತ ಲಕ್ಕಪ್ಪನು ಸಹ ಸಂತೋಷದಿಂದ ಇರುತ್ತಾನೆ. ಹೀಗೆ ಎರಡು – ಮೂರು ವರ್ಷಗಳ ನಂತರ ಬಾಳವ್ವ ತನ್ನ ಮಗಳನ್ನು ಕರೆದುಕೊಂಡು ತವರಿಗೆ ಬರುತ್ತಾಳೆ. ಅವಳ ಜೊತೆಗೆ ಗಂಡನ ಊರಿನ ಹಿರಿಯರು ಬಂದಿರುತ್ತಾರೆ. ಆ ಹಿರಿಯರು ಲಕ್ಕಪ್ಪನನ್ನು ಕರೆಯಿಸಿ ನಿನ್ನ ಮಗಳು ಹಾದಿ ಬಿಟ್ಯಾಳು. ಗಂಡನನ ಬಿಟ್ಟು ಬೆರೆಯುವನ ಸಂಗಾಟ ಅದಾಳು. ಅವಳ ಅನೈತಿಕ ಚಟುವಟಿಕೆ ಊರೆಲ್ಲ ಹಬ್ಬೆದ ಅದಕ್ಕೆ ಈಕೆಯನ್ನು ಬಿಟ್ಟು ಹೋಗಲಿಕ್ಕೆ ಬಂದಿದ್ದೇವೆ ಎಂದು ಹೇಳಿದ ತಕ್ಷಣ ಲಕ್ಕಪ್ಪನಿಗೆ ದಿಗಿಲು ಬಡಿದಂತಾದ ಲಕ್ಕಪ್ಪನ ಸಂತೋಷವೆಲ್ಲಾ ಮಾಯವಾಗುತ್ತದೆ. ಅಂದಿನಿಂದ ಬಾಳವ್ವ ಲಕ್ಕಪ್ಪನಿಗೆ ಮೂಲವಾದಳು.

ಬಾಳವ್ವ ಗಂಡನನ್ನು ಬಿಟ್ಟು ಬಂದು ತವರು ಮನೆ ಸೇರಿದ ನಂತರ ಇಲ್ಲಿಯ ಸಹ ತನ್ನ ಚಾಳಿಯನ್ನು ಬಿಡಲಿಲ್ಲ. ಬಾಳವ್ವ ತವರಿನಲ್ಲಿ ಸಾಬರ ಕೇರಿಯ ಹುಸೇನಿಯೊಂದಿಗೆ ಅನೈತಿಕ ಸಂಬಂಧವನ್ನು ಬೆಳೆಸಿದಳು. ಇದು ಮುಂದುವರೆದಂಗೆ ವಿಕೋಪಕ್ಕೆ ತಿರುಗಿತ್ತು. ಬಾಳವ್ವ ಮನೆಯಲ್ಲಿ ವಯಸ್ಸಾದ ತಂದೆ ಅದಾನು ಮತ್ತು ವಯಸ್ಸಿಗೆ ಬಂದ ಮಗಳು ಅದಾಳು ಅನ್ನುವುದನ್ನು ಲೆಕ್ಕಿಸದೆ ಹುಸೇನಿ ಜೊತೆ ಮನೆಯಲ್ಲಿ ಮಲಗಲು ಶುರುಮಾಡಿದಳು. ಇದರಿಂದ ಲಕ್ಕಪ್ಪನ ಸಿಟ್ಟು ನೆತ್ತಿಗೇರಿತು. ಆದರೆ ಏನು ಮಾಡದಂತೆ ಅಸಹಾಯಕನಾಗಿ ಬಿಟ್ಟ. ದಿನವಿಡಿ ಈ ಚಟುವಟಿಕೆಯನ್ನು ನೋಡುತ್ತಾ ಲಕ್ಕಪ್ಪ ರೋಸಿ ಹೋದ. ಹುಸೇನ ಮನೆಗೆ ಬರಹತ್ತಿನಿಂದ ಲಕ್ಕಪ್ಪ ಮತ್ತು ಮೊಮ್ಮಗಳು ತಾಯವ್ವನ ಹಾಸಿಗೆ ಹೊರಗೆ ಬಂದವು.

ಬಾಳವ್ವನ ಈ ಚಟುವಟಿಕೆ ಪ್ರತಿದಿನ ನಡೆಯು ತೊಡಗಿತು. ಇತ್ತ ಲಕ್ಕಪ್ಪ ಮತ್ತು ತಾಯವ್ವ ಹೊರಗಡೆ ಮಲಗಿಕೊಂಡು ಒಳಗಡೆ ಮಾಡುತ್ತಿದ್ದ ಹುಸೇನ ಮತ್ತು ಬಾಳವ್ವನ ಚಟುವಟಿಕೆಯ ಶಬ್ದವನ್ನು ಕಿವಿಯಿಂದ ಕೇಳುತ್ತಾ ಸಿಟ್ಟಿನಲ್ಲಿ ಹೊರಗಡೆ ಮಲಗುತ್ತಿದ್ದರು. ಆದರೆ ಬಾಳವ್ವ ಏನು ಮಾಡಿದರು ಲಕ್ಕಪ್ಪ ಏನನ್ನು ಮಾಡದ ಸ್ಥಿತಿಯಲ್ಲಿದ್ದ. ಲಕ್ಕಪ್ಪನಿಗೆ ವಯಸ್ಸಾಗಿ ಕೆಲಸ ಮಾಡುವನಂತಾಗಿದ್ದ ಅಲ್ಲದೆ ಲಕ್ಕಪ್ಪನಿಗೆ ಧಮ್ಮು ಸಹ ದಿನವಿಡಿ ಕಾಡುತ್ತಿತ್ತು. ಲಕ್ಕಪ್ಪ ಕೆಮ್ಮುತ್ತ ಕೆಮ್ಮುತ್ತ ತನ್ನ ಹೆಂಡತಿ ತಿಪ್ಪವ್ವನನ್ನು ನೆನೆಸುತ್ತಿದ್ದ. ಆದರೆ ಎಲ್ಲಾ ತೊಂದರೆಗಳನ್ನು ಅನುಭವಿಸುತ್ತಾ ಮೊಮ್ಮಗಳ ಮುಖ ನೋಡಿ ಬದುಕನ್ನು ತಗೆಯುತ್ತಿದ್ದನು. ಮೊಮ್ಮಗಳು ತಾಯವ್ವ ಚಿಂಚಲಿ ಜಾತ್ರೆಗೆ ಕರೆದುಕೊಂಡು ಹೋಗು ಎಂದು ಲಕ್ಕಪ್ಪ ಅಜ್ಜನಲ್ಲಿ ಕೇಳುತ್ತಿದ್ದಳು. ಲಕ್ಕಪ್ಪ ಹಣವಿಲ್ಲದೆ ಮಗಳು ಬಾಳವ್ವ ಹಾಕಿದ ಊಟವನ್ನು ತಿನ್ನುತ್ತ ಹೆಸಿ ಬದುಕನ್ನು ನಡೆಸುತ್ತಿದ್ದ.

ಒಂದು ದಿನ ಲಕ್ಕಪ್ಪ ಮತ್ತು ತಾಯವ್ವ ಇಬ್ಬರು ಊಟಕ್ಕೆ ಕುಳಿತುಕೊಳ್ಳುತ್ತಾರೆ. ಆವಾಗ ಬಾಳವ್ವ ಅವರಿಗೆ ಊಟಕ್ಕೆ ಬಡಿಸುತ್ತಾಳೆ. ಬಾಳವ್ವ ಇಬ್ಬರಿಗೆ ಸ್ವಲ್ಪ ನೀಡುತ್ತಾಳೆ. ಆವಾಗ ಲಕ್ಕಪ್ಪಜ್ಜ ಬಾಳವ್ವ ಇನ್ನಷ್ಟು ಗೊಂಜಾಳ ನುಚ್ಚನ್ನು ಹಾಕು ಎಂದು ಬೇಡುವನು. ಅದಕ್ಕೆ ಬಾಳವ್ವ ಅಷ್ಟೇ ತಿಂದು ಏಳು ಸುಮ್ಮನೆ ಎಂದು ಬೈದಳು. ದುಡ್ಯಾಂಗಿಲ್ಲ ಕಿಸ್ಯಾಂಗಿಲ್ಲ ಎಲ್ಲಿಂದ ಬರತೈತಿ ಮುರಕುಳ ಎಂದು ಬೈದಳು ಬಾಳವ್ವ. ಆಗ ತಾಯವ್ವ ನಡುವೆ ಧ್ವನಿಗುಡಿಸಿ ನಿನೇನು ತಂದ ಹಾಕತಿಯೇನ ಹುಸೇನ ತಂದ ಕೊಡತಾನ ನೀ ಮಾಡಿ ಹಾಕ್ತಿ. ಅಜ್ಜನಿಗೆ ಇನ್ನಷ್ಟು ಹಾಕಲ್ಲಾ ಎಂದಾಗ ಬಾಳವ್ವನಿಗೆ ಸಿಟ್ಟು ಬಂದು ಹಾದರಗಿತ್ತಿ ನನಗ ಮಾತಾಡತಿ ಅಂತ ಅಂದ ಒಡಗಟಕಿಲೇ ತಾಯವ್ವನನ್ನು ಬಡೆಯುತ್ತಾಳೆ. ತಾಯವ್ವ ಜೋರಾಗಿ ಚಿರುತ್ತಾಳೆ. ಲಕ್ಕಪ್ಪಜ್ಜ ಅಗಲಲ್ಲಿ ಕೈ ತಳೆದುಕೊಂಡು ತಾಯವ್ವನನ್ನು ಹಿಡಿದುಕೊಳ್ಳುತ್ತಾನೆ. ಬಾಗವ್ವ ತಾಯವ್ವನಿಗೆ ಬೈಯುತ್ತಾಳೆ. ಹಾದರಗಿತ್ತಿ ಹುಸೇನಿಗೆ ಹೇಳ್ಯಾನ ಗಪ ನಿನ್ನ ಬಾಂಬೆಕ ಒದ್ದ ಗಳಸಾಕ ಇಟ್ಟಬಾ ಅಂತಾ ಹೇಳ್ಯಾನು. ನಿನ್ನ ಬಾಂಬೆಕ ಗಳಸಾಕ ಕಳಿಸ್ತಿನಿ ಎಂದಳು ಬಾಳವ್ವ.

ಈ ಎಲ್ಲಾ ನೋವನ್ನು ಅನುಭವಿಸಿದ್ದ ಲಕ್ಕಪ್ಪ ಇಡೀ ರಾತ್ರಿ ಹೊರಗಡೆ ಮಲಗಿ ಅಳುತ್ತಾ ಮೊಮ್ಮಗಳಿಗೆ ಬಿದ್ದಿರುವ ಬಾಸುನಿಕೆಗಳನ್ನು ನೋಡುತ್ತಾ ದುಃಖಿಸುತ್ತಾನೆ. "ಲಕ್ಕಪ್ಪ ಮನಸ್ಸಿನಲ್ಲಿ ಯೋಚಿಸುತ್ತಾ ಇನ್ಮುಂದೆ ಇಲ್ಲಿದ್ರ ತಾಯವ್ವನನ್ನು ಬಾಂಬೆಕ ಗಳಸಾಕ ಕಳಿಸತಾರೋ ಅಂತ ತಿಳಿದು ಲಕ್ಕಪ್ಪಾ ರಾತ್ರಿ ಸಮಯದಲ್ಲಿ ಮೆಲ್ಲಗೆ ತಾಯವ್ವನನ್ನು ಎಬ್ಬಿಸಿ ತಾಯವ್ವ ನಡಿ ನಾವು ಚಿಂಚಲಿ ಜಾತ್ರೆಗೆ ಹೋಗೋಣ. ನಿನಗ ಅಲ್ಲಿ ತಿನ್ನಲಿಕ್ಕೆ ಕೊಡಿಸುತ್ತೇನೆ ನಡಿ ಮೊಮ್ಮಗಳೆ ಎಂದು ಲಕ್ಕಪ್ಪ ತಾಯವ್ವನನ್ನು ಹಾಸಿಗೆಯಿಂದ ಎಬ್ಬಿಸಿ ರಾತ್ರಿಯಲ್ಲಿ ಮನೆ ಬಿಟ್ಟು ಹೊರಟರು"[೧೩].

"ನೆಮ್ಮದಿಯ ನೋವ ಹುರಿ ಮಾಡಿ
ಆಳುವ ಹದ್ದ
ಕಂಬಕ್ಕೆ ಕಟ್ಟುತ್ತೇವೆ.
ನಾವು ಸೇದುವ ತುಂಡು ಬಿಡಿ
ಬೆಂಕಿಯಿಂದ ಹದ್ದಿನ ಅರಮನೆ ಸುಟ್ಟು
ಹಾಕುತ್ತೇವೆ".

ಈ ಕಥೆಯನ್ನು ಲೇಖಕರು ಓದುಗರ ಮನಮುಟ್ಟುವಂತೆ ರಚಿಸಿದ್ದಾರೆ. ಅದಲ್ಲದೇ ಈ ಕಥೆಯಲ್ಲಿ ನಡು ನಡುವೆ ಅನೇಕ ಬೇರೆ ಬೇರೆ ಹಾಸ್ಯದ ತೆರಸಾಗಿ ಕೆಲವೊಂದು ಘಟನೆಗಳನ್ನು ಮಧ್ಯದಲ್ಲಿ ತಂದಿದ್ದಾನೆ. ತಿಪ್ಪಿಮನಿ ನಿಂಗವ್ವ ಆಗಿರಬಹುದು. ಮತ್ತು ಮಾದರ ಕಲ್ಲವ್ವ ಆಗಿರಬಹುದು. ಈ ರೀತಿ ಅನೇಕ ಹಾಸ್ಯ ಪಾತ್ರಗಳನ್ನು ಲೇಖಕ ಈ ಕಥೆಯಲ್ಲಿ ತಂದಿರುವುದು ಕಂಡು ಬರುತ್ತದೆ. ಈ ಕಥೆಯು ಓದುಗನ ಮನ ಮುಟ್ಟುವ ರೀತಿಯಲ್ಲಿ ಮೂಡಿ ಬಂದಿದೆ ಎಂದರೆ ತಪ್ಪಾಗಲಾರದು.

ಈ ಕಥೆಯನ್ನು ಓದುತ್ತಾ ಹೋದರೆ ಲೇಖಕರು ಈ ಕಥೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಶ್ಲೀಲ ಮಾತುಗಳನ್ನು ಹೆಚ್ಚಾಗಿ ಬಳಸಿದ್ದಾರೆನೋ ಅನಿಸುತ್ತದೆ. ಅಂದರೆ ಲೈಂಗಿಕ ಕ್ರಿಡೆಯಲ್ಲಿ ತೊಡಗುವದಾಗಲಿ ಅಥವಾ ಬಹಿರದೆಸೆಗೆ ಹೋಗುವದಾಗಲಿ ಇಲ್ಲಿ ಆ ಸಂದರ್ಭದಲ್ಲಿ ಬಂದಿರುವ ಮಾತುಗಳು ಅಶ್ಲೀಲತೆಗೆ ಎಡೆ ಮಾಡಿಕೊಟ್ಟಿದ್ದಾರೋ ಅನಿಸುತ್ತದೆ. ಆದರೂ ಸಹ ಈ ಒಂದು ಕಥೆಯಲ್ಲಿ ಪಾತ್ರಕ್ಕೆ ತಕ್ಕಂತೆ ಭಾಷೆಯನ್ನು ಲೇಖಕರು ಬಳಿಸಿದ್ದು ಕಂಡು ಬರುತ್ತದೆ. ಈ ಕಥೆಯಲ್ಲಿ ಜಾತಿಯತೆಯ ಬಗೆಯು ತಿಳಿಸಿ ಕೊಟ್ಟಿದ್ದಾರೆನೋ ಅನಿಸುತ್ತದೆ. ಅಂದರೆ ಕೆಳಜಾತಿಯವರನ್ನು ನೋಡಿಕೊಳ್ಳುವ ರೀತಿಯಾಗಿರಬಹುದು. ಕೆಳಜಾತಿಯವರಿಗೆ ಕೊಡುತ್ತಿರುವ ತೊಂದರೆಗಳಾಗಿರಬಹದು ಇದನ್ನೆಲ್ಲ ನೋಡಿದರೆ ಜಾತಿಯ ಬಗೆಯು ಲೇಖಕರು ತಿಳಿಸಿದ್ದಾರೆ ಎಂದು ಅನಿಸುತ್ತದೆ.

---

೧೩. ಕಲ್ಲೇಶ್ ಕುಂಬಾರ್‌ರು : ಪುರುಷ ದಾರಿಯ ಮೇಲೆ : (ನೊಂದವರ ಹಾಡು) ಪುಟ ಸಂಖ್ಯೆ : ೭

ಈ ಕಥೆಯಿಂದ ನಮಗೆ ಮತ್ತೊಂದು ವಿಷಯ ತಿಳಿಯುವುದೇನೆಂದರೆ ತನ್ನ ಸುಖಕ್ಕಾಗಿ ತಂದೆಯನ್ನು ಮತ್ತು ಮಗಳನ್ನು ಲೆಕ್ಕಿಸದೆ ಕೇವಲ ತನ್ನ ಚಟವೇ ಹೆಚ್ಚಾಯಿತೆನೋ ಎಂದು ತಿಳಿದು ಬರುತ್ತದೆ. ಈ ಕಥೆಯಲ್ಲಿ ಹೊಲೇರ ಜಾತಿಯ ಬಗ್ಗೆ ಅವರ ನಡುವಳಿಕೆ ಬಗೆಯು ಈ ಕಥೆಯಲ್ಲಿ ಲೇಖಕರು ತಿಳಿಸಿದ್ದಾರೆ. ಅದು ಈ ಕಥೆಯಲ್ಲಿ ಅತಿ ಆಗಿದೆ ಏನೋ ಅನಿಸುತ್ತದೆ. ಒಟ್ಟನಲ್ಲಿ ಹೇಳಬೇಕೆಂದರೆ ಈ ಕಥೆಯಲ್ಲಿ ಬರುವ ಎಲ್ಲಾ ಪಾತ್ರಗಳಿಗೆ ಲೇಖಕರು ಜೀವ ತುಂಬಿ ಓದುಗನಿಗೆ ಮನಮುಟ್ಟುವ ರೀತಿಯಲ್ಲಿ ವರ್ಣಿಸಿದ್ದಾರೆ.

೩.೯ ಶಬ್ದದೊಳಗಣ ನಿಶ್ಯಬ್ಧ :

'ಶಬ್ದದೊಳಗಣ ನಿಶ್ಯಬ್ಧ' ಎಂಬ ಈ ಕಥೆಯಲ್ಲಿ ಲೇಖಕ **ಕಲ್ಲೇಶ್ ಕುಂಬಾರ್**ರು ಮುಖ್ಯವಾಗಿ ಮೂರು ಘಟನೆಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಎಂದು ತಿಳಿದು ಬರುತ್ತದೆ. ಒಂದು ಚಂದ್ರವ್ವನ ಬದುಕಿನಲ್ಲಿ ಬಂದೊದಗಿದ ಒಂದು ನಿರಾಶಯ ಭಾವನೆ. ಅದೇನೆಂದರೆ ಅವಳಿಗೆ ದೈಹಿಕ ಸುಖವಿಲ್ಲದೆ ಅವಳೊಬ್ಬಳು ಈ ಕಥೆಯಲ್ಲಿ ಖಂಡಗಲ್ಲಿನಂತೆ ಕಂಡು ಬಂದಿರುವುದು. ಎರಡನೆಯದು ಚಿನ್ನಪ್ಪನ ಸಂಸಾರ ಆತನ ಬದುಕು ತನ್ನ ಸೊಕ್ಕಿನಿಂದ ತಾನೆ ಹಾಳು ಮಾಡಿಕೊಂಡು ತನ್ನ ಸಂಸಾರವನ್ನು ಹಾಳು ಮಾಡಿಕೊಂಡಿರುವುದು. ಮೂರನೆಯದಾಗಿ ಚಿನ್ನಪ್ಪನ ಗೆಳೆಯ ಬಾಬಣ್ಣ ಚನ್ನಪ್ಪನಿಗೆ ಸಹಾಯಕನಾಗಿ ಬಂದಿರುವ ಜೊತೆಗೆ ಚಿನ್ನಪ್ಪನ ಹೆಂಡತಿ ಚಂದ್ರವ್ವನಿಗೆ ಬಾಬಣ್ಣನ ದೇಹಸುಖ ಕೊಡುವಂತೆ ಆಗಿರುವುದು. ಅದು ಗಂಡನ ಮುಂದೆ. ಹೀಗೆ ಈ ರೀತಿಯಾಗಿ ಮೂರು ಘಟನೆಗಳ ಬಗ್ಗೆ ಈ ಕಥೆ ವಿಸ್ತಾರವಾದ ಮಾಹಿತಿಯನ್ನು ಒದಗಿಸುತ್ತದೆ.

ಚಂದ್ರವ್ವ ತಾಯಿಯ ಹತ್ತಿರ ದೊಡ್ಡವಳಾಗುತ್ತಿದ್ದಂತೆ ಚಂದ್ರವ್ವನ ತಾಯಿ ಅವಳಿಗೊಂದು ಮನೆ ನೋಡಿ ಮದುವೆ ಮಡಬೇಕೆಂಬ ಆಸೆ ಹೆಚ್ಚಾಗಿ ಹುಡುಗನನ್ನು ಹುಡುಕಲಿಕ್ಕೆ ನಿಲ್ಲುತ್ತಾಳೆ. ಚಂದ್ರವ್ವನಿಗೆ ತಂದೆ ಯಾರೆನ್ನುವುದು ಗೊತ್ತಿರುವುದಿಲ್ಲ. ಯಾಕೆಂದರೆ ಚಂದ್ರವ್ವನ ತಾಯಿ ವೇಶ್ಯೆಯ ದಂಧೆ ಮಾಡಿ ಜೀವನ ನಡೆಸುತ್ತಿರುತ್ತಾಳೆ. ಚಂದ್ರವ್ವನ ತಾಯಿಯ ಹತ್ತಿರ ದಿನಕೊಬ್ಬರಂತೆ ಬೇರೆ ಬೇರೆ ಗಂಡಸರು ಬಂದು ಹೋಗುತ್ತಿದ್ದರು. ಹೀಗಾಗಿ ಚಂದ್ರವ್ವನ ತಂದೆ ಯಾರು ಎಂಬುದು ಅವಳಿಗೆ ಗೊತ್ತಿರುವುದಿಲ್ಲ. ಹೀಗಾಗಿ ಶಾಮಣ್ಣ ಎಂಬ ವ್ಯಕ್ತಿ ಚಂದ್ರವ್ವನ ತಾಯಿಯ ಹತ್ತಿರ ಹೆಚ್ಚಾಗಿ ಬರುತ್ತಿರುತ್ತಾನೆ. ಅವನೇ ಚಂದ್ರವ್ವನಿಗೆ ಒಂದು ಮನೆಯನ್ನು ತರುತ್ತಾನೆ. ಚಂದ್ರವ್ವ ಕೂಡಾ ಅದಕ್ಕೆ ಒಪ್ಪಿಕೊಂಡು ಬಿಡುತ್ತಾಳೆ. ಶಿವಪ್ಪ ಎಂಬ ಹುಡುಗನ ಜೊತೆ ಚಂದ್ರವ್ವನ ಮದುವೆ ನಡೆಯುತ್ತದೆ. ಆದರೆ ಮದುವೆಯಾಗಿ ಗಂಡನ ಮನೆಗೆ ನಡೆಯಲಿಕ್ಕೆ ಹೋದ ಚಂದ್ರವ್ವನಿಗೆ ಗಂಡನಿಂದ ಯಾವುದೇ ಸುಖ ಸಿಗುವುದಿಲ್ಲ. ಅನೇಕ ದಿನಗಳವರೆಗೆ ಹೀಗೆ ಆಗುತ್ತದೆ. ಒಂದು ದಿನ ಚಂದ್ರವ್ವ ತಾಳಲಾರದೇ ಗಂಡನನ್ನು ಕೇಳಿಯೇ ಬಿಡುತ್ತಾಳೆ. ನೀನ್ಯಾಕೆ ನನ್ನನ್ನು ಮುಟ್ಟುವುದಿಲ್ಲ ಎಂದು. ಅದಕ್ಕೆ ಶಿವಪ್ಪ ಹೇಳುತ್ತಾನೆ ನನಗೆ ಗಂಡಸತನವೇ ಇಲ್ಲ ಎಂದು ಹೇಳುತ್ತಾನೆ. ಅದನ್ನು ಕೇಳಿದ ಚಂದ್ರವ್ವನಿಗೆ ಆಕಾಶ ಕಳಚಿ ಬಿದ್ದಂತಾಗುತ್ತದೆ.

ಯುಗಾದಿಗೆಂದು ಚಂದ್ರವ್ವ ತವರಿಗೆ ಬಂದ ನಂತರ ತಿರುಗಿ ಗಂಡನ ಮನೆಗೆ ಹೋಗುವುದೇ ಇಲ್ಲ. ಆವಾಗ ಚಂದ್ರವ್ವನ ತಾಯಿ ಚಂದ್ರವ್ವನನ್ನು ಸಿಕ್ಕಾಪಟ್ಟೆ ಹೊಡೆಯುವಳು. ಆದರೆ ಕೊನೆಗೆ ಆ ನೋವನ್ನು ತಾಳಲಾರದೇ ಚಂದ್ರವ್ವ ಹೇಳಿಯೇ ಬಿಡುತ್ತಾಳೆ. ಅವ್ವಾ ನನ್ನ ಗಂಡ ಶಿವಪ್ಪನಿಗೆ ಗಂಡಸತನವೇ ಇಲ್ಲ ಎಂದು ಹೇಳಿದಾಗ ತಾಯಿಗೆ ದಿಗಿಲು ಬಡೆದಂತಾಗುತ್ತದೆ. ಆದರೆ ಚಂದ್ರವ್ವನ ತಾಯಿ ಸುಮ್ಮನೆ ಕೂಡದೆ ಶಿವಪ್ಪನಿಂದ ಸೊಡ ಚೀಟಿ ತಂದು ಹಾರೂಗೇರಿಯ 'ಚಿನ್ನಪ್ಪ'ನಿಗೆ ಎರಡನೇಯ ಮದುವೆ ಮಾಡಿ ಉಡಕಿ ಮಾಡಿ ಕೊಡುತ್ತಾಳೆ.

ಚಂದ್ರವ್ವ ಮೊದಲನೆಯ ಗಂಡನಿಂದ ಯಾವುದೇ ಸುಖ ಸಿಗದೇ ಅವನಿಂದ ಬೇರೆಯಾಗಿ ಎರಡನೆಯ ಮದುವೆ ಯಾಗುತ್ತಾಳೆ. ಆದರೆ ಈ ಎರಡನೆಯ ಮದುವೆಯ ಗಂಡ ಚಿನ್ನಪ್ಪನದು ಮೊದಲಿನೆ ಗಂಡನಗಿಂತ ಕೆಟ್ಟದಾಗಿತ್ತು. ಅಂದರೆ ಎರಡನೆಯ ಗಂಡನಿಂದಲು ಚಂದ್ರವ್ವನಿಗೆ ಯಾವ ದೈಹಿಕ ಸುಖ ಸಿಗುವುದಿಲ್ಲ. ಚಿನ್ನಪ್ಪನಿಗೆ ಗಂಡಸತನವು ಇದ್ದರೂ ಅದನನ್ನು ಬೇರೆಯದಕ್ಕೆ ಉಪಯೋಗಿಸುತ್ತಿದ್ದ. ಅಂದರೆ ಚಿನ್ನಪ್ಪ ಮದುವೆಯಾದರು ಸಹ ಹೆಂಡತಿಯ ಜೊತೆಗೆ ಬಾಳ್ವೆ ಮಾಡದೇ ಲಸಮಿ ಎಂಬ ಸೂಳೆಯ ಜೊತೆಗೆ ಸಂಸಾರ ಮಾಡುತ್ತಾನೆ.

ಚಿನ್ನಪ್ಪ ಹರೆಯದ ಕಾಲದಲ್ಲಿ ತುಂಬಾ ಗಟ್ಟಿಮುಟ್ಟಾಗಿ ಇರುತ್ತಾನೆ. ಇತ ಅವಾಗ ಯಾರಿಗೂ ಸಹ ಹೆದರದೆ ತುಂಬಾ ಗರ್ವದಿಂದ ತಿರುಗುತ್ತಿರುತ್ತಾನೆ. ಆ ಸಮಯದಲ್ಲಿ ಅವನಿಗೆ ಯಾರದು ಅಂಜಿಕೆ ಇರುವುದಿಲ್ಲ. ಅದಲ್ಲದೇ ಚಿನ್ನಪ್ಪ ಮನೆಯಲ್ಲಿ ಒಬ್ಬಳು ಹೆಂಡತಿ ಇದ್ದಾಳೆ ಎಂಬುದನ್ನು ಸಹ ಮರೆತ್ತಿರುತ್ತಾನೆ. ಮನೆಯಲ್ಲಿ ಇರುವ ಚಂದ್ರವ್ವನ ಜೊತೆಗೆ ಯಾವುದೇ ಸಂಪರ್ಕ ಇಟ್ಟುಕೊಳ್ಳದೆ ಬರಿ ಲಸಮಿಯ ಜೊತೆಯಲ್ಲಿಯ ಅವರ ಮನೆಯಲ್ಲಿಯೇ ಕಾಲವನ್ನು ಕಳೆಯುತ್ತಿರುತ್ತಾನೆ. ಹೀಗಾಗಿ ಚಂದ್ರವ್ವನಿಗೆ ಯಾವುದೇ ದೇಹ ಸುಖ ಸಿಗುವುದೇ ಇಲ್ಲ. ಇದರಿಂದ ಚಂದ್ರವ್ವ ಮತ್ತಷ್ಟು ನಿರಾಶಯವನ್ನು ಪಡುತ್ತಾಳೆ. ಏಕೆಂದರೆ ಮೊದಲ ಗಂಡನಿಂದಲು ಇದರಿಂದಲೇ ಬೇರೆಯಾಗಿ ಬಂದು ಎರಡನೆಯ ಗಂಡನನ್ನು ಮದುವೆಯಾದರು ಸಹ ಇಲ್ಲಿಯು ಸಹ ಇದೆ ತೊಂದರೆಯನ್ನು ಅನುಭವಿಸುವಂತಾಯಿತು. ಹೀಗಾಗಿ ಚಂದ್ರವ್ವನಿಗೆ ತುಂಬಾನೆ ನಿರಾಶೆಯಾಗಿ ಬಿಡುತ್ತದೆ.

ಚಿನ್ನಪ್ಪನಿಗೆ ತನ್ನ ಮನೆಯ ವಿಚಾರವು ಆತನಿಗೆ ಇರುವುದೇ ಇಲ್ಲ. ಹೀಗಾಗಿಯೇ ಚಿನ್ನಪ್ಪನ ಮೊದಲನೆಯ ಹೆಂಡತಿಯು ಓಡಿ ಹೋಗಿರುತ್ತಾಳೆ. ಅದನನ್ನು ಲೆಕ್ಕಿಸದೆ ಚಿನ್ನಪ್ಪ ಎರಡನೆಯ ಹೆಂಡತಿ ಚಂದ್ರವ್ವನ ಜೊತೆಗೆ ಚೆನ್ನಾಗಿ ಸಂಸಾರ ಮಾಡಬೇಕೆಂಬ ತಿಳುವಳಿಕೆ ಬರುವುದೇ ಇಲ್ಲ. ಅದಲ್ಲದೆ ನಾನು ಹೀಗೆ ಮಾಡಿದರೆ ಮುಂದೆ ಏನಾಗುತ್ತದೆ ಎಂಬ ಚಿಂತೆಯು ಆತನಿಗೆ ಇರುವುದಿಲ್ಲ. ಹೀಗಾಗಿ ಆತ ಒಬ್ಬ ಚಿಂತೆಯಿಲ್ಲದ ಕ್ವಾನಿನ ಹಾಗೆ ಹರಗಾಡುತ್ತಾ ತಿರುಗುತ್ತಿರುತ್ತಾನೆ. ಚಿನ್ನಪ್ಪನಿಗೆ ಕೇವಲ ಲಸಮಿಯು ಜೊತೆಗೆ ಕಾಲ

ಕಳೆಯುವುದರ ಜೊತೆಗೆ ಆತನಿಗೆ ಸೆರೆ ಕುಡಿಯುವ ಚಟವು ಕೂಡಾ ಇರುತ್ತದೆ. ಸಿಗರೇಟು ಸೇದುವ ಚಟ ಹೀಗೆ ಅನೇಕ ಚಟಗಳಿಂದ ತುಂಬಿಕೊಂಡಿರುತ್ತಾನೆ ಚಿನ್ನಪ್ಪ. ಇತ್ತ ಮನೆಯಲ್ಲಿ ರಾತ್ರಿ ಇಡೀ ಒಬ್ಬಂಟಿಯಾಗಿ ಚಂದ್ರವ್ವ ಕಾಲ ಕಳೆಯುತ್ತಿರುತ್ತಾಳೆ. ಆದರೆ ಚಿನ್ನಪ್ಪನಿಗೆ ಚಂದ್ರವ್ವನ ಬಗ್ಗೆ ಯಳ್ಳಷ್ಟು ಚಿಂತೆ ಇರುವುದಿಲ್ಲ. ಚಂದ್ರವ್ವನ ವೇದನೆ ಏನೆಂಬುದು ಚಿನ್ನಪ್ಪನಿಗೆ ತಿಳಿಯದೇ ಹೋಗುತ್ತದೆ. ಚಿನ್ನಪ್ಪನಿಗೆ ಇದ್ಯಾವುದು ಲೆಕ್ಕಕಿಲ್ಲದೇ ಕೇವಲ ತನ್ನ ಸುಖ ಮಾತ್ರ ಅವನಿಗೆ ಹೆಚ್ಚು ಎಂಬಂತ ಲಸಮಿಯ ಮನೆಯಲ್ಲಿ ತನ್ನ ಸುಖವನ್ನು ಅನುಭವಿಸುತ್ತಾ ಅಲ್ಲೇ ಬಿದ್ದಿರುತ್ತಾನೆ.

ಚಿನ್ನಪ್ಪನಿಗೆ ಎಲ್ಲಿ ನಾನು ಚಂದ್ರವ್ವನಿಗೆ ಮೋಸ ಮಾಡುತ್ತಿದ್ದೇನೆ ಅನಿಸುವುದೇ ಇಲ್ಲ. ಇದರ ಪಾಪವೆನೋ ಎಂಬಂತೆ ಚಿನ್ನಪ್ಪ ಮುಂದೆ ಪಶ್ಚಾತ್ತಾಪ ಅನುಭವಿಸುತ್ತಾನೆ. ಅದೇನೆಂದರೆ ಚಿನ್ನಪ್ಪನಿಗೆ ವಾಸಿಯಾಗದ ರೋಗ ಬಂದು ಆತನ ದೇಹದೊಳಗೆ ಸೇರಿ ಬಿಡುತ್ತದೆ. ಆದರೆ ಇದು ಚಿನ್ನಪ್ಪನಿಗೆ ತಿಳಿಯುವುದೇ ಇಲ್ಲ. ಚಿನ್ನಪ್ಪ ನನ್ನನ್ನು ಯಾರು ಕೇಳುವವರಿಲ್ಲ ಎಂಬಂತೆ ಗರ್ವದಿಂದ ತಿರುಗುತ್ತಿರುತ್ತಾನೆ. ಈ ಗರ್ವ ಅಹಂಕಾರ ಬಹಳ ದಿನ ನಡೆಯೊದಿಲ್ಲ. ಏಕೆಂದರೆ ಚಿನ್ನಪ್ಪನಿಗೆ ತಿಳಿಯದ ಹಾಗೇ ಆತನ ದೇಹದೊಳಗೆ ವಾಸಿಯಾಗದ ರೋಗವೊಂದು ಬಂದು ಸೇರಿರುತ್ತದೆ. ಚಿನ್ನಪ್ಪನ ಆರೋಗ್ಯ ದಿನದಿಂದ ದಿನಕ್ಕೆ ಸೋರಗುವಂತೆ ಮಾಡುತ್ತದೆ. ಚಿನ್ನಪ್ಪನು ಮಾಡಿದ ತಪ್ಪಿಗೆ ತಾನೇ ಶಿಕ್ಷೆ ಅನುಭವಿಸಿದ.

'ಯಾರು ಉಪ್ಪು ತಿನ್ನುತ್ತಾರೋ ಅವರು ನೀರು ಕುಡಿಯಲೆ ಬೇಕು' ಎಂಬಂತೆ ಚಿನ್ನಪ್ಪ ಮಾಡಿದ ತಪ್ಪಿನಿಂದ ಮುಂದೆ ಅವನೇ ಆ ವೇದನೆಯನ್ನು ಅನುಭವಿಸಬೇಕಾಯಿತು. ಅಂದರೆ ಚಿನ್ನಪ್ಪ ಮನೆಯಲ್ಲಿ ಹೆಂಡತಿ ಇದ್ದರು ಲೆಕ್ಕಿಸದೆ ಅವನು ಬೇರೊಂದು ಹೆಣ್ಣಿನ ಸಹವಾಸ ಮಾಡಿದ ತಪ್ಪಿಗಾಗಿ ಚಿನ್ನಪ್ಪನ ಇಡೀ ಜೀವನ ನರಕದ ಯಾತನೆಯಾಗಿ ಬಿಟ್ಟಿತು. ಅದು ಹೇಗೆಂದರೆ ಚಿನ್ನಪ್ಪ ಸಹವಾಸ ಮಡಿದ ಹೆಣ್ಣು ಲಸಮವ್ವಾ ಸುಳೆ. ಅವಳು ಬಾಂಬೆಯಲ್ಲಿ ದಂದೆ ಮಾಡಿ ಬಂದವಳು. ಅವಳು ದಂದೆ ಮಾಡುವ ಸಮಯದಲ್ಲಿ ಅವಳಿಗೆ ಆ ಮಾರಕ ರೋಗ ಅವಳಿಗೆ ಅಂಟಿಕೊಂಟಿದ್ದು, ಆ ರೋಗ ಅವಳಿಗೆ ಇರುವುದು ಗೊತ್ತಿರಲಾರದೆ ಚಿನ್ನಪ್ಪ ಅವಳ ಸಹವಾಸ ಮಾಡುತ್ತಾನೆ. ಆ ಲಸಮಿ ಸಹವಾಸದಿಂದ ಅವಳಲ್ಲಿದ್ದ ಆ ಮಾರಕ ರೋಗ ಈ ಚಿನ್ನಪ್ಪನಿಗೂ ಬಂದು ಆತನ ದೇಹ ಸೇರಿಕೊಳ್ಳುತ್ತದೆ. ಆ ಮಾರಕ ರೋಗ ಚಿನ್ನಪ್ಪನ ದೇಹದಲ್ಲಿ ಪ್ರವೇಶ ಮಾಡಿದ್ದರಿಂದ ದೇಹ ಸೊರಗ ಹತ್ತಿತು. ಇದರಿಂದ ಚಿನ್ನಪ್ಪನಿಗೆ ಪದೇ ಪದೇ ಆರಾಮ ತಪ್ಪಲಾರಂಬಿಸಿತು. ಲಸಮಿಗೆ ಈ ವಿಷಯ ತಿಳಿಯಿತು. ಇವನಿಗೂ ಈ ರೋಗ ಸೇರಿಕೊಂಡಿದೆ ಎಂದು ತಿಳಿದ ತಕ್ಷಣ ಲಸಮಿ ಚಿನ್ನಪ್ಪನನ್ನು ತನ್ನ ಮನೆಯಿಂದ ಹೊರ ಹಾಕಿದಳು.

ಲಸಮಿಯ ಮನೆಯಿಂದ ಹೊರಬಿದ್ದ ಚಿನ್ನಪ್ಪ ನೇರವಾಗಿ ತನ್ನ ಮನೆಗೆ ಬಂದುಬಿಟ್ಟ. ಆವಾಗ ಚಂದ್ರವ್ವ ಚಿನ್ನಪ್ಪನ ರೂಪವನ್ನು ನೋಡಿ ಕಣ್ಣಲ್ಲಿ ನೀರು ತಂದಳು. ಏನಾದರು ಆಗಲಿ ಹೆಂಡತಿ ಹೆಂಡತಿ ತಾನೆ. ಲಸಮಿ ಚಿನ್ನಪ್ಪನನ್ನು ಹೊರಹಾಕಿದರೆ ಚಂದ್ರವ್ವ ಮಾತ್ರ ಚಿನ್ನಪ್ಪನನ್ನು ಮನೆಯಲ್ಲಿ ಕರೆದುಕೊಂಡು ಗಂಡನ ಆರೈಕೆ ಮಡಹತ್ತಿದಳು. ಅಷ್ಟರಲ್ಲಿ ಚಿನ್ನಪ್ಪನ ದೇಹ ಒನಗಿ ಹಂಚಿನಂತೆ ಆಯಿತು. ಚಿನ್ನಪ್ಪನ ದೇಹದಲ್ಲಿ ಬರಿ ಎಲುಬುಗಳು ಮಾತ್ರ ಕಾಣ ಹತ್ತಿದ್ದವು. ಇದರಿಂದ ತೀರಾ ನೊಂದಿ ಹೋದಳು ಚಂದ್ರವ್ವ. ಯಾಕೆಂದರೆ ನನ್ನ ಗಂಡನಿಗೆ ಈ ಸ್ಥಿತಿ ಬಂತಲ್ಲ ಎಂದು ಚಂದ್ರವ್ವ ದುಃಖಿಸಿದಳು.

ಚಿನ್ನಪ್ಪನಿಗೆ ಈಗ ತಿಳಿಯಲು ಹತ್ತಿತು. ಹೆಂಡತಿ ಎಂದರೆ ಹೇಗೆ. ಬೇರೆ ಹೆಣ್ಣು ಸುಳೆ ಎಂದರೆ ಹೇಗ ಎಂಬುದು ಈಗ ತಿಳಿಯಲು ಹತ್ತಿತು. ಆದರೆ ಕಾಲ ಮಿಂಚಿಹೊಗಿತ್ತು. ಆವಾಗ ಏನನ್ನು ಮಾಡದ ಸ್ಥಿತಿಯಲ್ಲಿತ್ತು. ಯಾಕೆಂದರೆ ಆಗಲೇ ಆ ಮಾರಕ ರೋಗ ಚಿನ್ನಪ್ಪನ ದೇಹವನ್ನು ಪ್ರವೇಶಿಸಿ ಚಿನ್ನಪ್ಪನ ದೇಹವನ್ನೆಲ್ಲ ನುಂಗಿ ಬಿಟ್ಟಿತು. ಈ ರೋಗಕ್ಕೆ ಔಷಧಿ ಇಲ್ಲವಾಗಿದೆ. ಆದ್ದರಿಂದ ಇದೊಂದು ಮಾರಕ ರೋಗವೆನ್ನಬಹುದು. ಈ ರೋಗ ಒಮ್ಮೆ ದೇಹವನ್ನು ಸೇರಿಕೊಂಡರೆ ಮುಗಿಯಿತು. ಸಾವಿನ ಪದರಿನಲ್ಲಿದ್ದಂತೆ. ಈ ಪರಿಸ್ಥಿತಿ ಚಿನ್ನಪ್ಪನಿಗೂ ಆಗಿತ್ತು. ಚಿನ್ನಪ್ಪ ಬರಬರುತ್ತಾ ಸಂಪೂರ್ಣವಾಗಿ ಸೊರಗಿ ಹೋದ. ಚಿನ್ನಪ್ಪನಿಗೆ ಅದರ ಜೊತೆಗೆ ಅನೇಕ ಬೇರೆ ಬೇರೆ ಕಾಯಿಲೆಗಳು ಬರಹತ್ತಿದವು. ಚಿನ್ನಪ್ಪನಿಗೆ ದಮ್ಮು ಹೆಚ್ಚಾಯಿತು. ಮತ್ತು ಉಸಿರಾಟದ ತೊಂದರೆಯು ಹೆಚ್ಚಾಯಿತು. ಹೀಗಾಗಿ ಚಿನ್ನಪ್ಪ ಅನೇಕ ಕಾಯಿಲೆಗಳಿಂದ ನರಳುತ್ತಿದ್ದನು ಹಾಗೂ ತೊಂದರೆ ಅನುಭವಿಸ ಹತ್ತಿದ.

ಚಿನ್ನಪ್ಪನಿಗೆ ಈ ಎಲ್ಲಾ ತೊಂದರೆಗಳು ಕಾಣಿಸ ತೊಡಗಿದವು. ಆದರೆ ಆತನ ಹೆಂಡತಿ ಚಂದ್ರವ್ವ ಮಾತ್ರ ಗಂಡನ ವ್ಯವಸ್ಥೆಯನ್ನು ಮಾಡುವುದು ಬಿಡಲಿಲ್ಲ. ಚಂದ್ರವ್ವ ಗಂಡನ ಆರೈಕೆಯಲ್ಲಿ ತೋಡಗಿದಳು. ಇದನ್ನು ನೋಡಿದ ಚಿನ್ನಪ್ಪನಿಗೆ ಚಂದ್ರವ್ವನ ಬಗ್ಗೆ ಏನೋ ಕಣಿಕರ ಹುಟ್ಟುಕೊಳ್ಳಾರಂಭಿಸಿತು. ಚಿನ್ನಪ್ಪನ ಮನಸ್ಸಿನಲ್ಲಿ ನಾನು ಚಂದ್ರವ್ವನಿಗೆ ಮೋಸ ಮಾಡಿದೆ ಎನಿಸಿತು. ಯಾಕೆಂದರೆ ನಾನು ಯೌವನದಲ್ಲಿದ್ದಾಗ ಚಂದ್ರವ್ವನಿಗೆ ದೇಹ ಸುಖ ಕೊಡುವದಾಗಲಿಲ್ಲ. ಆದರೆ ನಾನು ಮಾಡಬಾರದ ಕೆಲಸ ಮಾಡಿ ನಾನು ಈ ಸ್ಥಿತಿಗೆ ಬಂದಿದ್ದೇನೆ ಎಂದು ಚಿನ್ನಪ್ಪ ತನ್ನ ಮನಸ್ಸಿನಲ್ಲಿಯೇ ಅಂದುಕೊಂಡ. ಚಿನ್ನಪ್ಪನಿಗೆ ತಾನು ತಪ್ಪು ಮಾಡಿರುವುದು ಈಗ ಅರಿವಿಗೆ ಬಂತು. ಆದರೆ ಕಾಲ ಮಿಂಚಿ ಹೋಗಿತ್ತು.

ಚಿನ್ನಪ್ಪನಿಗೆ ಬಂದಿರುವ ಈ ಪರಿಸ್ಥಿತಿಯನ್ನು ಆತನ ಸ್ನೇಹಿತರೆಲ್ಲರು ವಿಚಾರಿಸಿದರು. ಅದರಲ್ಲಿ ಚಿನ್ನಪ್ಪನ ಖಾಸಾ ಆತ್ಮೀಯ ಸ್ನೇಹಿತ 'ಬಾಬಣ್ಣ' ಮಾತ್ರ ಚಿನ್ನಪ್ಪನ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದನು. ಬಾಬಣ್ಣ ಪ್ರತಿದಿನ ಚಿನ್ನಪ್ಪನ ಮನೆಗೆ ಬಂದು ವಿಚಾರಿಸಿ ಹೋಗುತ್ತಿದ್ದ. ಆದರೆ ಚಿನ್ನಪ್ಪ ಮಾತ್ರ ಯಾವುದೇ ಪಂತಿಯನ್ನು ಪಾಲಿಸುತ್ತಿರಲಿಲ್ಲ. ಚಿನ್ನಪ್ಪ ಮಾತ್ರ ತಿನ್ನಲಿಕ್ಕೆ ಅನೇಕ ಪದಾರ್ಥಗಳನ್ನು

ಬೇಡುತ್ತಿದ್ದ. ಚಿನ್ನಪ್ಪನಿಗೆ ಭಜಿ ಎಂದರೆ ಪಂಚಪ್ರಾಣ. ಅವನಿಗೆ ಅಷ್ಟೊಂದು ದಮ್ಮು ಇದೆ ಎಂದು ಗೊತ್ತಿದ್ದರು ಆತ ಬಜಿ ತಿನ್ನಲಿಕ್ಕೆ ಹೋಟೆಲಿಗೆ ಹೋಗುತ್ತಿದ್ದ. ಹೋಟೆಲಿಗೆ ಹೋಗುವಾಗ ಆತನಿಗೆ ಅನೇಕ ಸ್ನೇಹಿತರು ಹಿತೈಸಿಗಳು, ಅನೇಕ ಪರಿಚಯಸ್ಥರು ಗಂಟು ಬೀಳುತ್ತಿದ್ದರು. ಆದರೆ ಚಿನ್ನಪ್ಪನಿಗೆ ಅವರ ಸಂಗಡ ಮಾತನಾಡುತ್ತಿರಲಿಲ್ಲ. ಯಾಕೆಂದರೆ ಆತನ ದೇಹದ ಸ್ಥಿತಿಯನ್ನು ಕಂಡು ಅವರು ಅಸುಹೆ ಪಡುತ್ತಾರೆ ಎಂದು.

ಹೀಗೆ ಚಿನ್ನಪ್ಪನ ಪರಿಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಾ ಹೋಗುತ್ತದೆ. ಆದರೆ ಬಾಬಣ್ಣ ಮಾತ್ರ ಚಿನ್ನಪ್ಪನನ್ನು ವಿಚಾರಿಸಲು ಅವನ ಮನೆಗೆ ಬರುತ್ತಿರುತ್ತಾನೆ. ಬಾಬಣ್ಣ ಆತನ ಮನೆಗೆ ಬಂದು ಸಮಾಧಾನ ಹೇಳಿ ಹೋಗುತ್ತಿರುತ್ತಾನೆ. ಇತ್ತ ಚಂದ್ರವ್ವ ಮಾತ್ರ ಚಿನ್ನಪ್ಪನ ಆರೈಕೆಯಲ್ಲಿ ತೊಡಗಿರುತ್ತಾಳೆ. ಚಂದ್ರವ್ವ ತನ್ನ ಗಂಡನ ಪರಿಸ್ಥಿತಿಯನ್ನು ನೋಡಿ ದಿನ ನಿತ್ಯ ಕಣ್ಣೀರನ್ನು ಹಾಕುತ್ತಾಳೆ. ಚಂದ್ರವ್ವನನ್ನು ನೋಡಿ ಚಿನ್ನಪ್ಪನಿಗೂ ಕನಿಕರ ಮೂಡುತ್ತದೆ. ಆವಾಗ ತಿಳಿಯುತ್ತದೆ ಇದಕ್ಕೆಲ್ಲ ಕಾರಣ ನಾನೇ. ನಾನು ಚೆನ್ನಾಗಿದ್ದರೆ ನನಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ ಎಂದುಕೊಳ್ಳುತ್ತಿದ್ದ. ಚಿನ್ನಪ್ಪ ಏನೇ ಆದರು ಸಹ ಕಾಲ ಮಿಂಚಿ ಹೋಗಿದೆ ಇನ್ನು ನಾನು ಬಹಳ ದಿನ ಬದುಕವುದಿಲ್ಲವೆಂದು. ಆದರು ಕೂಡಾ ಚಿನ್ನಪ್ಪನ ಸ್ನೇಹಿತ ಬಾಬಣ್ಣ ಚಿನ್ನಪ್ಪನನ್ನು ದವಾಖಾನೆಗೆಂದು ಬಿಜಾಪುರಕ್ಕೆ ಕರೆದೊಯುತ್ತಾನೆ. ಅವರ ಜೊತೆಗೆ ಚಂದ್ರವ್ವನು ಹೋಗುತ್ತಾಳೆ. ಬಿಜಾಪುರದಲ್ಲಿ ಡಾಕ್ಟರರು ಎಲ್ಲಾ ಚೆಕ್ ಮಾಡಿ ಕೊನೆಗೆ ಹೇಳುತ್ತಾರೆ. ಇವನು ಇನ್ನೂ ಬಹಳ ದಿನ ಬದುಕುವುದಿಲ್ಲ. ಇವನನ್ನು ದವಾಖಾನೆಗೆ ತೋರಿಸಿ ಹಣ ಕಳೆದುಕೊಳ್ಳಬೇಡಿ ಎಂದು ಡಾಕ್ಟರರು ಹೇಳಿದಾಗ ಚಿನ್ನಪ್ಪನನ್ನು ಮತ್ತೆ ಮನೆಗೆ ಕರೆದುಕೊಂಡು ಬರುತ್ತಾರೆ.

ಚಿನ್ನಪ್ಪನನ್ನು ಚಂದ್ರವ್ವ ಮನೆಯಲ್ಲಿ ಒಳ್ಳೆಯ ರೀತಿಯಿಂದ ನೋಡಿಕೊಳ್ಳುತ್ತಾಳೆ. ಅವನಿಗೆ ನೋವಾಗದಂತೆ ಚಿನ್ನಪ್ಪನನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ಒಂದು ದಿನ ಚಂದ್ರವ್ವ ಹೊಲಕ್ಕೆ ಗೊಂಜಾಳ ಕಿಳಲು ಕೆಲಸಕ್ಕೆ ಹೋದಾಗ ಮನೆಯಲ್ಲಿ ಚಿನ್ನಪ್ಪ ಒಬ್ಬನೆ ಇರುತ್ತಾನೆ. ಚಿನ್ನಪ್ಪ ಎದ್ದು ಎಲ್ಲಕಡೆ ಹುಡುಕುತ್ತಾನೆ. ಅವನಿಗೆ ೫ ರೂಪಾಯಿ ಸಿಗುತ್ತದೆ. ಅದನ್ನು ತೆಗೆದುಕೊಂಡು ಹೋಗಿ ಬಜಿ ತಿಂದು ಬರಬೇಕೆಂದು ಹೊರಗಡೆ ಬರುತ್ತಾನೆ. ಹೊರಗಡೆ ಬಂದಾಗ ಅನೇಕ ಸ್ನೇಹಿತರು ಭೆಟ್ಟಿಯಾಗುತ್ತಾರೆ. ಆದರೆ ಚಿನ್ನಪ್ಪ ಅವರೊಂದಿಗೆ ಅಷ್ಟಕಷ್ಟೇ ಮಾತನಾಡುತ್ತ ಒಂದು ಹೋಟೆಲಿಗೆ ಹೋಗಿ ಬಜಿ ತಿಂದು ಮರಳಿ ಮನೆಯ ಕಡೆಗೆ ಬರುತ್ತಾನೆ. ದಾರಿಯಲ್ಲಿ 'ಗಿರೆವ್ವ' ಮುದುಕಿ ಚಿನ್ನಪ್ಪನನ್ನು ನೋಡಿ ಏನಪಾ ಆರಾಮ ಇದ್ದೀಯೇನ ಎಂದು ಕೇಳುತ್ತಾಳೆ. ಚಿನ್ನಪ್ಪನು ಕೂಡಾ ಆ ಮುದುಕಿಗೆ ನಾನು ಆರಾಮವಾಗಿದ್ದೇನೆ. ಎಂದು ಸುಳ್ಳು ಹೇಳುತ್ತಾನೆ. ಆ ಮುದುಕಿ ಹೇಳಿದಳು ನೀನು ಹರೆಯದ ವಯಸ್ಸಿನಲ್ಲಿದ್ದಾಗ ಏನೆಲ್ಲಾ ಮಾಡಿದ್ದಿ ಅಂತಾ ತಿಳಿಯಿತು. ಆದರೆ ಚಂದ್ರವ್ವನಿಗೆ ಸುಖ ನೀಡಲಿಲ್ಲ. 'ಭೂಮಿಗೆ ಮಳೆ ಹೇಗೆ ಅಗತ್ಯವೋ' ಹಾಗೇ ಹೆಣ್ಣಿಗೆ ದೇಹ ಸುಖ ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ನಿನ್ನಿಂದ ಚಂದ್ರವ್ವ ದೇಹ ಸುಖವನ್ನು ಅನುಭವಿಸಲಿಲ್ಲ ಎಂದಳು. ಇದನ್ನೆಲ್ಲಾ ಕೇಳಿ ಚಿನ್ನಪ್ಪ ಮರಳಿ ಮನೆಗೆ ಬಂದನು.

ಮನೆಗೆ ವಾಪಸಾಗಿ ಬಂದ ಚೆನ್ನಪ್ಪ ಒಂದು ಮೂಲೆಯಲ್ಲಿ ಕುಳಿತು 'ಗಿರೆವ್ವ' ಮುದುಕಿ ಹೇಳಿದ ಮಾತನ್ನು ನೆನೆಸಿಕೊಂಡು 'ಭೂಮಿಗೆ ಮಳೆ ಎಷ್ಟು ಅವಶ್ಯಕವೋ' ಹೆಣ್ಣಿಗೆ ಗಂಡಸನ ದೇಹ ಸುಖ ಅಷ್ಟೇ ಮುಖ್ಯ ಎಂಬ ಮಾತು ಚೆನ್ನಪ್ಪನನ್ನು ಕೊರೆಯ ಹತ್ತಿತು. ನನ್ನ ಹೆಂಡತಿ ಚಂದ್ರವ್ವ ಸ್ವಭಾವದಲ್ಲಿ ಬಹಳ ಒಳ್ಳೆಯವಳು. ನಾನು ಅವಳಿಗೆ ಮೋಸ ಮಾಡಿದ್ದೇನೆ. ಅದಕ್ಕಾಗಿ ಚೆನ್ನಪ್ಪ ಮನದಲ್ಲಿಯೇ ಮರಗುತ್ತಿರುತ್ತಾನೆ. ಅಷ್ಟರಲ್ಲಿ ಅವನ ಮನೆಗೆ ಬಾಬಣ್ಣ ಔಷಧಿ ತೆಗೆದುಕೊಂಡು ಬರುತ್ತಾನೆ. ಆವಾಗ ಚೆನ್ನಪ್ಪ ತನ್ನ ಮನಸ್ಸಿನಲ್ಲಿ ಇದ್ದ ನೋವನ್ನು ತನ್ನ ಗೆಳೆಯನ ಮುಂದೆ ಹೇಳುತ್ತಾನೆ. ಆಗ ಬಾಬಣ್ಣನನ್ನು ಮುಂದೆ ಕರೆದು ನನಗೆ ಸಹಾಯ ಮಾಡಬೇಕು ಅಂತಾ ಆಣೆ ಹಾಕಿಸಿಕೊಳ್ಳುತ್ತಾನೆ. ಅದಕ್ಕೆ ಬಾಬಣ್ಣ ಒಪ್ಪಿಕೊಳ್ಳುತ್ತಾನೆ. ಆವಾಗ ಚೆನ್ನಪ್ಪ ಹೀಗೆ ಹೇಳುತ್ತಾನೆ. ನೀನು ನನ್ನ ಹೆಂಡತಿಗೆ ದೇಹ ಸುಖ ಕೊಡಬೇಕು ಎಂದು ಸ್ನೇಹಿತನಲ್ಲಿ ಅಂಗಲಾಚಿ ಕೇಳಿಕೊಳ್ಳುತ್ತಾನೆ ಹಾಗೂ ಹೆಂಡತಿಗೂ ಕೂಡಾ ಹೆಂಡತಿಯನ್ನು ಕರೆದು ನಿನಗೆ ನಾನು ಮೋಸ ಮಾಡಿದ್ದೇನೆ. ನಿನ್ನನ್ನು ಮದುವೆಯಾದ ಮೇಲೆ ಯಾವ ಸುಖವನ್ನು ಕೊಟ್ಟಿಲ್ಲಾ. ಅದಕ್ಕೆ ದಯವಿಟ್ಟು ನೀನು ನನ್ನ ಸ್ನೇಹಿತ ಜೊತೆ ಕೂಡಿ ದೇಹದ ಸುಖವನ್ನು ತಿರಿಸಿಕೋ ಎಂದು ಹೇಳುತ್ತಾನೆ. ನೀನು ಯಾವುದಕ್ಕೂ ಹೆದರಬೇಡಾ, ವಿಚಾರಿಸಬೇಡಾ ಇದಕ್ಕೆ ನನ್ನ ಒಪ್ಪಿಗೆ ಇದೆ. ನೀನು ಬಾಬಣ್ಣ ಜೊತೆ ದೇಹ ಸುಖವನ್ನು ಹಂಚಿಕೊಳ್ಳಬೇಕು ಎಂದು ಹೇಳುತ್ತಾನೆ. ಅದರಂತೆ ಬಾಬಣ್ಣನನ್ನು ಇಂದು ರಾತ್ರಿ ಚಂದ್ರವ್ವನ ಹತ್ತಿರ ಮಲಗಬೇಕು ಎಂದು ಹೇಳಿ ಚೆನ್ನಪ್ಪ ಅವರಿಬ್ಬರನ್ನು ಮನೆಯಲ್ಲಿ ಹಾಕಿ ಬಾಗಿಲವನ್ನು ಹಾಕುತ್ತಾನೆ.

ಹೀಗೆ ಈ ಕಥೆಯು ಒಂದು ಕೆಟ್ಟ ಗಳಿಗೆಯಲ್ಲಿ ಪ್ರಾರಂಭವಾಗಿ ಕೆಟ್ಟ ಗಳಿಗೆಯಲ್ಲಿ ಕೊನೆಗೊಳ್ಳುತ್ತದೆ ಎಂಬುದು ತಿಳಿಯುತ್ತದೆ. ಈ ಕಥೆಯಲ್ಲಿ ಮಧ್ಯ ಮಧ್ಯದಲ್ಲಿ ಬೇರೆ ವಿಷಯದ ಬಗ್ಗೆಯು ಲೇಖಕರು ವಿವರಿಸಿದ್ದಾರೆ. ಅದೇನೆಂದರೆ ಒಂದು ಚುನಾವಣಾ ಪ್ರಸಂಗವನ್ನು ಸಹ ಈ ಕಥೆಯಲ್ಲಿ ಲೇಖಕರು ವಿವರಿಸಿದ್ದಾರೆ. ಈ ಚುನಾವಣೆ ಸಂದರ್ಭದಲ್ಲಿ ಜನ ಪ್ರತಿನಿಧಿಗಳು ಯಾವ ರೀತಿ ಇರುತ್ತಾರೆ ಎಂಬುದನ್ನು ಲೇಖಕರು ಈ ಕಥೆಯಲ್ಲಿ ತಿಳಿಸಿದ್ದಾರೆ. ಕೆಲ ಯುವಕರು ಸೇರಿ ಒಳ್ಳೆಯವರಿಗೆ ನಮ್ಮ ಓಟನ್ನು ಹಾಕುತ್ತೇವೆ ಎನ್ನುವ ಮೂಲಕ ಈ ಕಥೆಯಲ್ಲಿ ಈ ಒಂದು ಸನ್ನಿವೇಶವನ್ನು ಸಹ ಕಥೆಗಾರರು ತುಂಬಾ ಸೊಗಸಾಗಿ ವಿವರಿಸಿದ್ದಾರೆ. ಆದ್ದರಿಂದ ಈ ಕಥೆಯು ಓದುಗರಿಗೆ ಎಲ್ಲಿಯು ಬೇಜಾರ ಎನಿಸುವುದಿಲ್ಲ.

ಲೇಖಕರು ಈ ಕಥೆಯನ್ನು ಸದ್ಯದ ಸಂದರ್ಭದಲ್ಲಿ ಇದರಿಂದ ಅಂದರೆ ಈ ಕಥೆಯಿಂದ ಎಲ್ಲಾ ಯುವಕರಿಗೆ ಒಂದು ಒಳ್ಳೆಯ ಸಂದೇಶವನ್ನು ನೀಡಲು ಪ್ರಯತ್ನಿಸಿದ್ದಾರೆ ಎಂದೇ ಹೇಳಬಹುದು. ಅದು ಹೇಗೆಂದರೆ ಈ ಕಥೆಯಲ್ಲಿ ಬರುವ 'ಚೆನ್ನಪ್ಪ'ನ ಪಾತ್ರವನ್ನು ನೋಡಿದರೆ ಎಲ್ಲರಿಗೂ ತಿಳಿಯುತ್ತದೆ. ಮನೆಯಲ್ಲಿ ಹೆಂಡತಿಯನ್ನು ಬಿಟ್ಟು ಬೇರೆಯವಳ ಸಹವಾಸ ಮಾಡಿಕೊಂಡರೆ ಎಲ್ಲರಿಗೂ ಈ ಚೆನ್ನಪ್ಪನಿಗೆ ಬಂದ ಪರಿಸ್ಥಿತಿಯೇ ಬರುತ್ತದೆ ಎಂಬುದನ್ನು ಲೇಖಕರು ಈ ಕಥೆಯಿಂದ ತಿಳಿಸಿದ್ದಾರೆ. ಆದ್ದರಿಂದ ಈ ಕಥೆಯು ಯುವಕರಿಗೆ ಒಂದು ಒಳ್ಳೆಯ ಸಂದೇಶವನ್ನು ನೀಡುತ್ತದೆ ಎಂದೇ ಹೇಳಬಹುದು.

ಈ ಕಥೆಯಲ್ಲಿ ಮತ್ತೊಂದು ಗೊಂದಲ ಕಂಡು ಬರುವುದೇನೆಂದರೆ ಕಥೆಯಲ್ಲಿ ಚಿನ್ನಪ್ಪನ ಪಾತ್ರವನ್ನು ಬಹಳ ವಿಸ್ತಾರವಾಗಿ ಹಬ್ಬಿಸಿದ್ದಾರೆ ಎಂದು ತಿಳಿಯುತ್ತದೆ. ಚಿನ್ನಪ್ಪ ಮನೆಯಿಂದ ಹೋಟೆಲಗೆ ಬಜಿ ತಿನ್ನಲಿಕ್ಕೆ ಹೋಗುವಾಗ ಅನೇಕ ಸ್ನೇಹಿತರ ಬಗ್ಗೆ ಈ ಸಂದರ್ಭದಲ್ಲಿ ಮಾಹಿತಿಯನ್ನು ಕೊಟ್ಟಿದ್ದಾರೆ. ಇದು ಎಲ್ಲೋ ಸ್ವಲ್ಪ ಅತಿಯಾಗಿದೆಯೆನೋ ಅನಿಸುತ್ತದೆ. ಈ ಕಥೆಯಲ್ಲಿ ಹೆಚ್ಚಾಗಿ ಚಿನ್ನಪ್ಪನ ಪಾತ್ರಕ್ಕೆ ಲೇಖಕರು ಹೆಚ್ಚಿನ ಆಧ್ಯತೆ ನೀಡಿದ್ದಾರೆ ಅನಿಸುತ್ತದೆ. ಆದರೆ ಈ ಕಥೆಯಲ್ಲಿ ಚಿನ್ನಪ್ಪನ ಹೆಂಡತಿ ಚಂದ್ರವ್ವ ಪಾತ್ರದ ಬಗ್ಗೆ ಇನ್ನಷ್ಟು ಸೊಗಸಾಗಿ ಅವಳ ಆಸೆ, ವೇದನೆಗಳನ್ನು ತಿಳಿಸಬೇಕಿತ್ತು. ಇದನನ್ನು ಬಿಟ್ಟರೆ ಈ ಕಥೆಯು ಸೊಗಸಾಗಿ ಮೂಡಿಬಂದಿದೆ.

ಕಥೆಗಾರರು ಈ ಕಥೆಯನ್ನು ಈಗಿನ ಯುವಕರು ಯಾವ ರೀತಿಯಾಗಿ ದಾರಿ ತಪ್ಪುತ್ತಿದ್ದಾರೆ. ಅಂತವರಿಗೆ ಇದೊಂದು ಬುದ್ಧಿ ಕಲಿಸುವಂತಹ ಕಥೆಯಾಗಿದೆ ಎನ್ನಬಹುದು. ಯಾಕೆಂದರೆ ಈ ಕಥೆಯಲ್ಲಿ ನಾವೆನಾದರು ಹರೆಯದ ಕಾಲದಲ್ಲಿ ಗರ್ವದಿಂದ ನಡೆದುಕೊಂಡರೆ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ಈ ಕಥೆಯಲ್ಲಿ ತಿಳಿಸಿಕೊಟ್ಟಿದ್ದಾರೆ. "ಇಲ್ಲಿ ಮತ್ತೊಂದು ವಿಷಯವೇನೆಂದರೆ ಈ ಕಥೆಯಲ್ಲಿ ಹೆಣ್ಣನ್ನು ಭೂಮಿ ತಾಯಿಗೆ ಹೋಲಿಸಿದ್ದಾರೆ. ಭೂಮಿಗೆ ಮಳೆ ಹೇಗೆ ಅವಶ್ಯಕವೋ ಹಾಗೆ ಹೆಣ್ಣಿಗೆ ಗಂಡಸನ ದೇಹ ಸುಖ ಅಷ್ಟೇ ಮಹತ್ವದ್ದು ಎಂಬುದನ್ನು ಕಥೆಗಾರರು ಈ ಕಥೆಯಲ್ಲಿ ತಿಳಿಸಿರುತ್ತಾರೆ. ಅಂದರೆ ಈ ಕಥೆಯಿಂದ ಹೆಣ್ಣಿನ ವೇದನೆ ಯಾವ ರೀತಿ ಯಾಗಿರುತ್ತದೆ. ಅವಳಿಗೆ ಏನು ಅವಶ್ಯಕವಾಗಿರುತ್ತದೆ ಎಂಬುದನ್ನು ತಿಳಿಸಿರುತ್ತಾರೆ"[೧೪]. ಒಟ್ಟಿನಲ್ಲಿ ಈ ಕಥೆಯಿಂದ ಗಂಡಸರಾದವರು ಯಾವ ರೀತಿಯಾಗಿ ವರ್ತನೆ ಮಾಡಬೇಕು ಎಂಬುದನ್ನು ಕಥೆಗಾರರು ಸೊಗಸಾಗಿ ವಿವರಿಸಿದ್ದಾರೆ.

---

೧೪. ಡಾ॥ ಪ್ರಹ್ಲಾದ ಅಗಸನಕಟ್ಟೆ : ಉರಿಯ ನಾಲಿಗೆಯ ಕಥೆಗಳು : (ಮುನ್ನುಡಿಯಿಂದ) ಪುಟ ಸಂಖ್ಯೆ : ೧೫

ಅಧ್ಯಾಯ – ೪

ಸಮಾರೋಪ

ಅಧ್ಯಾಯ – ೪
ಸಮಾರೋಪ

ಕಲ್ಲೇಶ್ ಕುಂಬಾರ್ ಅವರ 'ಉರಿಯ ನಾಲಿಗೆಯ ಮೇಲೆ' ಪ್ರಥಮ ಕಥಾ ಸಂಕಲನ ಕನ್ನಡದ ಸಣ್ಣ ಕತೆಗಳು ಒಂದು ವಿಚಿತ್ರ ತಿರುವಿನಲ್ಲಿ ಸಿಕ್ಕು ಹೊಯ್ದಾದುತ್ತಿರುವ ಸಂದರ್ಭದಲ್ಲಿ ಪ್ರಕಟವಾಗಿದೆ. ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿದರೆ ಜಾಗತೀಕರಣದ ಹೊಸ ಗಾಳಿ ಈಗ ಕನ್ನಡದ ಸೃಜನ ಶೀಲತೆಯ ಮೇಲೂ ತೀವ್ರವಾದ ಪರಿಣಾಮ ಬೀಸುತ್ತಿದೆ. ಈ ಹೊಸ ಗಾಳಿ ಸೃಷ್ಟಿಸುತ್ತಿರುವ ಕಂಪನಿಗಳಿಗೆ ತೆರೆದುಕೊಂಡ ಕೆಲವೇ ಬರಹಗಾರರು ಅಲ್ಲದೆ ಅವರು ಕಟ್ಟಿಕೊಡುತ್ತಿರುವ ಕಥೆಗಳು ಮತ್ತು ಅನುಭವಗಳ ವಿಪರೀತ ಚರ್ಚೆಯ ಜೊತೆಗೆ ವಿಮರ್ಶಾವಲಯವನ್ನು ತುಂಬಿಕೊಂಡಿದೆ. ಅದಲ್ಲದೇ ಗ್ರಾಮಗಳು ಕಲಿಸಿ ಕೊಡಬಹುದಾದ ಸಕಲ ಅನುಭವಗಳ ಈಗಾಗಲೇ ಸಣ್ಣ ಕತೆ – ಕಾದಂಬರಿಗಳು ಸೂರೆಗೊಂಡು ಆ ಬಗೆಯ ರಚನೆಗಳಲ್ಲಿ ಈ ಕ್ಲೀಕ್ಷೆ ಕಾಣಿಸಿಕೊಳ್ಳುತ್ತದೆ ಎಂಬ ಮಾತು ಚಾಲ್ತಿಯಲ್ಲಿದೆ. ಇಂತಹ ಮಾತುಗಳನ್ನು ಮರುಪರೀಕ್ಷೆಗೆ ಒಡ್ಡುವಂತೆ ಮತ್ತೆ ಮತ್ತೆ ಹಿಂದುಳಿದ ಪ್ರದೇಶ, ಜಾತಿ, ಜನಾಂಗ, ವರ್ಗ, ಗ್ರಾಮಗಳಿಂದ ಹೊಸ ಹೊಸ ಪ್ರತಿಭೆಗಳು ಚಿಗುರೊಡೆಯುತ್ತಲೇ ಇದೆ.

'ಉರಿಯ ನಾಲಿಗೆಯ ಮೇಲೆ' ಎಂಬ ಕಥಾ ಸಂಕಲನವನ್ನು ಗ್ರಾಮೀಣರ ಬದುಕು ಬವಣೆಗಳನ್ನು ತಿಳಿಸಿ ಕೊಡುವಂತೆ ಒಂದು ಕಥಾ ಸಂಕಲನವಾಗಿದೆ. ಈ ಕಥಾ ಸಂಕಲನದಲ್ಲಿ ಬರುವ ಒಂಬತ್ತು ಕಥೆಗಳನ್ನು ನೋಡಿದರೆ ಲೇಖಕರು ಗ್ರಾಮೀನ ಜನರ ಬದುಕನ್ನು ಈ ಕಥೆಗಳಲ್ಲಿ ಕೆತ್ತಿರುವುದು ತಿಳಿದು ಬರುತ್ತದೆ. ಪ್ರತಿಯೊಂದು ಕಥೆಗಳು ಒಂದೊಂದು ಸಂದೇಶವನ್ನು ನೀಡುತ್ತವೆ. ಈ ಕಥೆಗಳಿಂದ ನಮಗೆ ಹಳ್ಳಿಗಳಲ್ಲಿ ನಡೆಯುವ ಅನೇಕ ಚಟುವಟಿಕೆಗಳು ನಮ್ಮ ಕಣ್ಮುಂದೆ ಬಂದತ್ತಿವೆ ಎಂದೆನಿಸುತ್ತದೆ. ಜೊತೆಗೆ ಇಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳ ಬಗ್ಗೆ ಲೇಖಕರು ಬೆಳಕು ಚಲ್ಲಿದ್ದಾರೆ ಎಂದೆನಿಸುತ್ತದೆ. ಈ ಒಂಬತ್ತು ಕಥೆಗಳಲ್ಲಿ ನಡೆಯುವ ಪ್ರಸಂಗಗಳನ್ನು ಲೇಖಕರು ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ.

ಈ ಕಥೆಗಳಲ್ಲಿ ಕಥೆಗಾರ ಗ್ರಾಮಗಳಲ್ಲಿ ನಡೆಯುವ ಅನೇಕ ಚಟುವಟಿಕೆಯನ್ನು ಎತ್ತಿ ತೋರಿಸಿದ್ದಾರೆ. ಅವುಗಳೆಂದರೆ ಜಾತಿ ಬೇಧವಾಗಿರಬಹುದು. ಇಲ್ಲಿ ಕೆಳಜಾತಿ – ಮೇಲ್ಜಾತಿ, ಬಡವ – ಶ್ರೀಮಂತವಾಗಿರಬಹುದು. ಅಂದರೆ ಶ್ರೀಮಂತರ ದಬ್ಬಾಳಿಕೆ ಅದಲ್ಲದೇ ಸ್ತ್ರೀಯರ ಮೇಲೆ ನಡೆಯುವ

ಶೋಷಣೆಯಾಗಿರಬಹುದು. ಅಂದರೆ ಗ್ರಾಮೀಣ ಪ್ರದೇಶದಲ್ಲಿ ಸ್ತ್ರೀಯರ ಮೇಲೆ ನಡೆಯುವ ದೌರ್ಜನ್ನವನ್ನು ಈ ಕಥೆಗಳಲ್ಲಿ ಲೇಖಕ ಹೆಚ್ಚಾಗಿ ಬಿಂಬಿಸಿದ್ದಾರೆ. ಅಲ್ಲದೆ ಕೆಳಜಾತಿಯ ಸ್ತ್ರೀಯರನ್ನು ಈ ಕಥೆಯಲ್ಲಿ ಹೆಚ್ಚಾಗಿ ಕಾಮದ ತೃಪ್ತಿಗೆ ಬಳಸಿಕೊಂಡಿರುವುದು ಇಲ್ಲಿ ಕಂಡು ಬರುತ್ತದೆ. ಆದ್ದರಿಂದ ಈ ಒಂಬತ್ತು ಕಥೆಗಳಲ್ಲಿ ಹೆಚ್ಚಾಗಿ ಹೆಣ್ಣಿನ ನೋವು ಅಡಗಿದೆ ಎಂದು ಅನಿಸುತ್ತದೆ. ಇಲ್ಲಿ ಮತ್ತೊಂದು ವಿಷಯವೇನೆಂದರೆ ಹಳ್ಳಿಗಳಲ್ಲಿ ನಡೆಯುವ ಗೌಡರ ದೌರ್ಜನ್ಯದ ಬಗ್ಗೆ ಲೇಖಕರು ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ.

ಕಲ್ಲೇಶ್ ಕುಂಬಾರ್ರು ಈ 'ಉರಿಯ ನಾಲಿಗೆಯ ಮೇಲೆ' ಎಂಬ ಕಥಾ ಸಂಕಲನವನ್ನು ನೋಡಿದರೆ ಈಗಿನ ಯುವಕರಿಗೆ ಹೇಳಿ ಮಾಡಿಸಿದ ಕಥೆಗಳಂತೆ ಕಂಡು ಬರುತ್ತದೆ. ಏಕೆಂದರೆ ಈ ಕಥೆಗಳಲ್ಲಿ ಬರುವ ತಿರುಳನ್ನು ನೋಡಿದರೆ ಈಗಿನ ಯುವಕರು ಈ ಕಥೆಗಳಿಂದ ಬಹಳ ತಿಳಿದುಕೊಳ್ಳಬೇಕಾಗಿದೆ ಎಂದು ಅನಿಸುತ್ತದೆ. ಯಾಕೆಂದರೆ ಈ ಕಥೆಯಲ್ಲಿ ಒಂದು ಕ್ಷಣ ಮನುಷ್ಯ ಮೈ ಮರೆತನೆಂದರೆ ಎಂತಹ ಅನಾಹುವಾಗುತ್ತದೆ ಎಂಬುದರ ಬಗ್ಗೆ ಲೇಖಕರು ಈ ಕಥೆಯಿಂದ ತಿಳಿಸುತ್ತಾರೆ. ಇಲ್ಲಿ ಮನಷ್ಯ ಯೌವ್ವನ ಇದ್ದಾಗ ಏನಬೇಕಾದನ್ನು ಮಾಡಿದರೆ ನಡಿತೈತಿ ಅಂತ ತಿಳಿಕೊಂಡ್ರ ಮುಂದೆ ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಲೇಖಕರು ಈ ಒಂಬತ್ತು ಕಥೆಗಳ ಮೂಲಕವಾಗಿ ತಿಳಿಸಿಕೊಟ್ಟಿರುತ್ತಾರೆ.

ಈ ಕಥೆಗಳಲ್ಲಿ ಬದುಕಿನಲ್ಲಿ ನಡೆಯುವ ಎಲ್ಲಾ ಘಟನೆಗಳ ಬಗ್ಗೆ ಲೇಖಕರು ಬೆಳಕನ್ನು ಚೆಲ್ಲಿದ್ದಾರೆ. ಹಳ್ಳಿಗಳಲ್ಲಿ ಅನಾಥ ಮಹಿಳೆಯರನ್ನು ಯಾವ ರೀತಿಯಾಗಿ ನೋಡಿಕೊಳ್ಳುತ್ತಾರೆ ಎಂಬುದನ್ನು ಮತ್ತು ಕೆಳಜಾತಿಯ ಮಹಿಳೆಯರನ್ನು ಯಾವ ರೀತಿಯಾಗಿ ನೋಡಿಕೊಳ್ಳುತ್ತಾರೆ ಎಂಬುದರ ಬಗ್ಗೆ ಇಲ್ಲಿ ಲೇಖಕರು ತಿಳಿಸಿದ್ದಾರೆ. ಇದರ ಜೊತೆಗೆ ಸ್ತ್ರೀಯಾದವಳು ಸಹ ಯಾವ ರೀತಿಯಾಗಿ ವರ್ತನೆಯನ್ನು ಮಾಡಬೇಕು ಎಂಬುದರ ಬಗ್ಗೆಯು ಇಲ್ಲಿ ತಿಳಿಸಿದ್ದಾರೆ. ಈ ಕಥೆಗಳಲ್ಲಿ ಕೆಲವೊಂದು ಸ್ತ್ರೀಯರು ಅನೇಕ ಜನರ ಬದುಕನ್ನು ಹಾಳು ಮಾಡುವ ಪ್ರಸಂಗವು ಇಲ್ಲಿ ಕಂಡು ಬರುತ್ತದೆ. ಅಂತಹ ಸ್ತ್ರೀಯರು ತಮ್ಮ ಕಾಮ ತೃಪ್ತಿಯನ್ನು ತೀರಿಸಿಕೊಳ್ಳಲು ಎಂತಹ ಕೆಲಸಗಳನ್ನು ಮಾಡುತ್ತಾರೆ ಎಂಬುದನ್ನು ಸಹ ಈ ಕಥೆಗಳಲ್ಲಿ ತಿಳಿಸಿದ್ದಾರೆ. ಒಟ್ಟಿನಲ್ಲಿ ಈ ಕಥೆಗಳಲ್ಲಿ ಸ್ತ್ರೀಯರ ಬಗ್ಗೆ ಲೇಖಕರು ಹೆಚ್ಚಿನ ಆಧ್ಯತೆಯನ್ನು ನೀಡಿದ್ದಾರೆ ಎಂದು ಹೇಳಬಹುದು.

ಇಲ್ಲಿ ಕಂಡು ಬರುವ ಕಥೆಗಳಲ್ಲಿ ಬಡತನದ ಬಗ್ಗೆಯು ಲೇಖಕರು ತುಂಬಾ ಮಾರ್ಮಿಕವಾಗಿ ವಿವರಣೆ ನೀಡಿದ್ದಾರೆ. ಬಡತನದಿಂದ ಎಂತಹ ತೊಂದರೆಗಳು ಆಗುತ್ತವೆ ಹಾಗೂ ಬಡತನ ಈ ಕಥೆಯಲ್ಲಿ ಎಷ್ಟೊಂದು ಕಠೋರ ಎಂಬಂತೆ ಪ್ರತಿಬಿಂಬಿಸಿದ್ದಾರೆ. ಬಡತನದಿಂದ ಬದುಕಿನಲ್ಲಿ ಎಷ್ಟೊಂದು ತೊಂದರೆ ಆಗುತ್ತವೆ ಎಂಬುದಕ್ಕೆ 'ಕರ್ಪೂರದ ಗಿರಿಯ ಉರಿ' ಎಂಬ ಕಥೆಯಲ್ಲಿ ಬರುವ ಲಕ್ಕಪ್ಪನ ಬದುಕಿನಿಂದ ತಿಳಿಯುತ್ತದೆ. ಇಲ್ಲಿ ಲಕ್ಕಪ್ಪನ ಬಡತನ ಎಷ್ಟೊಂದು ಕಷ್ಟದ ಬದುಕನ್ನು ಈ ಕಥೆಯಲ್ಲಿ

[illegible]

ತಿಳಿಸಿಕೊಟ್ಟಿದೆ. ಹೀಗೆ ಈ ಕಥೆಗಳಲ್ಲಿ ಬಡತನದ ಬಗ್ಗೆಯು **ಕಲ್ಲೇಶ್ ಕುಂಬಾರ್**ರು ತಮ್ಮ ಕಥೆಗಳಲ್ಲಿ ತುಂಬಾ ಮಾರ್ಮಿಕವಾಗಿ ವಿವರಣೆಯನ್ನು ಕೊಟ್ಟಿದ್ದಾರೆ ಎಂದು ತಿಳಿದು ಬರುತ್ತದೆ.

'ಉರಿಯ ನಾಲಿಗೆಯ ಮೇಲೆ' ಎಂಬ ಕಥಾ ಸಂಕಲನದಲ್ಲಿ ಲೇಖಕರು ಹಳ್ಳಿಯ ಬದುಕನ್ನು ಕಣ್ಮುಂದೆ ಕಟ್ಟುವಂತೆ ವಿವರಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ ಸದ್ಯದ ಸಂದರ್ಭದಲ್ಲಿ ಅಂದರೆ ಈಗಿನ ಯುವಕರು ಅನೇಕ ಚಟಗಳಿಗೆ ಬಲಿಯಾಗಿ ತಮ್ಮ ಬದುಕನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಅಂತವರಿಗೆ ಸಹ ಇಲ್ಲಿ ಒಂದು ಸಂದೇಶ ಇದೆ. ಅದೇನೆಂದರೆ ಕೈಯಲ್ಲಿ ಹಣ ಯೌವ್ವನ ಐತಿ ಅಂತಾ ಸಿಕ್ಕಾಪಟ್ಟೆ ಜಿಗದಾಡಿದರೆ ಅದರ ಅನುಭವ ಮುಂದೆ ಆಗುತ್ತದೆ ಎಂಬುದಕ್ಕೆ 'ಶಬ್ದದೊಳಗಣ ನಿಶ್ಯಬ್ಧ' ಎಂಬ ಕಥೆಯಲ್ಲಿ ಬರುವ ಚೆನ್ನಪ್ಪನ ಮಾತ್ರವನ್ನು ನೋಡಿದರೆ ನಾವು ಬದುಕನಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ತಿಳಿಸುತ್ತದೆ. ಆದ್ದರಿಂದ ಈಗಿನ ಯುವಕರು ಹೆಚ್ಚಾಗಿ ಅನೇಕ ಚಟಗಳನ್ನು ಮಾಡುತ್ತಾ ಹಾಳಾಗುತ್ತಿದ್ದಾರೆ. ಅಂತವರಿಗೆ ಈ ಕಥೆಯು ಒಂದು ಪಾಠವಾಗಿದೆ ಎಂದು ಹೇಳಬಹುದು.

"ಡಾ॥ ಪ್ರಹ್ಲಾದ ಅಗಸನಕಟ್ಟೆಯವರ ಪ್ರಕಾರ ಈ ಎಲ್ಲಾ ಕಥೆಗಳಲ್ಲಿ ಸ್ತ್ರೀಯರ ಪಾತ್ರ ಶಕ್ತಿಯುತವಾಗಿ ಮೂಡಿ ಬಂದಿದೆ. ಈ ಕಥೆಗಳಲ್ಲಿ ಲೇಖಕರು ಸ್ತ್ರೀಯ ಬಗ್ಗೆಯು ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ. ಸಮಾಜದಲ್ಲಿ ಸ್ತ್ರೀಯರನ್ನು ಯಾವ ರೀತಿಯಾಗಿ ನೋಡಿಕೊಳ್ಳುತ್ತಾರೆ. ಅವರ ತೊಂದರೆಗಳನ್ನು, ಅವರು ಯಾವುದರಿಂದ ವಂಚನೆಯಾಗಿದ್ದಾರೆ. ಸ್ತ್ರೀಯರ ನೋವು-ನಲಿವುಗಳ ಬಗ್ಗೆ ಲೇಖಕರು ಈ ಕಥೆಗಳಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ಅವುಗಳಲ್ಲಿ ಮೊದಲನೆಯ ಕಥೆ 'ಉರಿಯ ನಾಲಿಗೆಯ ಮೇಲೆ' ಎಂಬ ಕಥೆಯಲ್ಲಿ ಬರುವ 'ರತ್ನವ್ವ'ನ ಪಾತ್ರ. ರತ್ನವ್ವ ಬದುಕಿನಲ್ಲಿ ಎಷ್ಟೊಂದು ತೊಂದರೆ ಅನುಭವಿಸುತ್ತಾಳೆ ಮತ್ತು ಊರ ಗೌಡನಿಂದ ಯಾವ ರೀತಿಯಾಗಿ ಕಷ್ಟ ಅನುಭವಿಸುತ್ತಾಳೆ ಎಂಬುದನ್ನು ಇಲ್ಲಿ ತಿಳಿಸಿದ್ದಾರೆ. ನಂತರ 'ಕಿಚ್ಚು' ಎಂಬ ಕಥೆಯಲ್ಲಿ ಮುರಿಗೆವ್ವ ತನ್ನ ಗಂಡನನ್ನು ಮತ್ತು ತನ್ನ ಮಗನನ್ನು ಕಳೆದುಕೊಂಡು ಅನಾಥನಾಗುವ ಸ್ಥಿತಿಯನ್ನು ಲೇಖಕರು ಮನಕಲಕುವ ರೀತಿಯಲ್ಲಿ ಈ ಕಥೆಯಲ್ಲಿ ಚಿತ್ರಿಸಿದ್ದಾರೆ"[೧]. ಹೀಗೆ ಸ್ತ್ರೀಯರ ಪಾತ್ರಗಳನ್ನು ತುಂಬಾ ಅಚ್ಚುಕಟ್ಟಾಗಿ ಇಲ್ಲಿ ವಿವರಿಸಿದ್ದಾರೆ.

ಜಾತಿಯತೆ ಬಗ್ಗೆ ಲೇಖಕರು ಈ ಕಥೆಗಳಲ್ಲಿ ತಿಳಿಸಿರುತ್ತಾರೆ. ಅಂದರೆ ಕೆಳಜಾತಿ – ಮೇಲ್ಜಾತಿ ಎಂಬ ಬೇಧ. ಅದರಿಂದ ಆಗುವ ನೋವುಗಳು ಇವುಗಳನ್ನೆಲ್ಲ ಈ ಕಥೆಗಳಲ್ಲಿ ಲೇಖಕರು ವಿವರಣೆ ನೀಡಿದ್ದಾರೆ. ಕೆಳಜಾತಿಯ ಅಂದರೆ ಹೋಲೆಯರು ಯಾವ ಉದ್ಯೋಗ ಮಾಡಬೇಕು. ಆ ಜಾತಿಯ ಮಹಿಳೆಯ ಉದ್ಯೋಗವನ್ನು ಅದಲ್ಲದೇ ಹೋಲೆರ ಹೆಣ್ಣು ಮಕ್ಕಳು ಮದುವೆಯಾಗದೆ ಅನೇಕ ಪುರುಷರಿಗೆ ದೇಹ ಸುಖಕೊಡುವಂತೆ ಕೆಲಸವನ್ನು ಮಾಡುವ ಪರಿ. ಅದಲ್ಲದೇ ಕೆಳ ಜಾತಿಯವರು ಮೇಲ್ವರ್ಗದವರ ದಬ್ಬಾಳಿಕೆಗೆ ಅವರು ಹೇಳಿದಂತೆ ಕೇಳುತ್ತಾ ಅವರ ಕಾಲನ್ನು ಹಿಡಿದುಕೊಂಡು ಬದುಕು ನಡೆಸುವುದರ ಬಗ್ಗೆಯು ಲೇಖಕರು ಇಲ್ಲಿ ವಿವರಣೆ ನೀಡಿದ್ದಾರೆ.

---

೧. **ಡಾ॥ ಪ್ರಹ್ಲಾದ ಅಗಸನಕಟ್ಟೆ : ಉರಿಯ ನಾಲಿಗೆಯ ಕಥೆಗಳು : (ಮುನ್ನುಡಿಯಿಂದ) ಪುಟ ಸಂಖ್ಯೆ : ೧೬**

ಈ ಕಥಾ ಸಂಕಲನದಲ್ಲಿ ಕಂಡು ಬರುವ ಕಥೆಗಳಲ್ಲಿ ಇನ್ನೊಂದು ಮುಖ್ಯ ವಿಷಯ ತಿಳಿದು ಬರುವುದೇನೆಂದರೆ 'ಗೌಡರ ದರ್ಬಾರ'. ಈ ಗೌಡರ ದಬ್ಬಾಳಿಕೆಯು ಸಹ ಈ ಕಥೆಗಳಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುತ್ತದೆ. ಅನೇಕ ಹಳ್ಳಿಗಳಲ್ಲಿ ಗೌಡ ಜನಾಂಗದವರು ಯಾವ ರೀತಿಯಾಗಿ ವರ್ತನೆ ಮಾಡುತ್ತಿರುತ್ತಾರೆ ಎಂಬುದನ್ನು ಈ ಕಥೆಗಳಲ್ಲಿ ವಿವರಿಸುತ್ತಾರೆ. ಇದರ ಬಗ್ಗೆ ಇಲ್ಲಿ ಅನೇಕ ಕಥೆಗಳಲ್ಲಿ ಕಂಡು ಬರುವ ಈರನಗೌಡ. ಈ ಈರನಗೌಡ ರತ್ನವ್ವನ ಮಗಳು ಯಲ್ಲವ್ವನ ರೂಪಕ್ಕೆ ಮನಸೋತು ರತ್ನವ್ವನನ್ನು ತನ್ನ ಅಧಿಕಾರದಿಂದ ಕಾಡುತ್ತಾನೆ. ಅದಲ್ಲದೇ 'ಕಿಚ್ಚು' ಎಂಬ ನಾಟಕದಲ್ಲಿ ಬರುವ ಪರಪ್ಪಗೌಡನ ಪಾತ್ರ. ಈ ಪರಪ್ಪಗೌಡ ತನ್ನ ದಬ್ಬಾಳಿಕೆಯಿಂದ ಅಹಂಕಾರದಿಂದ ಮೆರೆಯುತ್ತಿರುತ್ತಾನೆ. ಈತ ಮುರಗೆವ್ವನ ಗಂಡ ಮತ್ತು ಮಗನನ್ನು ಸಾಯಿಸುತ್ತಾನೆ. ಮುರಿಗೆವ್ವನನ್ನು ಅನಾಥಳನಾಗಿ ಮಾಡುತ್ತಾನೆ. ನಂತರ 'ಹಂದಿ' ಎಂಬ ಕಥೆಯಲ್ಲಿ ಬರುವ ಮಾಲಿಂಗಯ್ಯ ಗೌಡನ ದಬ್ಬಾಳಿಕೆ ಅದಲ್ಲದೆ 'ಕರ್ಪೂರದ ಗಿರಿಯ ಉರಿ' ಎಂಬ ಕಥೆಯಲ್ಲಿ ಕಂಡು ಬರುವ ರುದ್ರಗೌಡ. ಈ ರುದ್ರಗೌಡನ ದಬ್ಬಾಳಿಕೆಯು ಹೆಚ್ಚಾಗಿ ಹೋಲೆರ ಲಕ್ಕಪ್ಪನನ್ನು ಕೈಕಾಲ ಕಟ್ಟಿ ಆತನ ಬಾಯಲ್ಲಿ ಚಪ್ಪಲಿಯಿಂದ ಹೇಲನ್ನು ಹಾಕುತ್ತಾನೆ. ಈ ರೀತಿಯಾಗಿ ಈ ಎಲ್ಲಾ ಕಥೆಗಳಲ್ಲಿ ಗೌಡರ ದಬ್ಬಾಳಿಕೆಯ ಬಗ್ಗೆ ಲೇಖಕರು ತುಂಬಾ ರೋಮಾಂಚನವಾಗಿ ವಿವರಿಸಿದ್ದಾರೆ.

ಹೀಗೆ ಈ ಎಲ್ಲಾ ಕಥೆಗಳನ್ನು ಗಮನಿಸುತ್ತ ಹೋದರೆ ಪ್ರತಿಯೊಂದು ಕಥೆಯಲ್ಲಿಯು ಒಂದೊಂದು ಸಂದೇಶವನ್ನು ಲೇಖಕರು ತಿಳಿಸಿರುತ್ತಾರೆ ಎಂದು ಅನಿಸುತ್ತದೆ. ಈ ಕಥೆಯಲ್ಲಿ ಬರುವ ಎಲ್ಲಾ ಕಥೆಗಳ ತಿರುಳನ್ನು ಗಮನಿಸಿದರೆ ಈ ಎಲ್ಲಾ ಕಥೆಗಳು ಬದುಕಿಗೆ ಪಾಠವನ್ನು ಕಲಿಸುವಂತಹ ಕಥೆಗಳಾಗಿವೆ ಎಂದು ಅನಿಸುತ್ತದೆ. ಕಥೆಗಾರರು ಈ ಎಲ್ಲಾ ಕಥೆಗಳಲ್ಲಿ ಸರಳವಾದ ಹಳ್ಳಿಯ ಭಾಷೆಯನ್ನು ಬಳಸಿರುವುದು ಕಂಡು ಬರುತ್ತದೆ ಮತ್ತು ಈ ಕಥೆಗಳನ್ನು ಓದುತ್ತಾ ನಡೆದರೆ ಕಥೆಯ ತಿರುಳು ಮನಮುಟ್ಟುವಂತೆ ರಚಿಸಿರುತ್ತಾರೆ.

ಈ ಕಥೆಗಳೆಲ್ಲವು ಕೇವಲ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತವಾಗಿವೆ ಅಂದುಕೊಂಡರೆ ಅದು ತಪ್ಪಾಗುತ್ತದೆ. ಯಾಕೆಂದರೆ ಈ ಕಥೆಯಲ್ಲಿ ಕಂಡು ಬರುವ ಪಾತ್ರಗಳು ಈ ಕಥೆಯ ತಿರುಳುಗಳನ್ನು ಗಮನಿಸಿದರೆ ಪಟ್ಟಣದವರಿಗೂ ಸಹ ಈ ಕಥೆಗಳು ಅವಶ್ಯಕವಾಗಿವೆ ಎಂದು ಅನಿಸುತ್ತದೆ. ಆದ್ದರಿಂದ ಕಥೆಗಾರರು ಈ ಕಥೆಯಿಂದ ಎಲ್ಲ ವರ್ಗದ ಜನರು, ಎಲ್ಲ ಪ್ರದೇಶದ ಜನರು ಇದರಿಂದ ತಿಳಿದುಕೊಳ್ಳುವುದು ಬಹಳವಿದೆ ಎಂದಿದ್ದಾರೆ. ಆದ್ದರಿಂದ ಈ 'ಉರಿಯ ನಾಲಿಗೆಯ ಮೇಲೆ' ಎಂಬ ಕಥಾ ಸಂಕಲನವು ಎಲ್ಲ ವರ್ಗದವರಿಗೆ ಎಲ್ಲಾ ಕಾಲಕ್ಕೂ ಎಲ್ಲ ಜನರಿಗೂ ಅನ್ವಯಿಸುವಂತಹ ಒಂದು ಕಥಾ ಸಂಕಲನವಾಗಿದೆ ಎಂದು ಹೇಳಬಹುದು.

ಈ 'ಉರಿಯ ನಾಲಿಗೆಯ ಮೇಲೆ' ಎಂಬ ಕಥಾ ಸಂಕಲನದಲ್ಲಿ ಬರುವ ಕಥೆಗಳೆಲ್ಲವೂ ಒಂದೇ ತೆರನಾಗಿವೆ ಎಂದು ಎನಿಸಿದರು ಕಥೆಯಲ್ಲಿ ಬರುವ ತಿರುಳು ಮಾತ್ರ ಬೇರೆ ಬೇರೆಯಾಗಿ ಕಂಡುಬರುತ್ತದೆ. ಈ ಕಥೆಗಳು ಎಲ್ಲವು ಕೇವಲ ಒಂದೇ ಊರಿನ ಕಥೆಗಳಾಗಿವೆ ಎಂದೆನಿಸಿದರು ಆ ಕಥೆಗಳಿಂದ ಎಲ್ಲಾ ಪ್ರದೇಶಕ್ಕೂ ಈ ಕಥೆಗಳು ಅವಶ್ಯಕ ಎಂದು ಅನಿಸುತ್ತದೆ. ಅಂದರೆ ಈ ಕಥೆಗಳು ಕೇವಲ ಹಾರೂಗೇರಿಗೆ ಮಾತ್ರ ಸೀಮಿತವಾಗಿವೆ ಎಂದು ಮೇಲ್ನೋಟಕ್ಕೆ ಕಂಡು ಬಂದರು ಸಹ ಈ ಕಥೆಯಲ್ಲಿ ಕಂಡು ಬರುವ ಘಟನೆಗಳು ಎಲ್ಲಾ ಪ್ರದೇಶಗಳಲ್ಲಿ ನಡೆಯುವಂತವುಗಳೇ ಎಂದು ಈ ಕಥೆಗಳನ್ನು ಓದುತ್ತಾ ಹೋದರೆ ತಿಳಿಯುತ್ತದೆ. ಆದ್ದರಿಂದ ಈ ಕಥೆಗಳಲ್ಲಿ ಎಲ್ಲಾ ಜನರಿಗೂ ಎಲ್ಲಾ ಕಾಲದಲ್ಲಿಯು ಎಲ್ಲಾ ಪ್ರದೇಶಕ್ಕೂ ಅತ್ಯವಶ್ಯಕವಾಗಿ ಈ ಕಥೆಗಳು ಬೇಕಾಗುತ್ತವೆ. ಏಕೆಂದರೆ ಈ ಕಥೆಯಲ್ಲಿ ನಡೆಯುವ ಘಟನೆಗಳು ಎಲ್ಲ ಕಡೆಯು ನಡೆಯುತ್ತಿರುತ್ತವೆ. ಆದ್ದರಿಂದ ಈ ಕಥೆಗಳು ಕೇವಲ ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗಿಲ್ಲ.

ಈ ಕಥೆಗಳು ಈಗಿನ ಜನರಿಗೆ ಒಂದು ಒಳ್ಳೆಯ ಸಂದೇಶವನ್ನು ನೀಡುವಂತಹ ಕಥೆಗಳಾಗಿವೆ ಎನ್ನಬಹುದು. ಅಂದರೆ ಸದ್ಯದ ಪರಿಸ್ಥಿತಿಯನ್ನು ನೋಡಿದರೆ ನಮ್ಮ ಜನರು ಅನೇಕ ರೀತಿಯಿಂದ ಬಡಿದಾಡುತ್ತಿದ್ದು ಅದರಲ್ಲಿ ಜಾತಿಯತೆಯಾಗಿರಬಹುದು ಮತ್ತು ಸ್ತ್ರೀಯರ ಮೇಲೆ ನಡೆಯುವಂತ ಅತ್ಯಾಚಾರವಾಗಿರಬಹುದು, ಮೂಢನಂಬಿಕೆಯಾಗಿರಬಹುದು, ಬಾಲ್ಯ ವಿವಾಹ ಪದ್ಧತಿಯಾಗಿರಬಹುದು, ಅನಕ್ಷರತೆಯಾಗಿರಬಹುದು. ಯುವಕರಲ್ಲಿ ಕಂಡು ಬರುವ ಕೆಟ್ಟ ಪ್ರವೃತ್ತಿ ಯುವಕ-ಯುವತಿಯರು ನಡೆದುಕೊಳ್ಳುವ ರೀತಿ ತಂದೆ-ತಾಯಿಯರಿಗೆ ಗೌರವ ನೀಡದೆ ಇರುವುದು. ಹಿರಿಯರು ಎಂಬ ಅಂಜಿಕೆ ಇಲ್ಲದಿರುವುದು ಸಂಕುಚಿತ ಭಾವನೆ, ನಿರಾಶೆ, ದುಶ್ಚಟಗಳು. ಹೀಗೆ ಹತ್ತು ಹಲವು ವಿಚಾರದ ಮೇಲೆ ಈ ಎಲ್ಲಾ ಕಥೆಗಳು ಬೆಳಕನ್ನು ಚಲ್ಲುತ್ತವೆ ಮತ್ತು ಅವುಗಳಿಂದ ಆಗುವ ಪರಿಣಾಮಗಳನ್ನು ಈ ಕಥೆಗಳು ತಿಳಿಸಿಕೊಡುತ್ತವೆ.


ಈ ಕಥಾ ಸಂಕಲನದಲ್ಲಿ ಬರುವ ಒಂಬತ್ತು ಕಥೆಗಳನ್ನು ಗಮನಿಸಿದರೆ ಎಲ್ಲಾ ಕಥೆಗಳು ಒಂದೊಂದು ಸಂದೇಶವನ್ನು ನೀಡುತ್ತವೆ. ಆದ್ದರಿಂದ ಈ ಕಥಾ ಸಂಕಲನವು ಸದ್ಯದ ಪರಿಸ್ಥಿತಿಯಲ್ಲಿ ಇದು ಎಲ್ಲಾ ಜನರಿಗೆ ಅತ್ಯವಶ್ಯಕವಾಗಿದೆ ಎಂದು ಅನಿಸುತ್ತದೆ. ಈ ಕಥೆಗಳು ನಮ್ಮ ಸಮಾಜದಲ್ಲಿ ನಡೆಯುವ ಅನೇಕ ಕೆಟ್ಟ ಘಟನೆಗಳಿಗೆ ಮಾರ್ಗಸೂಚಿಯಾಗಿದೆ. ಸಮಾಜವನ್ನು ತಿದ್ದಲು ಈ 'ಉರಿಯ ನಾಲಿಗೆ ಮೇಲೆ' ಎಂಬ ಕಥಾ ಸಂಕಲನವು ತುಂಬಾ ಅವಶ್ಯಕವಾಗಿದೆ. ಕಥೆಗಾರರು ಈ ಎಲ್ಲ ಕಥೆಗಳನ್ನು ಸಂದರ್ಭಕ್ಕೆ ತಕ್ಕಂತೆ ಜನ ಮನಸ್ಸಿಗೆ ಮುಟ್ಟುವಂತೆ ರಚಿಸಿದ್ದಾರೆ.

ಈ 'ಉರಿಯ ನಾಲಿಗೆಯ ಮೇಲೆ' ಎಂಬ ಕಥಾ ಸಂಕಲನದಲ್ಲಿ ಭೂ ಮಾಲಿಕತ್ವ, ಅದರ ವ್ಯವಸ್ಥೆಯ ಅನುವಂಶಿಕ ಗುಣಗಳಾದ ಶೋಷಣೆ, ಕ್ರೌರ್ಯ, ದಬ್ಬಾಳಿಕೆ, ಗೌಡರ ಆಳುಗಳೆಂಬ ಅಸಮಾನ ಶ್ರೇಣಿ ಮತ್ತು ಅಕ್ರಮ ಲೈಂಗಿನ ಸಂಬಂಧಗಳು, ಅದರಿಂದ ಉಂಟಾಗುವ ಕ್ಷೋಭೆ,

ಇತ್ಯಾಧಿ ಬಹುಪಾಲು ತಲ್ಲಣಗಳು ಇಲ್ಲಿ ಒಂಬತ್ತು ಕಥೆಗಳಲ್ಲಿ ಮುನರಡಿ ಮುಖ ತೋರುತ್ತದೆ. ಕಥೆಗಾರರು ತಮ್ಮ ಕಥೆಗಳಿಗೆ ಇಟ್ಟಿರುವ ಶಿರೋನಾಮಗಳಲ್ಲಿಯೇ ತಾವು ಮಂಡಿಸುವ ಆಶಯಗಳನ್ನು ಸಾಂಕೇತಿಕವಾಗಿ ಹೇಳುತ್ತಿರುವಂತೆಯೇ ಇರುವುದನ್ನು ಕೂಡಾ ನೋಡಬಹುದು. 'ಕಿಚ್ಚು', 'ಕೆಂಡದ ಮಳೆ ಕರೆವಲ್ಲಿ', 'ಉರಿಯ ನಾಲಿಗೆಯ ಮೇಲೆ', 'ಅರಿವಿನ ಕೇಡು' ಮೊದಲಾದ ಶೀರ್ಷಿಕೆಗಳೇ ಕಥೆಯೊಳಗಿನ ಪ್ರಪಂಚದ ವಾಸ್ತವವನ್ನು ತೆರೆದಿಡುವಂತಿವೆ. 'ಉರಿಯ ನಾಲಿಗೆಯ ಮೇಲೆ' ಈ ಕಥೆ ಭೂ ಮಾಲೀಕ ವ್ಯವಸ್ಥೆಯನ್ನು ಸೃಷ್ಟಿಸುವ ಎಲ್ಲಾ ಕೊಳಕು, ಹಾದರ, ಶೋಷಣೆಗಳನ್ನು ತೀವ್ರವಾಗಿ ತೆರೆಯುವಲ್ಲಿ ಯಶಸ್ವಿಯಾಗಿದೆ. ಈ ಕಥೆಯಲ್ಲಿ ಭಕ್ತಿ, ಕಾಮ ಮತ್ತು ಕ್ರೌರ್ಯಗಳು ಮುಖಾಮುಖಿಯಾಗುತ್ತವೆ.

ಅನುಬಂಧಗಳು

ಅಸಮಾನತೆ ಅನಾವರಣದ ಹುಮ್ಮಸ್ಸು



ಉರಿಯ ನಾಲಿಗೆಯ ಮೇಲೆ
ಲೇ. ಕಲ್ಲೇಶ್ ಕುಂಬಾರ್
ಪು: 160; ಬೆ: ರೂ. 100
ಪ್ರ: ರೂಪ ಪ್ರಕಾಶನ, ನಂ. 2407/ಕೆ-1, 1ನೇ ಕ್ರಾಸ್ ಹೊಸಬಂಡಿಕೇರಿ, ಮೈಸೂರು-570004

ಸಾಹಿತ್ಯ ಅಕಾಡೆಮಿ, ಪುಸ್ತಕ ಪ್ರಾಧಿಕಾರ ಮತ್ತು ಸಂಸ್ಕೃತಿ ಇಲಾಖೆಗಳು ಸಾಹಿತ್ಯ ಕಮ್ಮಟಗಳನ್ನು ಏರ್ಪಡಿಸುತ್ತವೆ ಮತ್ತು ಸಂಸ್ಕೃತಿ, ಪ್ರಕಾಶನಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ. ಇವುಗಳಲ್ಲಿ ಸೃಜನಶೀಲತೆಗಾಗಿ ಏರ್ಪಡಿಸುವ ಕಮ್ಮಟಗಳಿಗೂ, ಉಳಿದ ಕಾರ್ಯಕ್ರಮಗಳಿಗೂ ವ್ಯತ್ಯಾಸವಿದೆ. ಸಾಹಿತ್ಯ ಕಮ್ಮಟಗಳಿಂದ ಲೇಖಕರಾಗಿ ಕೆಲವರು ಹೊರಹೊಮ್ಮುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಕಮ್ಮಟಗಳನ್ನು ನಡೆಯಿಸಿಕೊಡುವವರ ಅಭಿರುಚಿಗಳು ಇಂಥ ಲೇಖಕರ ಮೇಲೆ ಗಾಢವಾದ ಪ್ರಭಾವವನ್ನು ಬೀರಿರುತ್ತವೆ. ಏಕೆಂದರೆ ಹೆಚ್ಚಿನ ಕಮ್ಮಟ ವಿದ್ಯಾರ್ಥಿಗಳಿಗೆ ಶಾಸ್ತ್ರೀಯವಾಗಿ ಸಾಹಿತ್ಯದ ಹಿನ್ನೆಲೆ ಇರುವುದಿಲ್ಲ. ಅಂಥ ಅಭ್ಯರ್ಥಿಗಳು ಕಮ್ಮಟಗಳನ್ನು ತಮ್ಮ ಸೃಜನಶೀಲತೆಯ ಪ್ರಾರಂಭದ ಬಿಂದುವೆಂದು ಮಾತ್ರ ಭಾವಿಸಿ, ಮುಂದೆ ತಮ್ಮತನವನ್ನು ಕಾಣುವ ಸಾಹಿತ್ಯ ರಚಿಸಿದರೆ ಕಮ್ಮಟಗಳು ಸಾರ್ಥಕಗೊಂಡಂತೆಯೇ.

ಕಲ್ಲೇಶ್ ಕುಂಬಾರರು ಇಂಥ ಸಾಹಿತ್ಯ ಕಮ್ಮಟಗಳಿಂದ ಹೊರಬಂದ ಲೇಖಕರಲ್ಲಿ ಒಬ್ಬರು. ಅವರಲ್ಲಿ ಸಾಮಾಜಿಕ ಅನ್ಯಾಯವನ್ನು ತೆರೆದು ತೋರಿಸಬೇಕೆಂಬ ಹುಮ್ಮಸ್ಸಿದೆ. ಬಹುಸಂಖ್ಯಾತ ಜಾತಿಗೆ ಸೇರಿದ ಬಲಾಢ್ಯರು ಮತ್ತು ಮಠಾಧೀಶರು ಕೆಳವರ್ಗದವರನ್ನು ಹೇಗೆ ನಡೆಯಿಸಿಕೊಳ್ಳುತ್ತಾರೆಂಬುದನ್ನು ತೆರೆದು ತೋರಿಸಲೇಬೇಕೆಂಬ ಉದ್ದೇಶವೂ ಇದೆ. ಶೋಷಣೆ ಮುಕ್ತ ಸಮಾಜ ರಚನೆಯಾಗಬೇಕೆಂಬ ಬಯಕೆಯು ಮೂಲದಲ್ಲಿ ಒಂದು ಆರೋಗ್ಯಕರ ಸಿದ್ಧಾಂತವಾಗಿದೆ. ಸೃಜನಶೀಲತೆಯ ಅಡಿಯಲ್ಲಿ ಈ ಸಿದ್ಧಾಂತವು ಬಂದೊಡನೆ ಲೇಖಕರು ರಚಿಸುವ ಪಾತ್ರಗಳಲ್ಲಿ ರಕ್ತ ಮಾಂಸಗಳು ತುಂಬಿಕೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ ಪಾತ್ರಗಳು ಹೆಚ್ಚಿನ ಅಂಶ ಪ್ರಾತಿನಿಧಿಕವಾಗುವ ಅಪಾಯವಿರುತ್ತದೆ. ಕಲ್ಲೇಶ್ ಕುಂಬಾರರು ಸೃಜನಶೀಲತೆಯ ಶಕ್ತಿ ಮತ್ತು ಪ್ರಾತಿನಿಧಿಕ ಸ್ವರೂಪದ ಮಧ್ಯೆ ನಡೆದು ತಮ್ಮ ದಾರಿಯನ್ನು ಕಂಡುಕೊಳ್ಳಲು ಈ ಸಂಕಲನದಲ್ಲಿ ಸಾಹಸಮಯ ಪ್ರಯತ್ನವನ್ನೇ ಮಾಡಿದ್ದಾರೆ.

ಲೇಖಕರ ಭಾಷೆಯಲ್ಲಿ ಪ್ರಾದೇಶಿಕತೆಯ ಸೊಗಡಿದೆ. ಹೀಗಾಗಿ ಪಾತ್ರಗಳು ಅವರು ನಿರ್ಮಿಸುವ ಸನ್ನಿವೇಶಗಳಲ್ಲಿ ಗಟ್ಟಿಯಾಗಿ ಸ್ಥಾಪಿತಗೊಳ್ಳುತ್ತವೆ. ಈ ಸಂಕಲನಕ್ಕೆ ಶೀರ್ಷಿಕೆಯಾಗಿ ಬಂದ 'ಉರಿಯ ನಾಲಿಗೆಯ ಮೇಲೆ' ಕಥೆಯಲ್ಲಿ ರತ್ನವ್ವನ ಪಾತ್ರ ಈ ರೀತಿಯಾಗಿ ಸ್ಥಾಪನೆಯಾಗುತ್ತದೆ. ಅವಳ ಮಗಳ ಮೇಲೆ ಆಸೆ ಪಟ್ಟಿರುವ ಮೇಲ್ವರ್ಗದ ಬಲಾಢ್ಯನೊಬ್ಬನಿಂದಾಗಿ ಬೆಂಕಿಯ ಕೊಂಡವನ್ನು ಹಾಯುವ ಅವಳ ವಾರ್ಷಿಕ ಧಾರ್ಮಿಕ ಸಂಪ್ರದಾಯಕ್ಕೆ ಅಡೆತಡೆ ಉಂಟಾಗಿದೆ. ರತ್ನವ್ವನ ಮನೆತನದವರು ದೇವಿಯ ಆರಾಧಕರಾಗಿ ಬೆಳೆದ ಬಗೆಯನ್ನು ಕಥೆಗಾರರು ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ದೈವದಲ್ಲಿಯ ಅವರ ವಿಶ್ವಾಸವು ಅವರನ್ನು ಶೋಷಣೆಯ ಬಗೆಗೆ ಕುರುಡರನ್ನಾಗಿಸಿದೆ ಎಂಬ ಧ್ವನಿಯು ಕಥೆಯಿಂದ ಹೊರಡುವುದರಲ್ಲಿಯೇ ಅದರ ಧ್ವನಿಪೂರ್ಣ ಸೃಜನಶೀಲತೆ ಅಡಗಿದೆ. ಪ್ರತಿಭಟನೆಯ ನಿರ್ಧಾರದಿಂದ ಕಥೆ ಕೊನೆಗೊಳ್ಳುತ್ತದೆನ್ನೂ ನಿಜ. ಆದರೆ ಕೆಳವರ್ಗದವರ ಇಂಥ ಆಲೋಚನೆಯು ಕ್ರಿಯೆಯಾಗುವ ಮಟ್ಟಕ್ಕೆ ಬಂದೊಡನೆ ಇಲ್ಲಿಯ ಕೆಲವು ಕಥೆಗಳು ಏಕೆ ಸ್ಥಗಿತಗೊಳ್ಳುತ್ತವೆ ಎಂಬುದು ಅರ್ಥವಾಗುವುದಿಲ್ಲ. 'ಕೆಂಡದ ಮಳೆ ಕರೆವಲ್ಲಿ' ಎನ್ನುವ ಕಥೆಯಲ್ಲಿ ಈ ಮೊದಲಿನ ಕಥೆಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಶೋಷಿತಳು ಗರ್ಭಿಣಿಯಾಗುವ ಚಿತ್ರವಿದೆ. ಇಲ್ಲಿಯೂ ಕೂಡ, ತಾಯಿಯು ಕುಡಗೋಲು ಹುಡುಕುವುದರೊಂದಿಗೆ ಕಥೆಯು ಮುಕ್ತಾಯವಾಗುತ್ತದೆ. ಕ್ರಿಯೆಯಿಂದ ಕಥೆಯು ಹಿಂದೆ ಸರಿಯಲು ಕಾರಣ 'ಕ್ರಿಯೆ'ಯು ಸಹಜವಾಗಿ ಹತ್ತಿಕ್ಕಲ್ಪಡುತ್ತದೆ ಎಂಬ ಭಾವನೆ ಇರಬಹುದೇ ಎಂಬ ಸಂಶಯ ಬರುತ್ತದೆ.

'ಅರಿವಿನ ಕೇಡು' ಎನ್ನುವ ಕಥೆಯಲ್ಲಿ ತೋರಿಕೆಗೆ ಹಿಂದೂ ಮತ್ತು ಮುಸಲ್ಮಾನರ ಮಧ್ಯದ ಕೋಮುದ್ವೇಷವು ಕಾಣಿಸಿಕೊಂಡರೂ, ಕಥೆಯನ್ನು ಸೂಕ್ಷ್ಮವಾಗಿ ಪರೀಕ್ಷಿಸಿದಾಗ ಆ ದ್ವೇಷವು ನಿಮಿತ್ತ ಮಾತ್ರವಾಗಿದೆ. ಮನುಷ್ಯನ ಮೂರ್ಖತನವೇ ಕಥೆಯ ಕೇಂದ್ರದಲ್ಲಿದೆ ಎನ್ನಿಸುತ್ತದೆ. ಕ್ಷುಲ್ಲಕವಾದ ಒಂದು ಕೋಳಿ, ತಿಪ್ಪೆಯಲ್ಲಿ ಬಿದ್ದು ಸಾಯುತ್ತಿರುವ ಒಂದು ಹಂದಿ ಮತ್ತು ಒಂದು ಕ್ಷುಲ್ಲಕ ಜಗಳ ಇವುಗಳಿಂದಾಗಿ ದುಡಿದು ತಿನ್ನುವ ಹೆಣ್ಣುಮಗಳೊಬ್ಬಳು ಪಡಬಾರದ ಪಾಡುಪಡುತ್ತಾಳೆ. ಹಾಗೆ ನೋಡಿದರೆ, ಕೊನೆಗೆ ಅವಳು ತನ್ನ ಮಗನೇ ಅಪರಾಧಿ ಎಂಬ ನಿರ್ಧಾರಕ್ಕೆ ಬರುವುದು ಕೂಡ ಅವಳ ದುಡಿತದ ಜೀವನದಿಂದಲೇ ಎದ್ದು ಬಂದ ನೈತಿಕ ಧೈರ್ಯವಾಗಿ ಕಾಣುತ್ತದೆ. ಕುಂಬಾರರ ಮೂಲ ಕಾಳಜಿ ಇರುವುದು ಹಳ್ಳಿಯಲ್ಲಿ ತಮ್ಮ ಹಕ್ಕುಗಳಿಗಾಗಿ ಆಗಾಗ ಹೋರಾಡುವ ಹೆಣ್ಣು ಮಕ್ಕಳ ಕುರಿತಾಗಿಯೇ.

'ಕಿಚ್ಚು', 'ಭವಕ್ಕೆ ಬೀಜವಾದದು', 'ಸಾವು' ಮತ್ತು 'ಕರ್ಪೂರದ ಉರಿ'- ಇವುಗಳು ಕೂಡ ಇಲ್ಲಿಯ ಶಕ್ತಿಯುತವಾದ ಕಥೆಗಳೇ. ಕುಂಬಾರರ ಭಾಷೆ ಶಕ್ತಿಯುತವಾಗಿದೆ ನಿಜ. ಆದರೆ ಒಂದು ಸನ್ನಿವೇಶದಲ್ಲಿ ಠೇಂಕಾರವನ್ನು ಹೊರಡಿಸುವ ಶಬ್ದಗಳಿಗೇ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟರೆ ಮೌನವಾಗಿ, ಸೌಮ್ಯವಾಗಿ ಮತ್ತು ಹದವಾಗಿ ಓದುಗರ ಹೃದಯವನ್ನು ತಟ್ಟುವ ಕ್ರಿಯೆಯು ಮಾಯವಾಗಿ ಬಿಡಬಹುದೆಂಬುದನ್ನು ಕೂಡ ಈ ಕಥೆಗಾರರು ಅರಿಯಬೇಕು. ದುಡಿದ ಹಲವು ಮುಖಗಳಲ್ಲಿ ಶಬ್ದರಾಹಿತ್ಯವೂ ಒಂದು ಮುಖ. ಅದರ ಸಂವಹನ ಶಕ್ತಿಯು ಹೆಚ್ಚು ಅಗಾಧವಾದದ್ದು.

ಇದು ಈ ಲೇಖಕರ ಪ್ರಥಮ ಕಥಾ ಸಂಕಲನವಾಗಿರುವುದರಿಂದ ಇಲ್ಲಿ ಹುಟ್ಟುವ ಭರವಸೆಗಳು ಕಾಲ ಕಳೆದಂತೆ ಮಾಗುತ್ತವೆ. ಅಂಥ ಲಕ್ಷಣಗಳು ಈ ಕಥಾಸಂಕಲನದಲ್ಲಿವೆ. ಈ ಸಂಕಲನಕ್ಕೆ ಪ್ರಹ್ಲಾದ ಅಗಸನಕಟ್ಟೆಯವರು ಒಳ್ಳೆಯ ವಿಮರ್ಶಾತ್ಮಕ ಮುನ್ನುಡಿ ಒದಗಿಸಿದ್ದಾರೆ. ಸೃಜನ್ ಅರ್ಥಪೂರ್ಣವಾದ ಮುಖಪುಟ ರಚಿಸಿದ್ದಾರೆ.


-ಮಾಧವ ಕುಲಕರ್ಣಿ

ಮಾಧವ ಕುಲಕರ್ಣಿ : ಪ್ರಜಾವಾಣಿ – ದಿನಪತ್ರಿಕೆ : ಸಾಪ್ತಾಹಿಕ ಪುರವಣಿ : ಪುಟ ಸಂಖ್ಯೆ : ೫
ಪ್ರಕಟನೆ : ೨೪-೦೭-೨೦೧೧

ಕುಂಬಾರರ 'ಉರಿಯ ನಾಲಿಗೆ...' ನುಡಿವ ಕಠೋರ ಸತ್ಯ

ಯುವ ಕಥೆಗಾರ ಕಲ್ಲೇಶ್ ಕುಂಬಾರ್, ಕನ್ನಡ ಸಾರಸ್ವತ ಲೋಕಕ್ಕೆ ಪರಿಚಿತ ಹೆಸರು. ವಿದ್ಯಾರ್ಥಿ ದಿನಗಳಿಂದಲೂ ಗಂಭೀರವಾಗಿ ಸಾಹಿತ್ಯಾಧ್ಯಯನ ಮಾಡಿಕೊಂಡು ಬಂದಿರುವ ಪ್ರತಿಭಾವಂತರು. ಕಥಾರಚನೆಯಂತೆ, ಕಾವ್ಯ ಹೊಸೆಯುವುದರಲ್ಲೂ ಪಳಗಿದವರು. ನಾಡಿನ ಹೆಸರಾಂತ ಪತ್ರಿಕೆಗಳಲ್ಲಿ ಅವರ ಕತೆ, ಕವನಗಳು ಆಗಾಗ ಪ್ರಕಟವಾಗುತ್ತಿರುತ್ತವೆ. 'ಪ್ರಜಾವಾಣಿ' ವಾರ್ಷಿಕ ಕಥಾಸ್ಪರ್ಧೆಯಲ್ಲಿ ಕುಂಬಾರ ಅವರಿಗೆ ಬಹುಮಾನ ಬಂದಿರುವದು, ಅವರ ಸೃಜನಶೀಲ ಸಂಪತ್ತಿಗೆ ಸಾಕ್ಷಿ.

ಪ್ರಸ್ತುತ 'ಉರಿಯ ನಾಲಿಗೆಯ ಮೇಲೆ' ಕಥಾಸಂಕಲನ ಒಂಬತ್ತು ಕತೆಗಳ ಸುಂದರ ಗುಚ್ಛ. ನಿರ್ಭಾವುಕತೆಯಿಂದ ತನ್ನ ಸುತ್ತಲಿನವರ ಬದುಕನ್ನು, ಸೂಕ್ಷ್ಮ ಸಂವೇದನೆಗಳಿಂದ ನೋಡುವ ಕತೆಗಾರ ಕುಂಬಾರ್. ಕಥೆ ಹೆಣೆಯುವಲ್ಲಿ ತೋರುವ ಕುಶಲಗಾರಿಕೆ ಮೆಚ್ಚುವಂಥದ್ದು. ಎಂಥ ಸನ್ನಿವೇಶದಲ್ಲೂ ಅವರು ಭಾವುಕತೆಗೆ ಒಳಗಾಗುವದಿಲ್ಲ. ಒಣ ಆದರ್ಶಗಳನ್ನು ಹೆಗಲಿಗೇರಿಸಿಕೊಂಡು ನಮ್ಮ ಎಷ್ಟೋ ಜನ ಗವ್ಯರ ಹಾಗೆ ಹೆಣಗಾಡುವದಿಲ್ಲ. ಇದು ಕುಂಬಾರ'ರ ಸ್ಪೆಷಾಲಿಟಿ.



ಲೋಕದ ರೀತಿ-ರಿವಾಜುಗಳಿಗೆ ತಲೆ ಕೆಡಿಸಿಕೊಳ್ಳದೆ, ಅವುಗಳ ಕಿಡಿಬತ್ತಿ, ಕಿಮ್ಮತ್ತಿನ ಪುಂಬುತನಕ್ಕೆ ಕೈ ಹಾಕುವದಿಲ್ಲ. ಕಂಡುಂಡ ಅನುಭವಗಳ ಸಂಕೀರ್ಣ ರೂಪಕ್ಕೆ ಎಳ್ಳಷ್ಟು ಧಕ್ಕೆ ತಾರದೆ, ಸಹಜವೆಂಬಂತೆ ಅಕ್ಷರಾಭ್ಯಾಸ ಮಾಡಿಸುತ್ತಾರೆ.

ಸಂಕಲನಕ್ಕೆ ಹೆಸರು ಹೊತ್ತಿರುವ ಕಥೆ 'ಉರಿಯ ನಾಲಿಗೆಯ ಮೇಲೆ'ಯ ರತ್ನವ್ವ, 'ಚಿಟ್ಟಿ' ಕತೆಯ ಮುರಿಗೆವ್ವ, 'ಭವಕ್ಕೆ ನಿರ್ವಾಣ'ದ ಪಾರವ್ವ ಮತ್ತು ಆಕೆಯ ಮಗಳು ಸಂಗವ್ವ, 'ಕೆಂಡದ ಮಳೆ ಕರೆವಲ್ಲಿ'ನ ಬಸವ್ವ, 'ಅರಿವಿನ ಕೇಡು' ಕತೆಯ ತಿಪ್ಪೆಮನಿ ಬಸವ್ವ, 'ರಿಣ ತಪ್ಪಿದಲ್ಲಿ' ಕತೆಯ ಬಸವ್ವರಂಥ ಪಾತ್ರಗಳು ನಮ್ಮ ನೆರೆಮನೆಯವರಂತೆ ಕಾಣುತ್ತಾರೆ. ಇದಕ್ಕೆ ಕತೆಗಾರ ಕುಂಬಾರ್ ಬೆಳೆದು ಬಂದಿರುವ ಗ್ರಾಮೀಣ ಸಂಸ್ಕೃತಿ ಮತ್ತು ಪರಿಸರ ಕಾರಣವೆನ್ನಬಹುದು.

ನಮ್ಮ ಜನರಲ್ಲಿನ ಮೋಸ, ವಂಚನೆ, ಕೃತಘ್ನತೆ, ಶೋಷಣೆ, ಕಾಮ, ಹಾದರ ಇಲ್ಲಿನ ಕಥೆಗಳಲ್ಲಿ ಯಥೇಷ್ಟವಾಗಿ ಬಂದಿರುವಂತೆ, ಮುಗ್ಧತೆ, ಮೂಢನಂಬಿಕೆ, ದೈವ ನಂಬಿಕೆ, ಸಹಜೀವನಗಳಂಥ ಉದಾತ್ತ ಭಾವನೆಗಳ ಜನರೂ ಇಲ್ಲಿದ್ದಾರೆ.

ಇಲ್ಲಿನ ಕಥೆಗಳಲ್ಲಿ ವಸ್ತು ವೈವಿಧ್ಯತೆ ಇದೆ. ಒಂದು ಘಟನೆ, ಒಬ್ಬ ವ್ಯಕ್ತಿ, ಯಾವುದೋ ಒಂದು ಸ್ಥಳ... ಹೀಗೆ ಕತೆಗಾರನಿಗೆ ಆಹಾರವಾಗುತ್ತದೆ. ಕಥೆ ಕಟ್ಟುವಲ್ಲೂ ಕೂಡಾ, ಕುಂಬಾರ'ರ ಶ್ರದ್ಧೆ ಸೋಲುವದಿಲ್ಲ. ಸರಳ ಸೂತ್ರಕ್ಕೆ ಒಗ್ಗದ ವಸ್ತು, ತನ್ನ ವಿಭಿನ್ನತೆಯಿಂದ ಓದುಗರನ್ನು ಸೆರೆಹಿಡಿಯುತ್ತದೆ. ಸಮಾಜ ಕೇಂದ್ರಿತ ಕಥಾವಸ್ತು ಮುಖ್ಯವಾಗಿದ್ದರೂ, ಪಾತ್ರಗಳ ವ್ಯಕ್ತಿಗತ ತಲ್ಲಣಗಳು ನಮ್ಮನ್ನು ಆತ್ಮಾವಲೋಕನಕ್ಕೆ ದೂಡುತ್ತವೆ. ನಾಗರಿಕ ಪ್ರಪಂಚದ ಹಣ, ಪ್ರತಿಷ್ಠೆ, ಸ್ಥಾನ-ಮಾನ, ಅಧಿಕಾರ-ವಿದ್ಯೆಗಳು ನಮ್ಮ ಪಾರಂಪಾರಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಧಿಕ್ಕರಿಸುವ ಪರಿಗೆ ಸ್ಪಂದಿಸುವ ಕಥೆಗಳು ಇಲ್ಲಿವೆ.

ಇಂದಿನ ಸಾಹಿತ್ಯದ ಯಾವ ಇಜಂಗಳನ್ನು ತಲೆಗೇರಿಸಿಕೊಳ್ಳದ ಕುಂಬಾರ್, ರೋಷ, ಆಕ್ರೋಶ, ಕ್ರಾಂತಿ, ಬಂಡಾಯ, ಹೋರಾಟ ಮುಂತಾದ ಸ್ಲೋಗನ್‌ಗಳನ್ನು ಕಥೆಯಲ್ಲಿ ತುರುಕುವದಿಲ್ಲ. ಬೂದಿ ಮುಚ್ಚಿದ ಕೆಂಡದ ಹಾಗೆ ತಮ್ಮ ಭಾವನೆಗಳನ್ನು ಅಲ್ಲಲ್ಲಿ ಹೊರಚೆಲ್ಲುತ್ತಾರೆ. ಹೀಗಾಗಿ, ಕುಂಬಾರ್ ಒಬ್ಬ ಗಂಭೀರ ಪ್ರಕೃತಿಯ ಚಿಂತನಶೀಲ ಬರೆಹಗಾರರಾಗಿ, ಭರವಸೆ ಮೂಡಿಸುತ್ತಾರೆ.

ತನ್ನೆಲ್ಲ ಸಂವೇದನೆಗಳನ್ನು ನೇರವಾಗಿ ಹೇಳುವಲ್ಲಿ ಕತೆಗಾರನ ಮುಖ್ಯ ಕಾಳಜಿ ಕಾಣಬಹುದಾಗಿದೆ. ಉಪಮೆ, ಅಲಂಕಾರ, ಭಾಷಾ ಚಮತ್ಕಾರಗಳಂಥ ಗಿಮಿಕ್‌ಗಳಿಂದ ದೂರವಿರಬಯಸುವ ಕುಂಬಾರ'ರಿಗೆ ಕಥೆ ಕಟ್ಟುವದು ಒಂದು ಕಲೆಗಾರಿಕೆಯಾಗಿ ಪರಿಣಮಿಸಿಲ್ಲ. ಪರಕಾಯ ಪ್ರವೇಶದ ಮೂಲಕ, ತನ್ನೊಳಗೆ ಹುದುಗಿರುವ ಭಾವನೆಗಳನ್ನು ಓದುಗರೊಂದಿಗೆ ಹಂಚಿಕೊಳ್ಳುವ ಇರಾದೆಗೆ ಕುಂಬಾರ್ ಮುಂದಾಗುತ್ತಾರೆ. ('ಹಂದಿ' ಕತೆ ಇದಕ್ಕೆ ಉದಾಹರಣೆ)

ವ್ಯವಸ್ಥೆಯ ವಿರುದ್ಧ ತನ್ನೆಲ್ಲ ಸಿಟ್ಟನ್ನು, ಹುಟ್ಟಿಯಂಚಿನಲ್ಲಿ ಹಿಡಿದಿಟ್ಟುಕೊಳ್ಳುವ, 'ಉರಿಯ ನಾಲಿಗೆಯ ಮೇಲೆ' ಕತೆಯ ರತ್ನವ್ವಳಿಗೆ ಸೇಡಿಗಿಂತಲೂ ಮಗಳು ಯಲ್ಲವ್ವಳ ಭವಿಷ್ಯ ಮುಖ್ಯವಾಗುತ್ತದೆ. ಈ ಸಂಕಲನದ ಬಹುತೇಕ ಶೋಷಿತ ಪಾತ್ರಗಳು ಕೆಳಜಾತಿಗೆ ಸೇರಿದವು. (ಸ್ತ್ರೀಯರಲ್ಲಿ 'ಬಸವ್ವ' ಹಾಗೂ ಪುರುಷರಲ್ಲಿ 'ಶಿವ, ಶಿವರಾಯ' ಹೆಸರಿನ ಪಾತ್ರಗಳು ಬಹಳವಾಗಿವೆ)

ಹಾಗಂದ ಮಾತ್ರಕ್ಕೆ ಇಲ್ಲಿರುವದೆಲ್ಲವೂ ಸರ್ವೋತ್ಕೃಷ್ಟವೆಂದಾಗಲಿ, ಪರಿಪೂರ್ಣವೆಂದಾಗಲಿ ಹೇಳುವದು ತಪ್ಪಾದೀತು. ಹಾಗೆ ನೋಡಿದರೆ, ಯಾವುದೂ ನಮ್ಮಲ್ಲಿ ದೋಷರಹಿತವಾಗಿಲ್ಲ. ನಡೆಯುವವರು ಎಡವುವಂತೆ, ಬರೆಯುವವರಲ್ಲಿ ಒರೆ ಕೋರೆಗಳಿರುವದು ಸಹಜ. ಸ್ನೇಹದ ಔದಾರ್ಯಕ್ಕೆ ಕಟ್ಟುಬಿದ್ದು, ಇಲ್ಲದ ಉಪಾಧಿಗಳನ್ನು ತುರುಕಿ ಬರೆಯುವದು, ಬೆಳೆಯುವ ಸಾಹಿತಿಗೆ ಒಳಿತು ಮಾಡಲಿಕ್ಕಿಲ್ಲ. ಆ ಕಾರಣಕ್ಕೆ ಒಂದೆರಡು ಸೂಚನೆಗಳು. ಅತಿಯಾದ ವಿವರಗಳು ಕತೆಗೆ ಭಾರವಾಗುತ್ತವೆ ಎಂಬುದನ್ನು ಕತೆಗಾರರು ಗಮನಿಸಬೇಕು. ಭಾಷೆಯ ಮೇಲೆ ಹಿಡಿತ ಸಾಧಿಸಿದಂತಿಲ್ಲ. ನಿರೂಪಣಾ ಶೈಲಿಗೊಂದು ಹದ ಬರುತ್ತದೆ. ಈ ನಿಟ್ಟಿನಲ್ಲಿ ಕಲ್ಲೇಶ್ ಕುಂಬಾರ್ ಆಲೋಚಿಸಲಿ.

ಉರಿಯ ನಾಲಿಗೆಯ ಮೇಲೆ
ಲೇ: ಕಲ್ಲೇಶ್ ಕುಂಬಾರ್
ಪ್ರ: ರೂಪ ಪ್ರಕಾಶನ, ಮೈಸೂರು
ಪುಟ:160 ; ಬೆಲೆ ರೂ. 100

* ಮಲ್ಲಿಕಾರ್ಜುನ ಹುಲಗಬಾಳಿ
ಬನಹಟ್ಟಿ


ಮಲ್ಲಿಕಾರ್ಜುನ ಹುಲಗಬಾಳಿ ಬನಹಟ್ಟಿ : ಲೋಕದರ್ಶನ ದಿನಪತ್ರಿಕೆ : ಸಾಪ್ತಾಹಿಕ ಪುರವಣಿ
ಪುಟ ಸಂಖ್ಯೆ : ೦೫ : ಪ್ರಕಟನೆ : ೦೬-೧೧-೨೦೧೧

'ಉರಿಯ ನಾಲಿಗೆಯ ಮೇಲೆ'

ಭಾವದ ಅನಾವರಣ

ಉರಿಯ ನಾಲಿಗೆಯ ಮೇಲೆ
ಲೇ: ಕಲ್ಲೇಶ್ ಕುಂಬಾರ್
ಪ್ರ: ರೂಪ ಪ್ರಕಾಶನ, ಮೈಸೂರು
ಪು: 100 ; ಬೆಲೆ ರೂ. 100

ಯುವ ಕಥೆಗಾರ ಕಲ್ಲೇಶ್ ಕುಂಬಾರ್, ಕನ್ನಡ ಸಾರಸ್ವತ ಲೋಕಕ್ಕೆ ಪರಿಚಿತ ಹೆಸರು. ವಿದ್ಯಾರ್ಥಿ ದಿನಗಳಿಂದಲೂ ಗಂಭೀರವಾಗಿ ಸಾಹಿತ್ಯಾಧ್ಯಯನ ಮಾಡಿಕೊಂಡು ಬಂದಿರುವ ಪ್ರತಿಭಾವಂತರು.



ಕಥೆಗಾರರಾದಂತೆ, ಕಾವ್ಯ ಹೊಸೆಯುವದರಲ್ಲೂ ಪಳಗಿದವರು. ನಾಡಿನ ಹೆಸರಾಂತ ಪತ್ರಿಕೆಗಳಲ್ಲಿ ಅವರ ಕತೆ, ಕವನಗಳು ಆಗಾಗ ಪ್ರಕಟವಾಗುತ್ತಿರುತ್ತವೆ. 'ಪ್ರಜಾವಾಣಿ' ವಾರ್ಷಿಕ ಕಥಾಸ್ಪರ್ಧೆಯಲ್ಲಿ ಕುಂಬಾರ್ ಅವರಿಗೆ ಬಹುಮಾನ ಬಂದಿರುವದು, ಅವರ ಸೃಜನಶೀಲ ಸಂಪತ್ತಿಗೆ ಸಾಕ್ಷಿ.

ಪ್ರಸ್ತುತ 'ಉರಿಯ ನಾಲಿಗೆಯ ಮೇಲೆ' ಕಥಾಸಂಕಲನ ಒಂಬತ್ತು ಕತೆಗಳ ಸುಂದರ ಗುಚ್ಛ. ನಿರ್ಭಾವುಕತೆಯಿಂದ ತನ್ನ ಸುತ್ತಲಿನವರ ಬದುಕನ್ನು, ಸೂಕ್ಷ್ಮ ಸಂವೇದನೆಗಳಿಂದ ನೋಡುವ ಕತೆಗಾರ ಕುಂಬಾರ್, ಕಥೆ ಹೆಣೆಯುವಲ್ಲಿ ತೋರುವ ಕುಶಲಗಾರಿಕೆ ಮೆಚ್ಚುವಂಥದ್ದು. ಎಂಥ ಸನ್ನಿವೇಶದಲ್ಲೂ ಅವರು ಭಾವುಕತೆಗೆ ಒಳಗಾಗುವದಿಲ್ಲ. ಒಣ ಆದರ್ಶಗಳನ್ನು ಹೆಗಲಿಗೇರಿಸಿಕೊಂಡು ನಮ್ಮ ಎಷ್ಟೋ ಜನ ನವ್ಯರ ಹಾಗೆ ಹೆಣಗಾಡುವದಿಲ್ಲ. ಇದು ಕುಂಬಾರ್‌ರ ಸ್ಪೆಷಾಲಿಟಿ.

ಲೋಕದ ರೀತಿ-ರಿವಾಜುಗಳಿಗೆ ತಲೆ ಕೆಡಿಸಿಕೊಳ್ಳದೆ, ಅವುಗಳ ತಿದಿಒತ್ತಿ, ತಿದ್ದುವ ಹುಂಬುತನಕ್ಕೆ ಕೈ ಹಾಕುವದಿಲ್ಲ. ಕಂಡುಂಡ ಅನುಭವಗಳ ಸಂಕೀರ್ಣ ರೂಪಕ್ಕೆ ಎಳ್ಳಷ್ಟು ದಕ್ಕೆ ತಾರದೆ, ಸಹಜವೆಂಬತೆ ಅಕ್ಷರಧಾರಣೆ ಮಾಡಿಸುತ್ತಾರೆ.

ಸಂಕಲನದ ಹೆಸರು ಹೊತ್ತಿರುವ ಕಥೆ, 'ಉರಿಯ ನಾಲಿಗೆಯ ಮೇಲೆ'ಯ ರತ್ನವ್ವ, 'ಕಿಚ್ಚು' ಕತೆಯ ಮಲ್ಲಿಗೆವ್ವ, 'ಭವಕ್ಕೆ ಬೀಜವಾದ'ದ ಪಾರವ್ವ, ಮತ್ತು ಆಕೆಯ ಮಗಳು ಸಂಗವ್ವ, 'ಕೆಂಡದ ಮಳೆ ಕರೆವಲ್ಲಿ'ನ ಬಸವ್ವ, 'ಆರಿವಿನ ಕೇಡು' ಕತೆಯ ತಿಪ್ಪೆಮನೆ ಬಸವ್ವ, 'ರಣ ಕಟ್ಟದಲ್ಲಿ' ಕತೆಯ ಬಸವ್ವರಂಥ ಪಾತ್ರಗಳು ನಮ್ಮ ನೆರೆಮನೆಯವರಂತೆ ಕಾಣುತ್ತಾರೆ. ಇದಕ್ಕೆ ಕತೆಗಾರ ಕುಂಬಾರ್ ಬೆಳೆದು ಬಂದಿರುವ ಗ್ರಾಮೀಣ ಸಂಸ್ಕೃತಿ ಮತ್ತು ಪರಿಸರ ಕಾರಣವೆನ್ನಬಹುದು.

ನಮ್ಮ ಜನರಲ್ಲಿನ ಮೋಸ, ವಂಚನೆ, ಕೃತಘ್ನತೆ, ಶೋಷಣೆ, ಕಾಮ, ಹಾದರ ಇಲ್ಲಿನ ಕಥೆಗಳಲ್ಲಿ ಯಥೇಷ್ಟವಾಗಿ ಬಂದಿರುವಂತೆ, ಮುಗ್ಧತೆ, ಮೂಢನಂಬಿಕೆ, ದೈವ ನಂಬಿಕೆ, ಸಹಜೀವನಗಳಂಥ ಉದಾತ್ತ ಭಾವನೆಗಳ ಜನರೂ ಇಲ್ಲಿದ್ದಾರೆ.

ಇಲ್ಲಿನ ಕಥೆಗಳಲ್ಲಿ ವಸ್ತು ವೈವಿಧ್ಯತೆ ಇದೆ. ಒಂದು ಘಟನೆ, ಒಬ್ಬ ವ್ಯಕ್ತಿ, ಯಾವುದೋ ಒಂದು ಸ್ಥಳ.... ಹೀಗೆ ಕತೆಗಾರನಿಗೆ ಆಹಾರವಾಗುತ್ತದೆ. ಕಥೆ ಕಟ್ಟುವಲ್ಲೂ ಕೂಡಾ, ಕುಂಬಾರ್‌ರ ಶ್ರದ್ಧೆ ಸೋಲುವದಿಲ್ಲ. ಸರಳ ಸೂತ್ರಕ್ಕೆ ಒಡ್ಡದ ವಸ್ತು, ತನ್ನ ವಿಭಿನ್ನತೆಯಿಂದ ಓದುಗರನ್ನು ಸೆರೆಹಿಡಿಯುತ್ತದೆ. ಸಮಾಜ ಕೇಂದ್ರಿತ ಕಥಾವಸ್ತು ಮುಖ್ಯವಾಗಿದ್ದರೂ, ಪಾತ್ರಗಳ ವ್ಯಕ್ತಿಗತ ತಲ್ಲಣಗಳು ನಮ್ಮನ್ನು ಆತ್ಮಾವಲೋಕನಕ್ಕೆ ದೂಡುತ್ತವೆ. ನಾಗರಿಕ ಪ್ರಪಂಚದ ಹಣ, ಪ್ರತಿಷ್ಠೆ, ಸ್ಥಾನ-ಮಾನ, ಅಧಿಕಾರ-ವಿದ್ಯೆಗಳು ನಮ್ಮ ಪಾರಂಪಾರಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಧಿಕ್ಕರಿಸುವ ಪರಿಗೆ ಸ್ಪಂದಿಸುವ ಕಥೆಗಳು ಇಲ್ಲಿವೆ.

ಇಂದಿನ ಸಾಹಿತ್ಯದ ಯಾವ ಇಜ಼್ಂಗಳನ್ನು ತಲೆಗೇರಿಸಿಕೊಳ್ಳದ ಕುಂಬಾರ್, ರೋಷ, ಆಕ್ರೋಶ, ಕ್ರಾಂತಿ, ಬಂಡಾಯ, ಹೋರಾಟ ಮುಂತಾದ ಸ್ಲೋಗನ್‌ಗಳನ್ನು ಕಥೆಯಲ್ಲಿ ತುರುಕುವದಿಲ್ಲ. ಬೂದಿ ಮುಚ್ಚಿದ ಕೆಂಡದ ಹಾಗೆ ತಮ್ಮ ಭಾವನೆಗಳನ್ನು ಅಲ್ಲಲ್ಲಿ ಹೊರಚೆಲ್ಲುತ್ತಾರೆ. ಹೀಗಾಗಿ, ಕುಂಬಾರ್ ಒಬ್ಬ ಗಂಭೀರ ಪ್ರಕೃತಿಯ ಚಿಂತನಶೀಲ ಬರೆಹಗಾರರಾಗಿ, ಭರವಸೆ ಮೂಡಿಸುತ್ತಾರೆ.

ತನ್ನೆಲ್ಲ ಸಂವೇದನೆಗಳನ್ನು ನೇರವಾಗಿ ಹೇಳುವಲ್ಲಿ ಕತೆಗಾರನ ಮುಖ್ಯ ಕಾಳಜಿ ಕಾಣಬಹುದಾಗಿದೆ. ಉಪಮೆ, ಅಲಂಕಾರ, ಭಾಷಾ ಚಮತ್ಕಾರಗಳಂಥ ಗಿಮಿಕ್‌ಗಳಿಂದ ದೂರವಿರಬಯಸುವ ಕುಂಬಾರ್‌ರಿಗೆ ಕಥೆ ಕಟ್ಟುವದು ಒಂದು ಕಲೆಗಾರಿಕೆಯಾಗಿ ಪರಿಣಮಿಸಿಲ್ಲ. ಪರಕಾಯ ಪ್ರವೇಶದ ಮೂಲಕ, ತನ್ನೊಳಗೆ ಹುದುಗಿರುವ ಭಾವನೆಗಳನ್ನು ಓದುಗರೊಂದಿಗೆ ಹಂಚಿಕೊಳ್ಳುವ ಇರಾದೆಗೆ ಕುಂಬಾರ್ ಮುಂದಾಗುತ್ತಾರೆ. ('ಹಂದಿ' ಕತೆ ಇದಕ್ಕೆ ಉದಾಹರಣೆ)

ವ್ಯವಸ್ಥೆಯ ವಿರುದ್ಧ ತನ್ನೆಲ್ಲ ಸಿಟ್ಟನ್ನು, ತುಟಿಯಂಚಿನಲ್ಲಿ ಹಿಡಿದಿಟ್ಟುಕೊಳ್ಳುವ, 'ಉರಿಯ ನಾಳಿಗೆಯ ಮೇಲೆ' ಕತೆಯ ರತ್ನವ್ವಳಿಗೆ ಸೇಡಿಗಿಂತಲೂ ಮಗಳು ಯಲ್ಲವ್ವಳ ಭವಿಷ್ಯ ಮುಖ್ಯವಾಗುತ್ತದೆ. ಈ ಸಂಕಲನದ ಬಹುತೇಕ ಶೋಷಿತ ಪಾತ್ರಗಳು ಕೆಳಜಾತಿಗೆ ಸೇರಿದವು. (ಸ್ತ್ರೀಯರಲ್ಲಿ 'ಬಸವ್ವ' ಹಾಗೂ ಪುರುಷರಲ್ಲಿ 'ಶಿವ, ಶಿವರಾಯ' ಹೆಸರಿನ ಪಾತ್ರಗಳು ಬಹಳವಾಗಿವೆ)

ಹಾಗಂದ ಮಾತ್ರಕ್ಕೆ ಇಲ್ಲಿರುವದೆಲ್ಲವೂ ಸಂಪೂರ್ಣತೆ ಪಡೆದಿವೆಂದಾಗಲಿ, ಪರಿಪೂರ್ಣವೆಂದಾಗಲಿ ಹೇಳುವದು ತಪ್ಪಾದೀತು. ಹಾಗೆ ನೋಡಿದರೆ, ಯಾವುದೂ ನಮ್ಮಲ್ಲಿ ದೋಷರಹಿತವಾಗಿಲ್ಲ. ನಡೆಯುವವರು ಎಡವುವಂತೆ, ಬರೆಯುವವರಲ್ಲಿ ಓರೆ ಕೋರೆಗಳಿರುವದು ಸಹಜ. ಸ್ನೇಹದ ಔದಾರ್ಯಕ್ಕೆ ಕಟ್ಟುಬಿದ್ದು, ಇಲ್ಲದ ಉಪಾಧಿಗಳನ್ನು ತುರುಕಿ ಬರೆಯುವದು, ಬೆಳೆಯುವ ಸಾಹಿತಿಗೆ ಒಳಿತು ಮಾಡಲಿಕ್ಕಿಲ್ಲ. ಆ ಕಾರಣಕ್ಕೆ ಒಂದೆರಡು ಸೂಚನೆಗಳು. ಅತಿಯಾದ ವಿವರಗಳು ಕಥೆಗೆ ಭಾರವಾಗುತ್ತವೆ ಎಂಬುದನ್ನು ಕತೆಗಾರರು ಗಮನಿಸಬೇಕು. ಭಾಷೆಯ ಮೇಲೆ ಹಿಡಿತ ಸಾಧಿಸಿದಂತೆಲ್ಲ, ನಿರೂಪಣಾ ಶೈಲಿಗೊಂದು ಹದ ಬರುತ್ತದೆ. ಈ ನಿಟ್ಟಿನಲ್ಲಿ ಕಲ್ಲೇಶ್ ಕುಂಬಾರ್ ಆಲೋಚಿಸಲಿ.


– ಮಲ್ಲಿಕಾರ್ಜುನ ಹುಲಗಬಾಳಿ
ಬನಹಟ್ಟಿ

ಮಲ್ಲಿಕಾರ್ಜುನ ಹುಲಗಬಾಳಿ ಬನಹಟ್ಟಿ : ಜನಮತತರಂಗ : ಪ್ರ : ಸೆಪ್ಟೆಂಬರ್ ೨೦೧೧:
ಪುಟ ಸಂಖ್ಯೆ : ೦೯

ಉರಿಯ ನಾಲಿಗೆಯ ಮೇಲೆ

ಒಂದು ದಶಕದಿಂದ ಕಥೆಗಳನ್ನು ಬರೆಯುತ್ತ ಬಂದಿರುವ ಕಲ್ಲೇಶ ಕುಂಬಾರ್ ಇದೀಗ ತಮ್ಮ ಮೊದಲ ಕಥಾಸಂಗ್ರಹ 'ಉರಿಯ ನಾಲಿಗೆಯ ಮೇಲೆ' ಪ್ರಕಟಿಸಿದ್ದಾರೆ. ಉತ್ತರ ಕರ್ನಾಟಕದ 'ಉರಿ'ಯನ್ನು, ಅಲ್ಲಿನ ಬದುಕಿನ ಪರಿಯನ್ನು ಇಲ್ಲಿನ ಅವರ ಕಥೆಗಳು ಅನನ್ಯವಾಗಿ ಚಿತ್ರಿಸುತ್ತವೆ.

ಕಲ್ಲೇಶ್ ಅವರ ಕಥೆಗಳು ಕನ್ನಡದ ದಲಿತ– ಬಂಡಾಯ ಕಥೆಗಳನ್ನು ನೆನಪಿಸುತ್ತವೆ ಎನ್ನುವುದು ಈ ಕಾಲದಲ್ಲಿ ಕುತೂಹಲ ಹುಟ್ಟಿಸುತ್ತವೆ. ಆದರೆ, ಅವರ ಕಥೆಗಳಲ್ಲಿನ ಶೋಷಣೆ, ಕ್ರೌರ್ಯ, ತುಳಿತ ಇವೆಲ್ಲವೂ ನಮ್ಮ ಕಾಲದ ವಾಸ್ತವವಾಗಿವೆ. ಎಂದೇ ಅವು ಕಲ್ಲೇಶರ ಕಥೆಗಳಲ್ಲಿ ಮತ್ತೆ ಜೀವ ಪಡೆದಿವೆ.



(ಕಥಾ ಸಂಕಲನ)
ಲೇ: ಕಲ್ಲೇಶ ಕುಂಬಾರ್; ಪುಟ: 160;
ಬೆಲೆ: ರೂ 100; ಪ್ರ: ರೂಪ ಪ್ರಕಾಶನ,
ಹೊಸಬಂಡಿಕೇರಿ, ಮೈಸೂರು– 570 004.

ಇಲ್ಲಿನ ಒಂಬತ್ತು ಕಥೆಗಳಲ್ಲಿ 'ಉರಿಯ ನಾಲಿಗೆಯ ಮೇಲೆ', 'ಕಿಚ್ಚು', 'ಕೆಂಡದ ಮಳೆ ಕರೆವಲ್ಲಿ', 'ಅರಿವಿನ ಕೇಡು' 'ಭವಕ್ಕೆ ಬೀಜವಾದುದು', 'ಹಂದಿ' ಹೆಚ್ಚಿನ ಗಮನವನ್ನು ಸೆಳೆಯುತ್ತವೆ. ಇವು ಲೋಕದ ದಾರುಣ ಮುಖವನ್ನು, ಸಂಕೀರ್ಣತೆಯನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಿಸುತ್ತವೆ. ಆದ್ದರಿಂದ ಅವು ಓದುಗರ ಮೆಚ್ಚುಗೆಗೆ ಪಾತ್ರವಾಗುತ್ತವೆ.

ತಮ್ಮದೇ ಆದ ಕಥನ ಕ್ರಮವೊಂದನ್ನು ಹುಡುಕಿಕೊಂಡು ಬರೆಯುತ್ತಿರುವ ಕಲ್ಲೇಶ ಕುಂಬಾರ್ ತಮ್ಮ ಕಥೆಗಳಲ್ಲಿ ಚಿತ್ರಿಸಿರುವ ನೈಜ ಜಗತ್ತು ಓದುಗನಲ್ಲಿ ಬೆರಗನ್ನು ಹುಟ್ಟಿಸುತ್ತದೆ. ಆದರೆ, ಎಲ್ಲದಕ್ಕೂ ಕಥೆಯಲ್ಲಿ ಒಂದು ಪರಿಹಾರ ಹುಡುಕುವ, ಒಡಲಾವಣೆಗೆ ತುಯ್ಯುವ ಗುಣದಿಂದಾಗಿ ಅವರಿನ್ನೂ ದಲಿತ ಬಂಡಾಯದ ಮನಸ್ಥಿತಿಯಿಂದ ಹೊರಬಂದಿಲ್ಲ ಎಂದು ಅನಿಸುತ್ತದೆ. ಅದರಿಂದ ಬಿಡಿಸಿಕೊಂಡು ಬರೆದರೆ ಅವರು ಅತ್ಯುತ್ತಮ ಕಥೆಗಳನ್ನು ಕನ್ನಡ ಕಥಾ ಲೋಕಕ್ಕೆ ನೀಡಬಲ್ಲರು.

ಸಂಪಾದಕರು : ಸಂದೀಪ ನಾಯಕ : ಮಯೂರ ಮಾಸಿಕ ಪತ್ರಿಕೆ : ಪುಟ ಸಂಖ್ಯೆ : ೧೨೫
ಪ್ರಕಟನೆ : ಜೂನ್ ೨೦೧೧

: ಲೇಖಕರ ಒಟ್ಟು ಪ್ರಶಸ್ತಿಗಳು :

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪ್ರಮಾಣ ಪತ್ರ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗವು, ಕೂಡಿಗೆ ಗ್ರಾಮ (ಸೋಮವಾರ ಪೇಟೆ ತಾಲ್ಲೂಕು) ದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಕೊಡಗು ಜಿಲ್ಲಾ ಘಟಕ, ಮಡಿಕೇರಿ ಸಹಯೋಗದೊಂದಿಗೆ ದಿ. 31.01.2010 ರಿಂದ 02.02.2010 ರವರೆಗೆ ನಡೆದ ಯುವ ಕಥೆಗಾರರಿಗಾಗಿ ಕಥಾಕಮ್ಮಟ ದಲ್ಲಿ ಶ್ರೀಮತಿ/ ಶ್ರೀ ಕಲ್ಲೇಶ ಕುಂಬಾರ ಕ್ರಿಯಾಶೀಲರಾಗಿ ಭಾಗವಹಿಸಿದ್ದಾರೆ.

ಡಾ. ಮಲ್ಲಿಕಾರ್ಜುನ ಹಣೇನೂರು
ಮುಖ್ಯಸ್ಥರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಶ್ರೀ ಟಿ.ಪಿ.ರಮೇಶ್
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು
ಕೊಡಗು ಘಟಕ, ಮಡಿಕೇರಿ.

ಡಾ. ಅಮರೇಶ ನುಗಡೋಣಿ
ನಿರ್ದೇಶಕರು
ಕಥಾಕಮ್ಮಟ

ಅಜೂರ ಪುಸ್ತಕ ಪ್ರತಿಷ್ಠಾನ
ಹಾರೂಗೇರಿ.
ತಾ.ರಾಯಬಾಗ ಜಿ.ಬೆಳಗಾವಿ.

ಅತ್ಯುತ್ತಮ ಪುಸ್ತಕ ಪ್ರಶಸ್ತಿ
೨೦೦೭



ಶ್ರೀ ಕಲ್ಲೇಶ ಕುಂಬಾರ ಅವರ

"ಪುರುಷ ದಾರಿಯ ಮೇಲೆ"

ಕೃತಿಗೆ ೨೦೦೭ರ ಅತ್ಯುತ್ತಮ ಪುಸ್ತಕ
ಪ್ರಶಸ್ತಿ ಪ್ರದಾನ ಮಾಡಲಾಯಿತು

ಕಾರ್ಯದರ್ಶಿ
ಡಾ.ವಿ.ಎಸ್.ಮಾಳಿ

ಅಧ್ಯಕ್ಷರು
ಪ್ರಾ.ಬಸವರಾಜ ಅಜೂರ

ಗೌರವಾಧ್ಯಕ್ಷರು
ಮಹಾಸ್ವಾಮಿಗಳು, ಹಂದಿಗುಂದ-ಅಡಿ.

ಬೆಳಗಾವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನ, ಬೆಳಗಾವಿ

೧೮೧೦, ಕೇಳಕರಬಾಗ, ಬೆಳಗಾವಿ

ಡಾ. ದಿ. ಹಣಮಂತರಾವ ಸವಣೂರ ಸ್ಮಾರಕ ದತ್ತಿ ಪ್ರಶಸ್ತಿ

(ಕಥೆ ಕಾದಂಬರಿಗಳಿಗಾಗಿ)

ಶ್ರೀ ಕಲ್ಲೇಶ ಕುಂಬಾರ

ಅವರ "ಉರಿಯ ನಾಲಿಗೆಯ ಮೇಲೆ" (ಕಥಾ ಸಂಕಲನ) ಪುಸ್ತಕವು ೨೦೧೦ ರಲ್ಲಿ ಪ್ರಕಟವಾದ ಶ್ರೇಷ್ಠ ಕಥೆಗಳ ಕೃತಿಯೆಂದು ನಿರ್ಣಯಿಸಿ ಈ ದತ್ತಿ ಪ್ರಶಸ್ತಿಯನ್ನು ನೀಡಿ ಬೆಳಗಾವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನವು ಗೌರವಿಸುತ್ತದೆ.

ದಿನಾಂಕ : ೨೫-೧೨-೨೦೧೧

ಶಿರೀಷ ಜೋಶಿ
ಕಾರ್ಯದರ್ಶಿ

ವಾಮನ ಹುಯಿಲಗೋಳ
ಅಧ್ಯಕ್ಷರು

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

GULBARGA

ಪ್ರಸಾರಾಂಗ

ದಿ. ಜಯತೀರ್ಥ ರಾಜಪುರೋಹಿತ ಸ್ಮಾರಕ ದತ್ತಿ ಕನ್ನಡ ಕಥಾಸ್ಪರ್ಧೆ - ೨೦೦೪

ಪ್ರಶಸ್ತಿ ಪತ್ರ

ಗುಲಬರ್ಗಾ ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ ದಿ. ಜಯತೀರ್ಥ ರಾಜಪುರೋಹಿತ ಸ್ಮಾರಕ ದತ್ತಿ ರಾಜ್ಯ ಮಟ್ಟದ ಕನ್ನಡ ಕಥಾ ಸ್ಪರ್ಧೆಯಲ್ಲಿ

ಶ್ರೀ / ಶ್ರೀಮತಿ ಕಲ್ಲೇಶ ಕುಂಬಾರ .... ಅವರ

ಕಥೆ [illegible] .... ಉತ್ತಮ / ~~[illegible]~~

~~[illegible]~~ ಪತ್ರವನ್ನು ನೀಡಲಾಗಿದೆ.

ಜನವರಿ ೨೦೦೬


ಕನ್ನಡ ಯುವಜನ ಕ್ರಿಯಾ ಸಮಿತಿ, ಹಾನಗಲ್ಲ
ಡಾ. ಪಾಟೀಲ ಪುಟ್ಟಪ್ಪ
ಕಥಾ ಪುರಸ್ಕಾರ - ೨೦೦೭


ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ ಚಾಮರಾಜಪೇಟೆ ಬೆಂಗಳೂರು - ೧೮
ಪ್ರಶಸ್ತಿಪತ್ರ
ಕನ್ನಡ ಸಾಹಿತ್ಯ ಪರಿಷತ್ತು ೨೦೦೭-೦೮ರಲ್ಲಿ ಏರ್ಪಡಿಸಿದ್ದ
ದತ್ತಿನಿಧಿ ಪುಸ್ತಕ ಸ್ಪರ್ಧೆಯಲ್ಲಿ ಪುರುಷ ದಾರಿಯ ಮೇಲೆ
ಎಂಬಕೃತಿಗೆ ಶ್ರೀ ಕಲ್ಲೇಶ್ ಕುಂಬಾರ್ ಅವರು
ಡಾ|| ಆರ್.ಸಿ. ಗಲಗಲಿ ದತ್ತಿ ಪ್ರಶಸ್ತಿಯನ್ನು ಪಡೆದಿರುತ್ತಾರೆ.
ದಿನಾಂಕ : ೨೭.೦೩.೨೦೦೮
ವೆಂಕಟೇಶ ಎ ಮಾಚಕನೂರ
ಅಧ್ಯಕ್ಷಾಧಿಕಾರಿಗಳು

ಲೇಖಕರ ಅಪರೂಪದ ಭಾವ ಚಿತ್ರಗಳು



ಶ್ರೀ ಕಲ್ಲೇಶ್ ಹಾಗೂ ಸೌ. ಕಾಶವ್ವ



ಕಲ್ಲೇಶ್ ಕುಂಬಾರ್‌ರ ಕುಟುಂಬ



ಕರ್ನಾಟಕ ಸಾಹಿತ್ಯ ಅಕಾಡೆಮಿಯು ಶ್ರವಣ ಬೆಳಗೊಳದಲ್ಲಿ ಹಮ್ಮಿಕೊಂಡಿದ್ದ ಕಥಾ ಕಾರ್ಯಾಗಾರ ಸಂದರ್ಭದಲ್ಲಿನ ಚಿತ್ರ.



ಶಾಖಾ ಗ್ರಂಥಾಲಯ ತೇರದಾಳದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಸಂದರ್ಭದಲ್ಲಿ ಕವಿಗೋಷ್ಠಿ ಹಮ್ಮಿಕೊಂಡಾಗಿನ ಚಿತ್ರ.



ಹಿರಿಯ ಕಥೆಗಾರ ಡಾ.
ಅಮರೇಶ ನುಗಡೋಣಿ
ಮತ್ತು ಗೆಳೆಯರೊಂದಿಗೆ

'ಉರಿಯ ನಾಲಿಗೆಯ ಮೇಲೆ'
ಕಥಾ ಸಂಕಲನದ ಬಿಡುಗಡೆಯ
ಸಂದರ್ಭದಲ್ಲಿ ಸಿದ್ಧೇಶ್ವರ ಶ್ರೀ
ಮತ್ತು ಡಾ. ವ್ಹಿ. ಎಸ್. ಮಾಳಿ
ಅವರೊಂದಿಗೆ





ಪಾಮು ಕಥಾ ಪ್ರಶಸ್ತಿ
ಪಡೆದಾಗಿನ ಚಿತ್ರ

ಕರವೇ ನಲ್ನುಡಿ ಕಥಾ
ಪ್ರಶಸ್ತಿ ಪಡೆದಾಗ
ನಾರಾಯಣ ಗೌಡರೊಂದಿಗೆ



ಆಕರ ಗ್ರಂಥಗಳು

ಆಕರ ಗ್ರಂಥಗಳು

೧) ಕನ್ನಡ ಸಾಹಿತ್ಯ ಚರಿತ್ರೆ : ರಂ. ಶ್ರೀ. ಮುಗಳಿ :: ಉಷಾ ಸಾಹಿತ್ಯ ಮಾಲೆ. ಮೈಸೂರು. ೧೯೫೩.

೨) ಕರ್ನಾಟಕದ ಸಾಂಸ್ಕೃತಿಕ ಸಂಘರ್ಷ : ಗೀತಾ ಬಿ. ಎಸ್. :: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೮

೩) ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ : ಡಾ. ಎನ್. ಕೆ. ಕೋದಂಡರಾಮಯ್ಯ :: ಗಾಯತ್ರಿ ಸ್ಮಾರಕ ಗ್ರಂಥ ಮಾಲೆ, ಮೈಸೂರು. ೧೯೬೯.

೪) ಜಾತಿಗಾರರ ಜಾತಕ : ಜ್ಯೋತಿ ಹೊಸೂರ :: ಕಾಲಗತಿ ಪ್ರಕಾಶನ, ರಾಯಬಾಗ. ೧೯೮೫.

೫) ಜಾನಪದ ಅಲೆಗಳು : ಸಂಗಮೇಶ ಬಿರಾದಾರ :: ಗೆಳೆಯರ ಬಳಗ, ತುಂಗಳ. ೨೦೧೦.

೬) ಜಾನಪದ ಸಾಂಸ್ಕೃತಿಕ ಆಯಾಮುಗಳು : ರಾಮಚಂದ್ರಗೌಡ ಹಿ.ಸೆ. :: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೬.

೭) ಪ್ರಾಚೀನ ಭಾರತದ ಚರಿತ್ರೆ : ಡಿ. ಟಿ. ಜೋಶಿ :: ವಿಧ್ಯಾನಿಧಿ ಪ್ರಕಾಶನ, ಗದಗ. ೨೦೦೩–೦೪

೮) ಬಂಡಾಯ ಜಾನಪದ : ಬಸವರಾಜ ಸಬರದ :: ಪ್ರಸಾರಂಬ. ಕನ್ನಡ ವಿಶ್ವ ವಿಧ್ಯಾಲಯ, ಹಂಪಿ. ೨೦೦೬.

೯) ಬಂಡಾಯ ದಲಿತ ಸಾಹಿತ್ಯ : ಡಾ. ಪುರುಷೋತ್ತಮ ಬಿಳಿಮಲೆ :: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೯.

೧೦) ಮೂರು ಉಪನ್ಯಾಸಗಳು : ಗೋವಿಂದ ಪೈ :: ಕನ್ನಡ ಸಂಶೋಧನ ಸಂಸ್ಥೆ, ದಾರವಾಡ. ೧೯೪೦.

೧೧) ಮಲೆಗಳಲ್ಲಿ ಮದುಮಗಳು : ಕುವೆಂಪು :: ಉದಯರವಿ ಪ್ರಕಾಶನ, ಮೈಸೂರು. ೧೯೯೮.

೧೨) ಸಂಶೋಧನೆ : ಡಾ. ಎಂ. ಚಿದಾನಂದ ಮೂರ್ತಿ :: ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು. ೧೯೮೪ (ದ್ವಿ. ಮು).

೧೩) ಹಳ್ಳಿಯ ಚಿತ್ರಗಳು ಮತ್ತು ಇತರ ಪ್ರಬಂಧಗಳು : ಗೋರುರ ರಾಮಸ್ವಾಮಿ ಅಯ್ಯಂಗಾರ :: ಗೀತಾ ಬುಕ್ ಹೌಸ. ಮೈಸೂರು. ೧೯೮೦